

# ಅಖಿಲ ಭಾರತ ಪತ್ರಿಕೆ

ಜನವರಿ 2023

## ಶ್ರೀ ಅರವಿಂದರ 'ದ್ರಷ್ಟಾರ ಕಾವ್ಯ'

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ರೇಖಿಸುತ ಪೂರ್ಣ ವಿಶ್ವವನು ಸ್ವಯಂ ಸಮಾವೇಶದೆಡೆಗೆ ತಾನು.
ಉನ್ಮನವು ಸಾಗಿ ದರ್ಶಿಸಿತು, ಅವಿತು ಕುಳಿತಿರುವ ಲೋಕಗಳನು,
ಪವನವದು ಹಿಗ್ಗಿ ವರ್ಣಗಳ ಬುಗ್ಗಿ ಆಕರ್ಷ–ಗರ್ಭ ರೂಪು
ಇಡಾ–ಪಿಂಗಳದಿ ತೀವ್ರ ಸಂಚಲನ, ಕಂಪನದಿ ಸೂಸಿ ಕಂಪು
ಸ್ವರ್ಗದಾ ಮಧುರ – ಮಧುವನ್ನು ಜಿಹ್ವೆ ತಾಳ್ಮೆಯೊಳು ನಿಲಿಸಿ ನೆಲೆಸಿ.
ವಹನ ಸಾಧನೆಯ ಅಲೆಯು ತಾನಂದು ವಿಶ್ವ ಸೌಷಮ್ಯವಾಸಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 2 ಪುಟ 30)**

**ಅಖಿಲ ಭಾರತ ಪತ್ರಿಕೆ**
**ಜನವರಿ 2023**

ಸಂಪುಟ: 33 ಸಂಚಿಕೆ: 01

**ಪರಿವಿಡಿ**

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಶ್ರೀ ಅರವಿಂದರ 'ದ್ರಷ್ಟಾರ ಕಾವ್ಯ'

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

ಅನುಸ್ಪಂದನ:
**ಶ್ರೀ ಪುಟ್ಟು ಕುಲಕರ್ಣಿ**

## ಭಾಗ 1

1. ಒಂದು ಬೆಳಗು .......... 12
2. ವಿಜ್ಞಾನಘನಸತ್ತೆಯ ದರ್ಶನ .......... 13
3. ಚಂದ್ರಪ್ರಭೆಯ ಒಳಗೆ .......... 17
4. ದೇವನಾ ಪರಿಶ್ರಮ .......... 20
5. ರೂಪಾಂತರ .......... 26
6. ಸ್ವರ್ಣ ಜ್ಯೋತಿ .......... 27
7. ಅಜ್ಞೇಯದ ಆಹ್ವಾನ .......... 28
8. ಉಷೆ ಬಂದಳೀಗ ಅವಕಾಶದೊಳಗೆ .......... 30
9. ತಲ್ಲೀನ ಮೌನದಲಿ .......... 32
10. ಪರಿಶುದ್ಧವಾದ ಆಕಾಂಕ್ಷೆಯೊಂದು ಉಸಿರುಸಿರಿನಲ್ಲಿ ಶುದ್ಧ .......... 33
11. ವಾಮನ ನೆಪೋಲಿಯನ್ .......... 34
12. ವ್ಯಾಘ್ರ ಮತ್ತು ಹರಿಣ .......... 37

## ಭಾಗ 2

1. ಚಿನ್ಮಯದ ದೇವ ಸರ್ವತೋಮುಖನಾಗಿ .......... 39
2. ಆ ಬ್ರಹ್ಮಭಾವದಾ ಮಹತ್–ಚಿದ್ಬೀಜ .......... 42
3. ಭವಿಷ್ಯದ ಅತಿಮಾನವ–ಸ್ವರೂಪ .......... 45

4. ಅಕ್ಷರದ–ಜ್ಯೋತಿ–ನಕ್ಷತ್ರ–ಗಡಣ ........................ 46
5. ಧರ್ಮಸಂಕ್ರಾಂತ ನಾದ–ಮಂಡಳವು ............... 48
6. ಸರ್ವಶಕ್ತನ ಜ್ವಲಿತಾಗ್ನಿ ಜ್ವಾಲೆಗೆಜ್ಜೆ .................... 49
7. ಶಕಲದಾಂತರ್ಯ ತೇಜಕಾಂತಿ ........................ 52
8. ದಿವದ ಅನುಭೂತಿ ಶಾಖೆ ............................... 52
9. ರಸಸಿದ್ಧಿ ........................................................... 52
10. ಆ ಪಚ್ಚೆ ಹ್ಲಾದಾನುಹ್ಲಾದ ............................... 53
11. ಆತ್ಮಕಿದೆ ಸೂಕ್ಷ್ಮ– ಭೂಕಂಠ –ಸೇತು ............. 54
12. ನಭ–ನಿಯತಿಯ ಅನುಕರಣೆ .......................... 57
13. ದಿವ್ಯತ್ವದೆಡೆಗೆ ಸಂಜ್ಞೆ...................................... 58
14. ಜೀವನವು ದಿವ್ಯವಾದರೆ ಮರಣವು ದಿವ್ಯತ್ವ .... 59
15. ಜೊತೆಜೊತೆಗೆ ಋತವು ಪ್ರಕೃತಿಯಾ ಪದದ ... 61
16. ನಿನದದಲಿ ತಂತು–ಸ್ವನನ ............................... 63
17. ಓ ಸೂರ್ಯ ನಾದ ...................................... 64
18. ಅಭಿಷಿಕ್ತಗೊಂಡ ಅಂಗ–ಪ್ರತ್ಯಂಗ .................... 65
19. ಅತಿಮಾನವನ ಉದಯ ............................... 67
20. ಇಂತಿದೋ ಭವವು ಶಿವಮಯವೆ ಆಗಿ......... 70
21. ವೈರಾಜ್ಯ ವ್ಯಾಪ್ತಿಯಲ್ಲಿ .................................... 71

**ವಾರ್ತಾಪತ್ರ** 72

## ಸಂಪಾದಕೀಯ

## ದ್ರಷ್ಟಾರ ಕಾವ್ಯ

ಅನುಭವದ ಪದ್ಯ, ಅನುಭಾವದ ಕವನ/ವಚನ ಹಾಗೂ ದರ್ಶನದ ಕಾವ್ಯದ ಹಂತದಲ್ಲಿ ಮಾನವನ ಅಭಿವ್ಯಕ್ತಿಗಳು ಆಯಾ ಕಾಲದಲ್ಲಿ ವಿಕಸನಕ್ಕೊಂದು ಆಯಾಮವನ್ನು ರೂಪಿಸುತ್ತವೆ. ಈ ರೀತಿಯಾಗಿ ಪ್ರಕಟಗೊಂಡ ಘಟನೆಗಳು, ಜೀವನದ ಗತಿಗೆ ತನ್ನದೇ ಆದ ಪಥವೊಂದನ್ನು ನಿರ್ಮಿಸುತ್ತ ನಡೆಯುತ್ತದೆ. ಅದೇ ಮತ್ತೆ ಮುಂದುವರೆದು "ಗುರಿ"ಯತ್ತ ಸಂಕೇತ ಕೊಡುತ್ತ, ಗುರಿಯಲ್ಲಿ ಲೀನವಾಗುತ್ತ, ಲೀನವಾಗುತ್ತ ರೂಪಾಂತರಗೊಳ್ಳುತ್ತ ವಿಕಸನದ ಅಲೆಯನ್ನು ಅವಿರತಗೊಳಿಸುತ್ತವೆ. ವಾಸ್ತವಕ್ಕೆ ಸಾಂತ್ವನವನ್ನು ಹೇಳುವ ಕ್ರಿಯೆಯನ್ನು ಗದ್ಯ ಕೈಕೊಂಡು ಸಂತೃಪ್ತಿ ಹೊಂದುತ್ತದೆ. ಏಕೆಂದರೆ ಅದಕ್ಕೆ ವರ್ತಮಾನದ ಸೂಕ್ತತೆಯೇ ಮುಖ್ಯವಾಗಿರುತ್ತದೆ. ಪ್ರಥಮ ಚಿಕಿತ್ಸೆಯ ತಾತ್ಕಾಲಿಕ ಶಮನವೇ ಅದಕ್ಕೆ ಸಾಕಾಗುವ ಮನೋಭೂಮಿಕೆ ಹೊಂದಿರುತ್ತದೆ. ಇದು ನೋವು ನಿವಾರಕ ಗುಳಿಗೆಗಳ ಹಾಗೆ – ನೋವನ್ನು ನಿವಾರಿಸುವ ಬದಲು ನೋವಿನ ಸಂಕೇತವನ್ನು ಮೆದುಳಿಗೆ ತಲುಪಿಸುವ ಕ್ರಿಯೆಗೆ ತಡೆಯೊಡ್ಡಿ ಶಮನಕಾರಿಯಾದಂತೆ ಕಾಣುತ್ತವೆ.

ಪದ್ಯವಾಗಲೀ ವಚನವಾಗಲಿ ಅವು ಕಾಲಾತೀತವಾಗಿದ್ದರೆ ಮಾತ್ರ "ಕಾವ್ಯ"ವಾಗಬಲ್ಲವು. ಬೌದ್ಧಿಕ ಆನಂದಕ್ಕಿಂತ ಮಾನಸಿಕ ತೃಪ್ತಿ ತರುವದು ಅನುಭಾವದ ಕವನ. ಈ ಹಂತದಲ್ಲಿ ಅಭಿವ್ಯಕ್ತಗೊಂಡ ಯಾವುದೇ ಅಭಿವ್ಯಕ್ತಿಯೂ ಸಹಿತ ವಾಸ್ತವದ ತಲ್ಲಣಗಳಿಗೆ ಕಾರಣವಾಗಿರುವ ಮೂಲ ಝರಿಯಲ್ಲಿ ನಡೆದ ವಿಚಲನೆಯ ಬಗೆಗೆ ತಿಳಿಸುತ್ತ, ವರ್ತಮಾನಕ್ಕೆ ಸಮಾಧಾನವನ್ನು ಹೇಳುತ್ತ ಜೊತೆಗೆ ಭವಿಷ್ಯದ ಸಲುವಾಗಿ ಪಥವೊಂದನ್ನು ನಿರ್ಮಿಸಬೇಕಾದ ಕರೆಯನ್ನೂ, ಕಳಕಳಿಯನ್ನೂ ಹೊಂದಿರುತ್ತವೆ. ಆದರೆ ದರ್ಶನದ ಕಾವ್ಯವಾದರೊ ಇತಿಹಾಸ ಮತ್ತು ಭವಿಷ್ಯಗಳಲ್ಲಿ ರೂಪಾಂತರಗೊಳ್ಳುತ್ತ ವಿಕಸನದ ನವನವೀನ ಆಯಾಮನ್ನು ಪಡೆಯುತ್ತ ಸಾಗುತ್ತಿರುವ "ಸಂಸ್ಕೃತಿಗೆ" ಸದಾ ಪೂರಕವಾಗಿರುವ "ವಿಶ್ವಶಕ್ತಿಯು" ಹೇಗೆ "ಕೃತುಶಕ್ತಿ"ಯಂತೆ ಆಧಾರವಾಗಿದೆ ಎನ್ನುವದನ್ನು ವಿವರಿಸುತ್ತದೆ.

ಪದ್ಯ ಬುದ್ಧಿಗೆ ಆಕರ್ಷಕ; ಕವನ ಮನಕ್ಕೆ ಉಲ್ಲಾಸದಾಯಕ; ಕಾವ್ಯ ಆತ್ಮ ತೃಪ್ತಿಯ ಹಂತ. ಈ ಸೂತ್ರದಲ್ಲಿ ನಾವಿಂದು ಅಭಿವ್ಯಕ್ತಿಗಳನ್ನು ಗಮನಿಸಬೇಕಾದ ಹಂತವಿದೆ ಎನಿಸುತ್ತಿದೆ. ಕಾವ್ಯವೂ ಸಹಿತ ಪದ್ಯ ರೂಪದಲ್ಲಿಯೇ ಪ್ರಕಟಗೊಳ್ಳುತ್ತಿದೆ ಎನ್ನುವದು ನಿರ್ವಿವಾದ. ಆದರೆ ಅಭಿವ್ಯಕ್ತಗೊಂಡ ಪದ್ಯ/ವಚನವು ಕಾವ್ಯವಾಗಿದೆಯೇ

ಎನ್ನುವುದರ ವಿಷಯದಲ್ಲಿ ನವೀನ ಮಾನಕಗಳ ಬಗೆಗೆ ಯೋಚಿಸುವ ಕಾಲ ಇದಾಗಿದೆ. ತೀರ ಭವಿಷ್ಯದ ಬಗೆಗೇ ನಿಖರವಾದ ದೃಷ್ಟಿಕೋನ ಹೊಂದಿದ್ದರೂ ಸಹಿತ ವರ್ತಮಾನಕ್ಕೆ ಅವನು ವಿಕ್ಷಿಪ್ತನಾಗುತ್ತಾನೆ; ಬರೀ ಇತಿಹಾಸವನ್ನೇ ಆಧಾರ–ಭೂತವನ್ನಾಗಿಸಿಕೊಂಡರೆ "ಹಳಹಳಿಕೆ' ಎಂದು ಹೀಯಾಳಿಸಲಾಗುತ್ತದೆ. ಈ ದ್ವಂದ್ವವನ್ನರಿತ ಜಾಣವಲಯ ಮಧ್ಯಂತರ ದಾರಿಯಲ್ಲಿ ವಾಸ್ತವದಲ್ಲಿ ಗುರುತಿಸಿಕೊಳ್ಳಲು "ತಾತ್ಕಾಲಿಕ ಶಮನಕಾರಿ ನಡೆಯ" ವಿಜೃಂಭಣೆಗಳನ್ನು ಕಾಣಿಸತೊಡಗಿದರು.

ಈ ವಿಜೃಂಭಣೆಯ ಮೆರವಣಿಗೆಗಳ ಮೋಡಗಳ ಹಿಂದೆ **"ಆತ್ಮ ತೃಪ್ತಿಯ ಕಾವ್ಯ"**ವು ತನ್ನ ಪಾಡಿಗೆ ತಾನು ನಿರ್ಮಾಣಗೊಳ್ಳುತ್ತ ಬಂದರೂ, ಅದರ ಸ್ಪಂದನದ ಸೂಕ್ಷ್ಮತೆಯನ್ನು ಪರಿಗ್ರಹಿಸುವ ಕ್ರಿಯೆ ಮಾತ್ರ ಕ್ಷೀಣವಾಗತೊಡಗಿತು. ಇದಕ್ಕೆ ಪೂರಕವಾಗಿ ರೂಪುಗೊಂಡ ಆಂಗ್ಲ ಭಾಷೆಯ ಪ್ರಾಧಾನ್ಯತೆ, ವೈಜ್ಞಾನಿಕ ಹೆಸರಿನಲ್ಲಿ ಹಾಗೂ ನವೀನ ಜಗತ್ತಿನ ಸಾಮಾಜಿಕ ಮತ್ತು ಔದ್ಯಮಿಕ ಪ್ರಗತಿಯ ಯಾಂತ್ರಿಕ ಅವಲಂಬನೆಯ ಆಕರ್ಷಣೆಯ ಸಲುವಾಗಿ ರೂಪಿತಗೊಂಡ ಶಿಕ್ಷಣ ಪದ್ಧತಿ, ಇವುಗಳನ್ನು ಮತ್ತಷ್ಟು ಸಂಕೀರ್ಣಗೊಳಿಸುತ್ತಾ ನಡೆದವು. ಈ ತೀವ್ರತೆರನಾದ ಸಂಘಟವು, ಸಾಂಸ್ಕೃತಿಕ ಬದುಕಿಗೆ ತೀವ್ರ ವಿಚಲನೆಯನ್ನು ತಂದರೂ, ಅದನ್ನು ಕಡೆಗಣಿಸಿ, ತೇಪೆ ಹಾಕಿ, ಆಡಳಿತ ವಲಯವನ್ನು ಸಂತುಷ್ಟಗೊಳಿಸಲು ಆಡಳಿತ ವಲಯವೇ ಬಯಸುತ್ತಿದ್ದ "ಮೌಲ್ಯಗಳನ್ನೇ" ಪದ್ಯದಲ್ಲಿಯೂ ತರುವ ಕ್ರಿಯೆ ನಡೆಯಿತು. ಅಷ್ಟೇ ಅಲ್ಲದೇ ಈ ತೆರನಾದ ಅಭಿವ್ಯಕ್ತಿಗಳೇ ಮುಂದಿನ ಪೀಳಿಗೆಗೆ ಮಾರ್ಗದರ್ಶಿಯಾಗಲೇಬೇಕು ಎನ್ನುವ ಧಾವಂತದಲ್ಲಿ "ಬೋನ್ಸಾಯಿ" ಮಾದರಿಯ ಪಠ್ಯಕ್ರಮದಲ್ಲಿ, ಪೀಳಿಗೆಗೆ ಕಣ್ಪಟ್ಟಿ ಕಟ್ಟಿ ಆಚೀಚೆ ನೋಡದಂತೆಯೂ ನೋಡಿಕೊಳ್ಳಲಾಯಿತು.

ಇಂತಹ ಸಂಘರ್ಷಮಯದಲ್ಲಿಯೂ "ಕಾವ್ಯ" ಮಾತ್ರ ತನ್ನ ಸಹಜ ಗುಣವಾದ ವಿಕಾಸದ ಹಾದಿಯಲ್ಲಿ ಮೌನವಾಗಿ ತನ್ನ ಪಯಣವನ್ನು ಅವಿರತವಾಗಿ ಮುಂದುವರೆಸಿತ್ತು, ಮುಂದುವರೆಸುತ್ತದೆ ಕೂಡ. 19ನೇ ಶತಮಾನದ ಒಂದನೇ ಮಹಾಯುದ್ಧ, ಎರಡನೇ ಮಹಾಯುದ್ಧ, ಭಾರತದ (ಏಶಿಯಾದ ಬಹತೇಕ ರಾಷ್ಟ್ರಗಳ) ಸ್ವಾತಂತ್ರ್ಯ ಹೋರಾಟಗಳ ಬೌದ್ಧಿಕ ತುಮುಲಾಟಗಳ ಮಧ್ಯದಲ್ಲಿಯೇ ಸೃಷ್ಟಿಗೊಂಡ ಮುದ್ದಣನ "ರಾಮಾಶ್ವಮೇಧ", ಕುವೆಂಪುರವರ "ರಾಮಾಯಣ ದರ್ಶನ", ಗೋಕಾಕರ "ಭಾರತ ಸಿಂಧು ರಶ್ಮಿ", ಭೂಸನೂರು ಮಠರವರ "ಭವ್ಯ ಮಾನವ"ದಂತಹ ಕಾವ್ಯಗಳು ಕನ್ನಡದ ನೆಲದಲ್ಲಿ "ಕಾಲಾತೀತ"ವಾಗುವ "ಕಾವ್ಯ"ದಲ್ಲಿಯೇ ಪ್ರಕಟಗೊಂಡದ್ದು, ಸಂಸ್ಕೃತಿಯ ಪ್ರಗತಿಯ ಪಥದ ಬಗೆಗೆ

ಭರವಸೆಯ ಕಿರಣಗಳನ್ನು ಮೂಡಿಸಿವೆ. ಇದೇ ಸಮಯದಲ್ಲಿ ಇಡೀ ಭಾರತವನ್ನು, ಭಾರತದ ಸಾಂಸ್ಕೃತಿಕ ನೆಲೆಗಟ್ಟಿಗೆ ಆಧಾರವಾಗಿರುವ "ವಿಶ್ವಶಕ್ತಿಯ" ಅನಂತತೆಯನ್ನು, ಅದರ ವಿಚಲನೆಯಲ್ಲಾದ ಘಟನೆಗಳು ರೂಪಿಸಿದ ಅಲ್ಲೋಲ–ಕಲ್ಲೋಲಗಳನ್ನು ತಹಬಂದಿಗೆ ತಂದು, ಅವುಗಳನ್ನು ರೂಪಾಂತರಿಸಿ, ಮತ್ತೆ ಪರಿಷ್ಕರಿಸಿ, ಮಾನವ ಪ್ರಜ್ಞೆಯ ಪಥದಲ್ಲಿ ಸಾಗುವ ಅಭಿವ್ಯಕ್ತಿಯನ್ನಾಗಿಸಿ ಪ್ರಕಟಗೊಂಡದ್ದು ಶ್ರೀ ಅರವಿಂದರ "ಸಾವಿತ್ರೀ".

ವೇದ–ಉಪನಿಷತ್ತುಗಳ ನಂತರ ರಾಮಾಯಣ ಮತ್ತು ಮಹಾಭಾರತಗಳು ಹೇಗೆ ಕಾಲಾತೀತವಾದ ಮೌಲ್ಯಗಳನ್ನು, ಅವುಗಳು ನಿರ್ಮಾಣಗೊಂಡ ಅವಧಿಯಿಂದ ಇಂದಿನವರೆಗೂ ಪೋಷಿಸುತ್ತ ಬರುತ್ತಿವೆಯೋ, ಅದೇ ತೆರನಾದ ಮತ್ತೊಂದು ಮಹಾಕಾವ್ಯದ ಅವಶ್ಯಕತೆಯನ್ನು ಪೂರೈಸಲೋಸುಗವೇ ಎನ್ನುವಂತೆ "ಸಾವಿತ್ರಿ" ಅವತರಿಸಿತು. ಆದರೆ "ಸಾವಿತ್ರಿ" ಭಾರತೀಯ ಮನಸ್ಸಿಗೆ ತಕ್ಷಣಕ್ಕೇ ಸ್ಪಂದಿಸದ ಭಾಷಾ ವ್ಯವಸ್ಥೆಯಲ್ಲಿ ಸೃಷ್ಟಿಗೊಂಡಿದ್ದು ನಿಗೂಢವಾಗಿದೆ. ಹೀಗಾಗಿ ಈ ಸಾವಿತ್ರಿಯಲ್ಲಿ ನಿರೂಪಿತವಾದ ಮೌಲ್ಯಗಳನ್ನು ಮತ್ತೆ ಸ್ಥಳೀಯ ಭಾಷೆಗಳಿಗೆ ತರುವ ಮನಸ್ಸುಗಳು, ಈ ಜ್ಞಾನ ಯಜ್ಞದಲ್ಲಿ ತೊಡಗಿಕೊಂಡಿವೆ.

ಮಾನವನ ಜೀವನದ ವಿಕಸನದ ಆದಿಯನ್ನೂ, ಅದಕ್ಕೆ ಕಾರಣವಾದ ವಿಶ್ವಶಕ್ತಿಯನ್ನೂ, ಅದರ ವಿಕಾಸದ ಆಯಾಮಗಳನ್ನೂ ಮಂತ್ರಸದೃಶ ರೂಪದಲ್ಲಿ ಕಡೆದಿರಿಸಿದ, ಸಾವಿತ್ರಿಯ ಆಂತರ್ಯದ ತುಡಿತವೇ ಕಾವ್ಯವಾಗಿ ರೂಪಣೆಗೊಂಡಿರುವದನ್ನು ನೋಡಬಹುದಾಗಿದೆ. ಇದರ ನೇರಾನೇರ ವಿವರಣೆಯನ್ನು ವರಕವಿ ದ.ರಾ. ಬೇಂದ್ರೆಯವರು ತಮ್ಮ "ನಾಕುತಂತಿಯಲ್ಲಿ" "ಮತ್ತೆ ಶ್ರಾವಣಾ ಬಂದಾ" ಕವನದಲ್ಲಿ ಸ್ಪಷ್ಟವಾಗಿ ಕಾಣಬಹದುದು.

**"ಶ್ವೇತಾರವಿಂದಾ ರಕ್ತಾರವಿಂದಾ**
**ಶ್ರಾವಣಾ–ಮಘಾ–ಯೋಗಾ ತಂದಾ**
**ಮತ್ತೆ! ಶ್ರಾವಣಾ ಬಂದಾ"**

– (ಪುಟ 3 /13 ನೇ ಮುದ್ರಣ)

ಇಲ್ಲಿ ಶ್ವೇತಾರವಿಂದ ಎಂದರೆ ಶ್ರೀಮಾತೆ, ರಕ್ತಾರವಿಂದರೆ ಶ್ರೀ ಅರವಿಂದರು. ಅರವಿಂದವೆಂದರೆ ಕಮಲವೂ ಹೌದು. ಭಾರತೀಯರಿಗೆ ಪರಮಪೂಜ್ಯ ಪವಿತ್ರ ಪುಷ್ಪ. ಧಾರ್ಮಿಕ ಪ್ರತಿಮೆ. ಈ ಶ್ವೇತಾರವಿಂದ ಹಾಗೂ ರಕ್ತಾರವಿಂದದ ವಿಷಯವನ್ನು ಶ್ರೀ ಅರವಿಂದಾಶ್ರಮದ ಶ್ರೀಮಾತೆಯವರೇ ಬರೆದಿದ್ದಾರೆ. ಶ್ವೇತ ಕಮಲವು

ಊರ್ಧ್ವದೆಡೆಯಿಂದ ಅವತರಣಗೊಂಡು ಬರುವ ಚಿತ್ಸೂರ್ಯನ ಕಿರಣದ ಪ್ರವಾಹದ ವರ್ಣ. ಇದನ್ನು ಆಂಗ್ಲ ಭಾಷೆಯಲ್ಲಿ Cosmic Consciousness ಎನ್ನುತ್ತಾರೆ. ಋತ–ಚೇತನವೆಂದು ಇದನ್ನು ಗುರುತಿಸಲಾಗುತ್ತಿದೆ. ಈ ಬ್ರಹ್ಮಾಂಡದಲ್ಲಿನ ಋತವು ಭೂಮಿಗೆ ಅವತರಿಸಿ ಬರುವಾಗ, ಈ ಭೂವಲಯದ ಭೌತಿಕ ಅಂಶಗಳಿಂದಾಗಿ ವರ್ಣವಿನ್ಯಾಸಗೊಂಡು ರಕ್ತ(ಕೆಂಪು)ವರ್ಣದ್ದಾಗಿ ಕಾಣುತ್ತದೆ. ಈ ಹಂತವು ಶ್ರೀ ಅರವಿಂದರ ಸಂಕೇತವಾಗಿದೆ.

ಶ್ರಾವಣವೆಂದರೆ ಋತವು ಬೆಳಕಿನ ಧಾರೆಯಾಗಿ ಭೂಮಿಯ ಮೇಲೆ ಪ್ರವಹಿಸುವ ಕಾಲ. ಇದು ನಿತ್ಯವೂ ಘಟಿಸುವ ಕ್ರಿಯೆಯಾಗಿದೆ. ಸೂರ್ಯನು ನಡುನೆತ್ತಿಯ(ಅಪರಾಹ್ನ) ಮೇಲೆ ಇದ್ದಾಗ ಬರುವ ಅಭಿಜಿತ್ ಮುಹೂರ್ತ–ವಾಗಿರುತ್ತದೆ. ಇದು ಶ್ರಾವಣ ಮಾಸದಾದ್ಯಂತವೂ ಘಟಿಸುತ್ತಿರುತ್ತದೆ. ತೈತ್ತಿರೀಯ ಉಪನಿಷತ್ತಿನಲ್ಲಿ ಮೂರನೇ ಅಷ್ಟಕದಲ್ಲಿ ಈ ವಿಷಯದ ಸೂಕ್ತವಿದೆ. ಇಂತಹ ಶುಭ ಮುಹೂರ್ತದಲ್ಲಿ ಅಭಿವ್ಯಕ್ತಗೊಂಡ ಕಾವ್ಯವು ಕಾಲಾತೀತವಾಗಿರುತ್ತದೆ ಎಂದು ಹೇಳಿರುವ ಬೇಂದ್ರೆಯವರು “ಹಾಡೋ ಕವನಾ” ಎಂದು ನಾಕುತಂತಿಯ ಶ್ರುತಿಯನ್ನು ಹೊಂದಿಸುತ್ತಾರೆ.

ಯೋಗ ಸಾಧನೆಯ ಕವನ ಮಾರ್ಗ, ಯೋಗವೇ ಕಾವ್ಯ ಎನ್ನುವ ಸಾಲಿನಲ್ಲಿ ಯುಗ ಧರ್ಮದ ಮೌಲ್ಯದಲ್ಲಿನ ಉತ್ಕ್ರಾಂತಿಯ ಫಲಿತಾಂಶದಿಂದಾಗಿ ಪರಿವರ್ತನಗೊಳ್ಳುವ ಮೂಲಕ ಆಯಾ ಯುಗದ ಬೌದ್ಧಿಕ, ಲೌಕಿಕ ಬದುಕಿನ ಆಯಾಮಗಳನ್ನು ರೂಪಿಸುತ್ತಿರುತ್ತವೆ. ಭಾರತೀಯ ಅಭಿವ್ಯಕ್ತಿಯಲ್ಲಿ ರೂಪಣೆಗೊಂಡಿರುವ ಕೃತ–ತ್ರೇತಾ–ದ್ವಾಪರಗಳ ಅವಧಿ ಮುಗಿದು, ಮತ್ತೆ ಕಲಿ ಯುಗವೂ ಮುಗಿದು, ಹೊಸ ಯುಗವೊಂದರ (ಕಲ್ಕಿ ಯುಗದ) ಪ್ರಾರಂಭದ ಅವಧಿಯಲ್ಲಿ ಪ್ರಸ್ತುತ ಜೀವ–ಜಗತ್ತು ಇದೆ ಎನ್ನುವ ಸದ್ಯದ ಮನೋಭೂಮಿಕೆಯಲ್ಲಿ ರಚಿತಗೊಂಡಿರುವ ‘ದ್ರಷ್ಟಾರ ಕಾವ್ಯ’ ಇಲ್ಲಿದೆ.

ಶ್ರೀ ಅರವಿಂದರ ಈ ದರ್ಶನದ ಆಳವಿನ್ನೂ ಎಲ್ಲರಿಗೂ ಲಭ್ಯವಾಗಿಲ್ಲ. ಅದಕ್ಕೆ ಹಲವಾರು ಕಾರಣಗಳೂ ಇವೆ. ಇವುಗಳಲ್ಲಿ ಅತೀ ಮುಖ್ಯವಾಗಿ ಭಾಷೆ. ಶ್ರೀ ಅರವಿಂದರ ಎಲ್ಲ ಅಭಿವ್ಯಕ್ತಿಗಳೂ ಇಂಗ್ಲೀಷಿನಲ್ಲಿಯೇ, ಭಾರತೀಯ ಭಾಷೆಯ ಹೃದಯದ ಸ್ಪಂದನಕ್ಕೆ ಇನ್ನೂ ದಕ್ಕುತ್ತಿಲ್ಲ. ಉತ್ಕ್ರಾಂತಿಯ ಹಂತ ಹಂತಗಳಲ್ಲಿ ಆಯಾಮ ಪಡೆಯುತ್ತ ಸಾಗುತ್ತಿರುವ ಮೌಲ್ಯಗಳು ಒಂದೊಂದು ಯುಗದ ಪ್ರಾಧಾನ್ಯತೆಗೆ ನಾಂದಿ ಹಾಡುತ್ತವೆ. ಆಯಾ ಯುಗದ ಬೌದ್ಧಿಕ, ಲೌಕಿಕ ಹಾಗೂ

ಸಾಂಸ್ಕೃತಿಕ ಜಗತ್ತಿನ ಜೀವನಾಡಿಯಾಗಿ ಮಿಡಿಯುತ್ತಿರುತ್ತದೆ. ಮಾನವನ ಬದುಕಿಗೆ ಆಯಾಮಗಳನ್ನು ರೂಪಿಸುತ್ತದೆ. ಕಲ್ಪದ ಒಂದು ಆವರ್ತ ಮುಗಿದು, ಮತ್ತೊಂದು ಕಲ್ಪದ ಆದಿಯ ಈ ಅವಧಿಯಲ್ಲಿ, ಮಾನವನ ಬದುಕು ಸದಾ ಆದರ್ಶವೆಂದು ಕಂಡುಕೊಂಡ ಕೃತ ಯುಗದ ಆಯಾಮದ ಪುನರ್ ಆಗಮನದ ಮುನ್ಸೂಚನೆಯನ್ನು ಸಾವಿತ್ರಿ ಹೇಳುತ್ತಿದೆ. ಸಪ್ತರ್ಷಿ ಮಂಡಳವು ಮಘಾ ನಕ್ಷತ್ರವನ್ನು ಪ್ರವೇಶಿದಾಗ ಯುಗ ಪರಿವರ್ತನೆಯಾಗುತ್ತದೆ. ಇದು ನಕ್ಷತ್ರ ವರ್ಷದ ಕಾಲಗಣನಾ ಕ್ರಮಾಂಕದಲ್ಲಿ ಇತ್ತು. ಇದೆ. ಈ ವಿಷಯವನ್ನೇ ಈಗಿನ ಆಧುನಿಕ ಖಗೋಳ ಶಾಸ್ತ್ರದ ಸಂಶೋಧನೆಗಳು ಪುರಾವೆ ಒದಗಿಸುತ್ತಿವೆ. ಹೀಗಾಗಿ ಸಾವಿತ್ರಿಯನ್ನು ದರ್ಶನ ಕಾವ್ಯದ ಹಿನ್ನೆಲೆಯಲ್ಲಿಯೇ ಗಮನಿಸಬೇಕಾಗಿದೆ. ಸಂಸ್ಕೃತದಲ್ಲಿದ್ದ ಮಹಾಕಾವ್ಯಗಳು ಇಡೀ ದೇಶದ ಆಯಾ ಪ್ರದೇಶದ ಭಾಷೆಗಳಲ್ಲಿ, ರೂಪಾಂತರಗೊಳ್ಳುತ್ತ ಅಭಿವ್ಯಕ್ತಗೊಂಡಂತೆಯೇ, ಇದೀಗ ಇಂಗ್ಲೀಷ ಭಾಷೆಯಲ್ಲಿರುವ ಸಾವಿತ್ರಿಯೂ ಸ್ಥಳೀಯ ಭಾಷೆಗೆ ರೂಪಾಂತರಗೊಳ್ಳಬೇಕಾಗಿದೆ. ಅದರ ರೂಪು–ರೇಷೆ ಹೇಗಿರಬಹುದು ಎನ್ನುವದನ್ನು, ಈ ಸಂಚಿಕೆಯಲ್ಲಿ ಶ್ರೀಅರವಿಂದರು 1904–10 ರವರೆಗೆ ಬರೆದ ಕವನಗಳಲ್ಲಿ ಹಾಗು 'ಸಾವಿತ್ರಿ'ಯ ದರ್ಶನದ ಸಾಲುಗಳಲ್ಲಿ ರೂಪಿಸಲು ಯತ್ನಿಸಲಾಗಿದೆ.

**ಯೋಗನಿದ್ರೆಯಾ ಪಶ್ಯಂತಿಯಲ್ಲಿ ಹೃದಯಸ್ಥ ವಾಣಿ–ಪ್ರಜ್ಞೆ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6 ಪುಟ 185)**

ಪರಾ–ಪಶ್ಯಂತೀ–ಮಧ್ಯಮಾ–ವೈಖರೀ ಇವು ಮಾನವನಲ್ಲಿ ಅನುರಣನ–ಗೊಳ್ಳುವ ವಾಣಿಯ ರೂಪಗಳು. ಪಶ್ಯಂತೀ ಹಂತದಲ್ಲಿ ಅಂದರೆ ಹೃದಯದಲ್ಲಿ ವಾಣಿಯು ವಿಶ್ವ ನಾದದೊಡನೆ ಸ್ಪಂದನದಲ್ಲಿ ಇರುತ್ತದೆ. ಇದು ಯೋಗಿಕ ಭಾಷೆ. ವೇದಗಳು ಮತ್ತು ಉಪನಿಷತ್ತುಗಳ ಅರ್ಥ ಇಲ್ಲಿ ಮಾತ್ರವೇ ಸಾಧ್ಯವಾಗುತ್ತದೆ.

ಈ ಹಂತದಲ್ಲಿ ರೂಪಿತಗೊಂಡ ವಾಣಿಯು, ಹೀಗಾಗಿ ಹೃದಯದಲ್ಲಿ ಪ್ರಜ್ಞೆ,

ಮಧ್ಯಮಾ ಹಂತ(ಕಂಠ)ದಲ್ಲಿ ಪೂರ್ತಿ ರೂಪ ಪಡೆದುಕೊಂಡು, ವೈಖರೀ ಹಂತದಲ್ಲಿ (ಶಬ್ದ ರೂಪದಲ್ಲಿ) ಪ್ರಕಟಗೊಳ್ಳುವದು. ಇದೇ ವಾಣಿಯು ಲೌಕಿಕದ ಬದುಕಿಗೆ ಮಾರ್ಗದರ್ಶಿ ಸೂತ್ರಗಳನ್ನು ಒದಗಿಸುತ್ತದೆ. ರಾಮಾಯಣ–ಮಹಾಭಾರತ– ಕಾಳಿದಾಸನ ಬರಹಗಳು ಮತ್ತು ಕನ್ನಡದಲ್ಲಿ ಅಲ್ಲಮ ಪ್ರಭುವಿನ ವಚನಗಳು ಹಾಗು ಶ್ರೀ ಅರವಿಂದರ 'ದ್ರಷ್ಟಾರ ಕಾವ್ಯ'ದ ಆಂತರ್ಯವು ಸಾಗಿ ಬಂದಿರುವ ಪಥ ಇದಾಗಿದೆ. [ಪಿಪಿಕೆ]

# ಶ್ರೀ ಅರವಿಂದರ 'ದ್ರಷ್ಟಾರ ಕಾವ್ಯ'




ಕಳೆದ ಶತಮಾನದ ಪೂರ್ವಾರ್ಧದ ಅವಧಿಯೊಳಗೆ ಭೂ–ಮಂಡಲದ ಮನುಕುಲವೆಲ್ಲವೂ ತೀವ್ರ ರೀತಿಯ ವಿಪ್ಲವಕಾರೀ ಘಟನಾವಳಿಗೆ ಸಿಲುಕಿ ಘಾಸಿಗೊಂಡಿವೆ. ವಿಕಾಸವಾದದ ಈ ರೀತಿಯ ಸಂರಚನಾ ವ್ಯವಸ್ಥೆಯೊಳಗೆ ಏಳುವ ಈ ರೀತಿಯ ಸಂಕಟದ ಜಂಝಾವಾತವು, ಜೊತೆಜೊತೆಗೇ ಮತ್ತೊಂದು ಉಜ್ಜ್ವಲ ಭವಿಷ್ಯಕ್ಕೂ ಬೀಜಾರೋಪಣೆ ಮಾಡುವದಷ್ಟೇ ಅಲ್ಲದೇ, ಅದನ್ನೂ ಸೂಕ್ತ ರೂಪಕ್ಕೂ ಅನ್ವಯಗೊಳಿಸುವ ಆಂತರ್ಯವನ್ನೂ ತುಂಬಿಕೊಂಡಿರುತ್ತದೆ. ಇದರ ಮುನ್ಸೂಚನೆಯನ್ನು, ಭರವಸೆಯನ್ನು ಶ್ರೀ ಅರವಿಂದರು ತಮ್ಮ 'ದ್ರಷ್ಟಾರ ಕಾವ್ಯ'ದ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ. ಜೊತೆಗೆ ತಮ್ಮ ಜೀವನವನ್ನೂ ಮುಡಿಪಾಗಿಸಿದ್ದಾರೆ. ಶ್ರೀ ಅರವಿಂದರ 150ನೇ ಜನ್ಮ ವರ್ಷದ ಅವಧಿಯಲ್ಲಿ ಅವರಿಗೆ ಗೌರವವನ್ನು ಸಲಿಸುವ ಸಲುವಾಗಿ, ಅವರು ಅಭಿವ್ಯಕ್ತಿಸಿರುವ 'ದ್ರಷ್ಟಾರ ಕಾವ್ಯ'ಗಳಲ್ಲಿ ಆಯ್ದ ಕೆಲವು ಕವನಗಳನ್ನು ಮತ್ತು 'ಸಾವಿತ್ರಿ' ಕಾವ್ಯದ ಭಾಗಗಳನ್ನು ಈ ಸಂಚಿಕೆಯಲ್ಲಿ ರೂಪಿಸಲಾಗುತ್ತಿದೆ.

ಈ ವಿಷಯವಾಗಿ ಶ್ರೀಮಾತೆಯವರೂ ಒಂದು ಆಕರ್ಷಕವಾದ ಟಿಪ್ಪಣಿಯನ್ನೂ ನೀಡಿದ್ದಾರೆ, ಶ್ರೀ ಅರವಿಂದರು ಭವಿಷ್ಯಕ್ಕಾಗಿಯೇ ಜನ್ಮ ಪಡೆವರು; ಅವತಾರ– ವೆತ್ತಿದವರು. ಇವರು ಭವಿಷ್ಯದ ದೂತರೂ ಹೌದು. ಈಶ್ವರ ಪ್ರಣೀತವಾಗಿರುವ ಉಜ್ಜ್ವಲ ಭವಿಷ್ಯದ ಪ್ರಾಪ್ತಿಗಾಗಿ ನಾವು ಸಾಗಬೇಕಾದ ಮಾರ್ಗವನ್ನು ರೂಪಿಸಿದ್ದಾರೆ. ಮನುಕುಲದ ಪ್ರಗತಿಯೊಂದಿಗೆ ಹಾಗು ಭಾರತದ ಉಜ್ಜ್ವಲ ಭವಿಷ್ಯದ ಭಾಗ್ಯಕ್ಕಾಗಿ ಜೊತೆಗೆ ದಿವ್ಯತೆಯು ತುಂಬಿರುವ ಆಕಾಂಕ್ಷೆ ಮತ್ತು ಪ್ರಬುದ್ಧತೆ ಅಪೇಕ್ಷಿಸುವವರೆಲ್ಲರೂ 'ಏಕತ್ವ'ದಲ್ಲಿ ಸಾಧನೆ ಮಾಡುವದು ಇಂದಿನ ಅಭೀಪ್ಸೆಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/14** **– ಶ್ರೀಮಾತೆ**






**1967**

ಮನುಕುಲ, ದೇಶ, ಖಂಡಗಳು!
ಆಯ್ಕೆಯ ಅವಶ್ಯಕತೆ ಅನಿವಾರ್ಯ
ಋತವೋ ಅಥವಾ ರಸಾತಲವೋ.

*1967 ನೇ ವರ್ಷದ ಸಂದೇಶದ ಸಮಯದಲ್ಲಿ ಈ ರೀತಿಯಲ್ಲಿ ಋತ ಅಥವಾ ರಸಾತಲ ಎನ್ನುವ ವಿಷಯದಲ್ಲಿ ಖಚಿತವಾದ ಆಯ್ಕೆ ಮಾಡಿಕೊಳ್ಳಬೇಕು ಎಂದು ತಮ್ಮ ಹೇಳಿಕೆಯಲ್ಲಿ ಅಭಿವ್ಯಕ್ತಿಸಿದ್ದೀರ.*

ರಸಾತಲವಂತೂ ನಮ್ಮೆದುರಿಗೇ ಇದೆ ಎನ್ನುವದು ಸ್ಪಷ್ಟ. ಆದರೂ ಅಲ್ಲಿಯೇ ಒಂದು ಪರಿಹಾರದ ಮಾರ್ಗವೂ ಇದೆ ಎನ್ನುವದು ಮುಖ್ಯ. ಈ ರೀತಿಯ ವಿಶ್ವಾಸವೂ ಅತೀ ಮುಖ್ಯವಾಗಿದೆ. ಯಾರು ಈಗಲೂ ತಮದ ನಿದ್ರೆಯಲ್ಲಿ ಇರುವರೋ, ಆ ಸ್ಥಿತಿಯಲ್ಲಿಯೇ ಅವರು ಪರಮ ಸಂತುಷ್ಟರೂ ಆಗಿರುವರೋ, ಅವರಿಗಾಗಿ ರೂಪಿತವಾಗಿರುವ ಸಂದೇಶ ಇದು.

*

*ನೀವು ರೂಪಿಸಿರುವ ಹೊಸ ವರ್ಷದ ಸಂದೇಶದಲ್ಲಿ 'ರಸಾತಲ' ಎನ್ನುವದು ಏನನ್ನು ಸೂಚಿಸುತ್ತಿದೆ? ಇನ್ನೊಂದು ರೀತಿಯಲ್ಲಿ ಇದನ್ನು ಗಮನಿಸುವದಾದರೆ, ಓರ್ವ ಸಾಧಕನು ಯಾರಿಗೆ ಅಥವಾ ಯಾವುದಕ್ಕೆ ಅಂಜಬೇಕು?*

ಈಗಲೂ ಬಹುತೇಕ ಒತ್ತಡದ ಸ್ಥಿತಿ ಇದೆ. ಅವರು ಸರ್ವ ರೀತಿಯಿಂದಲೂ ಇದನ್ನು ನಿಭಾಯಿಸುತ್ತಿದ್ದಾರೆ. ಒಂದು ವೇಳೆ ಯುದ್ಧವನ್ನೂ ಪ್ರಾಂಭಿಸಬಹುದೆಂದೇ ಭಾವಿಸೋಣ. ಆದರೆ ಇದು ಅಂತಾರಾಷ್ಟ್ರೀಯ ಸಂಬಂಧದ ಹೆಸರಿನಲ್ಲಿ ಮಾನವರೇ ರೂಪಿಸುತ್ತಿರುವ ಕುರುಡು ನಡೆಯಾಗಿದೆ.

ಇದಕ್ಕಿಂತ ಮುಖ್ಯವಾಗಿ ಇಲ್ಲಿ ಮೂಲದಲ್ಲಿ ಇರುವದು ಭಯ; ಸರ್ವೇ ಸಾಮಾನ್ಯವಾಗಿರುವ ಅವಿಶ್ವಾಸ; ಇದಕ್ಕಿಂತ ಮುಖ್ಯವಾಗಿ 'ಸ್ವಹಿತ ಸಂಪತ್ತು, ವ್ಯವಹಾರ'; ಈ ಮೂರೂ ವಿಷಯಗಳ ಸಂಯೋಜನೆ ಇಲ್ಲಿದೆ. ಆದರೆ ಈ ಮೂರೂ ವಿಷಯಗಳು ಮಾನವೀಯತೆಗೆ ಮಾರಕಗಳಾಗಿವೆ. ಇದನ್ನೇ ನಾನು 'ರಸಾತಲ'ವೆಂದು ಹೇಳಿರುವದು.

ಒಂದು ವೇಳೆ ಯಾವುದೇ ವ್ಯಕ್ತಿಯು ಭಗವಂತನ ಸಲುವಾಗಿ, ಸತ್ಯದ ಮಾರ್ಗದಲ್ಲಿ ಸಾಗುವ ಸಂಕಲ್ಪವನ್ನು ಹೊಂದಿ ಅದನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸದಲ್ಲಿ, ಆ ಮೂಲಕ ತನ್ನ ಜೀವನದ ಉದ್ದೇಶವನ್ನು ಅರಿತುಕೊಳ್ಳುವ ಮಾರ್ಗದಲ್ಲಿ ಇದ್ದರೆ, ಆಗ ಅವನು ಯಾವುದಕ್ಕೂ

ಹೆದರಬೇಕಿಲ್ಲ. ಆ ಮಾರ್ಗದಲ್ಲಿ ಸಾಗುತ್ತಿರುವಾಗ ಅಲ್ಲೆ ಏನೇ ಘಟಿಸಿದರೂ ಸಹಿತ, ಅವು ಬೋಧಪ್ರದವಾಗಿಯೇ ಇರುವದನ್ನು ಅರಿತುಕೊಂಡು, ಸೂಕ್ತ ಮಾರ್ಗದಲ್ಲಿ ಅಂದರೆ ಅತ್ಯಂತ ಸಮೀಪದ ಮಾರ್ಗವೇ ಅವನನ್ನು ಗುರಿ ತಲುಪಿಸುತ್ತದೆ.

ಇದೆಲ್ಲವೂ ಅನುಗ್ರಹದ ಸ್ವರೂಪಗಳೇ ಆಗಿವೆ. ಇದೆಲ್ಲವೂ ಕೃಪೆಯಿಂದ ಸಂಭವಿಸುತ್ತದೆ ಎಂದು ಸಾಮಾನ್ಯವಾಗಿ ಜನರು ನಂಬುತ್ತಾರೆ. ಇದು ಇಡೀ ಜೀವವನ್ನೇ ಅತ್ಯಂತ ಸೌಹಾರ್ದಯುತಗೊಳಿಸುತ್ತದೆ ಎಂದು ನಂಬುತ್ತಾರೆ. ಆದರೆ ಇದು ಸತ್ಯವಲ್ಲ.

ಆದರೆ ಕೃಪೆಯು ದೊರಕುವದು ನಿಮ್ಮ ಅಭೀಪ್ಸೆಯ ಸಾಕ್ಷಾತ್ಕಾರದ ಜೊತೆಗೆ ಅಲ್ಲಿ ಅನುಷ್ಠಾನಿಸಲ್ಪಟ್ಟಿರುವ ಪ್ರಾಮಾಣಿಕತೆಯು, ಆ ರೀತಿಯ ಕೃಪೆಯನ್ನು ಶೀಘ್ರದಲ್ಲಿ ದೊರಕಿಸಲು ಸಹಕಾರಿಯಾಗಿರುತ್ತದೆ. ಹೀಗಾಗಿ ಇಲ್ಲಿ ಭಯದ ಪ್ರಶ್ನೆಯೇ ಉದ್ಭವಿಸುವದಿಲ್ಲ.

ಅಪ್ರಾಮಾಣಿಕತೆ ಇದ್ದಲ್ಲಿ ಭಯವಿರುತ್ತದೆ. ಒಂದು ವೇಳೆ ನೀವು ಸುಸಂಗತವಾಗಿರುವ ಜೀವನವನ್ನು ಅಪೇಕ್ಷಿಸುತ್ತಿದ್ದಲ್ಲಿ, ಹೊಂದಾಣಿಕೆಯ ಸಂದರ್ಭಗಳಲ್ಲಿಯೇ ಸಾಗುತ್ತಿದ್ದಲ್ಲಿ, ಮತ್ತಿತರ ಇಂತಹ ಸಂಗತಿಗಳಿಂದಾಗಿ, ನಿಮ್ಮನ್ನೇ ನೀವು ಬಂಧನಗಳಿಗೆ ಸಿಲುಕಿಸಿಕೊಂಡು ಅಂತಹ ನಿಬಂಧನೆಗಳಿಗೆ ಒಪ್ಪಿಕೊಳ್ಳುತ್ತಿದ್ದಲ್ಲಿ, ಆಗ ಸಹಜವಾಗಿ ಭಯಪಡಲೇಬೇಕಾಗುತ್ತದೆ.

ಆದರೆ 'ಸಾಧನೆ'ಯಲ್ಲಿ ಇವಾವುದಕ್ಕೂ ಆಸ್ಪದವೇ ಇಲ್ಲ!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/180 – ಶ್ರೀಮಾತೆ**





# ಭಾಗ 1

## 1. ಒಂದು ಬೆಳಗು

ಒಂದು ಬೆಳಗಿನಲಿ, ಅರೆ–ಅರಿವುಗೊಂಡ ಸರ್ವಸ್ವ ಜೊತೆಗೆ ಖಚಿತ
ಒಂದು ಬೆಳಗಿನಲಿ, ಉದಿತಗೊಳ್ಳದಿಹ–ಆ–ಸೃಷ್ಟಿ ಉದಿತ;
ಬಲು ಕ್ಷೀಣ ಪಥವು ಜೊತೆಗಿದೋ ಮಹತಿ ತುಂಬಿರುವ ಗಮ್ಯ,
ಸ್ಪರ್ಶವೊಂದಿದುವು ಸರ್ವಸ್ವವನ್ನು ದಿವ್ಯಗೊಳಿಸಲೆನೆ ರಮ್ಯ.

ಶೃಂಗ–ಶೃಂಗಗಳ ಶ್ರೇಣಿಗಳನೇರಿ ಏರುತಲಿ ಈಗ ಇದೋ,
ಧ್ಯಾನಾವಲೋಕ, ಆ ತುರೀಯದಲಿ ಅತಿಬೃಹತ್– ಭವ್ಯ–ಭೃಕುಟಿ
ಜೊತೆಗಿದೋ ಮಹದ್–ಆ ಶಿಖರಮೇರು, ಪದಗುರುತು ಇರದ ಭೂಮ;
ಏಕೈಕ ಹೆಜ್ಜೆ! ಈಗಿದೋ ಸಕಲ ಪರಮಾತ್ಮ ಜೊತೆಗೆ ವ್ಯೋಮ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/542** – **ಶ್ರೀ ಅರವಿಂದರು**

## 2. ವಿಜ್ಞಾನಘನಸತ್ತೆಯ ದರ್ಶನ

ನನ್ನೊಳಗೆ ನಾನು ಸ್ವಪ್ನಗೊಂಡಿಹೆನು ನಾ ಕಂಡ ಲೋಕಗಳಲಿ,
ಅಲ್ಲಿರಲು **ಮೂರು–ದೇವಸ್ವರೂಪ** ಸಂಕ್ರಾಂತ ನಿಯತಿಯಲ್ಲಿ
ಪ್ರಥಮವಿದು ತಾನು, ಸುಸ್ಪಷ್ಟ ಕಾಣ್ಕೆ ಅಪಲಾಪ ಜೊತೆಗುದಾಸ
ಅವಳ ಮಿತಿಯೊಳಗೆ ಸಬಲ, ಸಂಭಾವ್ಯ ಪ್ರಬಲದಾ ಸ್ಥೈರ್ಯ ಶ್ವಾಸ,

ಇದು ದ್ವಿತಿಯ ತಾನು ಉದ್ದೀಪ್ತ ಧವಲ–ಶುಭ್ರ ಪ್ರಜ್ವಲನದೊಡನೆ
ದಿವ್ಯ–ಜ್ವಾಲೆಗಳು ಅವಳ ಹೃದಯದಲಿ, ತಮ ಸುತ್ತ ಭ್ರಕುಟಿ ತಾನೆ
ಇದು ಬೆಳೆದ ಹಾಗೆ ತಾ ಮ್ಲಾನಗೊಂಡು, ಅವಳದನು ಸಹಿಸದಿರಲು
ಶೋಧದಲಿ ನಿತ್ಯ ಅನಿಮೇಷ, ಅಲ್ಲವಿದು ಬಲದಿ ಮಂದ–ಮರುತ

ಚಿಂತನವನೀಗ ಸೃಜಿಸಿರುವ ಶೀತ– ಸ್ಪಂದನದ ಛಂದವೆಲ್ಲ,
ನಮ್ಮ ಮನಸುಗಳ ಕೋಶಕೋಶಗಳ ಪೋಷಿಸುತಲಿಂತು ಎಲ್ಲ,
ಆದರೂ ತಾನು ವಿರಕ್ತಗೊಳಿಸುತ್ತ ಮನುಜ ಹೃದಯಗಳನು.
ವಿಜ್ಞಾನಘನವು ತಾನೊಂದು, ಉಳಿದು, ಅವಳಿಗಿತ್ತು ಎಲ್ಲವನು.

ಈಗಿದೋ ತಾನು ಮೂರನೆಯದಾಗಿ **ಮತ**ವೊಂದು ರೂಪುಗೊಂಡು,
ಪರದೆಯಲಿ ಅಡಗಿ ತಾನಿದ್ದರೂನು ಆಗಮಿಸಿ ಬೆನ್ನಿಗಿಂದು,
ಕವಚಗಳಲೀಗ, ಸಂದಿಗ್ಧದೊಳಗೆ, ಏಕಾಂತ ದೂರವಿತ್ತು
ಇದು ಸೂಕ್ತವಾಗಿ ಈ ಜಗದ ಮೇಲೆ ಹಕ್ಕಿರದ ಗತಿಯಲಿತ್ತು,
ಆದರೂ ಸಹಿತ ಅವಳದೇ ಕಾಂತಿಯಲಿ ತಾನು ವಾಸವಿತ್ತು.

ಯಕ್ಷ–ವಿಜಯಗಳ ಗರಿಮೆ ಗರಿಮೆಗಳು ಎಲ್ಲಿದ್ದವಾಗ ಅಲ್ಲಿ
ಜಯ ಯಾರಿಗೀಗ, ಅವಳ, ರಾಷ್ಟ್ರಗಳ ಗುಣಗಾನ ಭರತದಲ್ಲಿ.
ಈಗಲೂ ಸಹಿತ ಹಲಕೆಲವು ಗಣವು ಅನ್ಯರಾ ಬಂಧ ತಾವು
ತಮದ–ಆತ್ಮಗಳು ಹಲವು ಜೊತೆಗಿದೋ ಪ್ರೇಮದಾತ್ಮಗಳು ಕೆಲವು,
ಆದರಿದೋ ಆತ್ಮ–ನಿರ್ಭರತೆಯಲ್ಲಿ, ಜೊತೆಗಿದೋ ಪೀಠಗೊಂಡು.

ಈಗಿದೋ ಅವಳ ಆ ಅಗ್ರದೂತರಿಂತಿದೋ ಘೋಷಗೊಂಡು
ಪರಿವರ್ತಗೊಂಡು ಪರಿಸೀಮೆಗೊಂಡು ಹಕ್ಕಿನಲಿ ಮಂಡಿಸಿಂದು
ತಮ ಶಮನಗೊಂಡು ಜೊತೆ ದಮನಗೊಂಡು ಪರಿವರ್ತಗೊಂಡು ಸರ್ವ;

ಸರ್ವಸ್ವವೀಗ ತೆರೆ–ತೆರೆದುಕೊಂಡು, ಸುಸ್ಪಷ್ಟವಾಗಿ–ಸರ್ವ
ಉಜ್ಜ್ವಲೋಜ್ಜ್ವಲದ ಪ್ರಭೆಯೊಳಗೆ ಬೆಳಗಿ ಬೆಳಕಾದ ದಿವ್ಯ–ಪರ್ವ–
ಸರ್ವಸ್ವವನ್ನು ತಮವು ಬಂಧನದಿ ಬಿಗಿದಿರಿಸಿಕೊಂಡ ಕಕ್ಷೆ
ದಮನಗೊಂಡಿದ್ದ ಆ ಸರ್ವಶ್ರೇಣಿಗಳಿಗೀಗ ದಿವ್ಯ ರಕ್ಷೆ.

ಆದರೂ ಸಹಿತ, ಈ ಬುವಿಯ–ಪೂರ್ಣ ಆವರಣಗೊಂಡ ಬೆಳಕು
ಇದು ಖಚಿತ ಮಹತಿ, ಇದು ಚಿರದ ನಿಯತಿ ಜೊತೆಗಿದೋ ಮಹತಿ ಜನ್ಮ,
ಶತಮಾನವೊಂದು ಗತಿಗೊಳುತ ಪ್ರಗತಿ ರೂಪಣೆಯ ದೃಶ್ಯವೆಲ್ಲ
ನನ್ನ ಕಣ್ಣೆದುರು ಜೀವ–ಜೀವಂತವಾಗುತಲಿ ಕಂಡಿತೆಲ್ಲ.

ವಿಸ್ಮಯಾದ್ಭುತದಿ ಜೊತೆ ಅಚ್ಚರಿಯ ಘನದಿ ತಾನುದಿತಗೊಂಡು ಇಂತು,
ಆವರಣಗೊಂಡು ನಿಂತಿರುವ ಅವನದೇ ಲೋಕ–ಲೋಕವನು ಇಂತು
ಮಾನವನ–ಶಕ್ತಿ–ಸಾಮರ್ಥ್ಯ ಅದನು ತುಲನೆಗೊಳಿಸುತಲಿ ಇಂತು
ದೃಷ್ಟಾಂತ ನಿಯತಿ ಜೊತೆ ನಾದಗಳಾ ನಿಯಮಗಳು ದಿವ್ಯವಿಂತು.

ಬೆಳಕದುವು ಸತತ ಶೋಧನದ ಅವಳ ಅನಿಮೇಷ ದಿಟ್ಟಿಯಿಂದ
ತಾನಡಗಿಕೊಳಲು ವಿಫಲವದು ಈಗ, ಸರ್ವಸ್ವ ಕಾಂತಿಯಿಂದ,
ಏನೊಂದು ತಾನು ಕಡೆಗಣಿಸದೀಗ ಅದರ ಅಗಣಿತದ ಜಟಿಲ
ಅದರಾತ್ಮ ಘನದ ಶಾಂತತಾಪೂರ್ಣದನುಸಂಧಾನ ಲೀಲ;

ಅತಿದೂರ ದೂರ ಆ ದೂರವದುವು ಬರೆಲೆನಲು ತೀರ ಸನಿಹ,
ಅತಿ ಕ್ಷೀಣ ವ್ಯಷ್ಟಿ ನೇಯ್ಗೆಯಲಿ ಬೃಹತ್–ಸಮಷ್ಟಿಯನು ಸೃಷ್ಟಿಗೊಳಿಸಿ,
ಸಂಕೀರ್ಣದೊಳಗೆ ತಾ ಪ್ರಗತಿಗೊಂಡು ಸುಸ್ಪಷ್ಟ ಪ್ರಗತಿಗಾಂತು.
ಸಾಮರ್ಥ್ಯಪೂರ್ಣ ಆ ಶಕ್ತ ದೇವದೂತನಾ ಪದದ ಗುರುತು

ಅದನೀಗ ಇಂತು ಮಾಪನೆಯಗೊಳಿಸಿ ಜೊತೆಗೆ ಪರಿಶೋಧಗೊಳಿಸಿ,
ಲೀನಗೊಳಿಸುತಲಿ ಮತ್ತಿದೋ ಅದನು ಸಂಯೋಗಗೊಳಿಸಿ ನಿಲಿಸಿ
ತಾರೆಗಣಗಳಾ ತಾಣದೆಡೆಯೊಳಗೆ ಅವಳೀಗ ಖಚಿತದಲಿ ಪಾದವಿರಿಸಿ,
ಆ ಸ್ವರೂಪಗಳ ಗಾತ್ರ–ಪಾತ್ರಗಳ ಆಯಾಮಗಳನು ರಚಿಸಿ,

ಕಾರಣಿಕದೊಳಗೆ ಭೂಕಂಪಗಳನು, ಚಂಡಮಾರುತದ ಸರಣಿ
ಸಂಶಯಗಳೆಲ್ಲ ತಾ ಕರಗಿ ಶೂನ್ಯಗೊಳ್ಳುವೆಡೆ ಇಡುತ ಏಣಿ
ವಿಸ್ಮಯಾದ್ಭುತದ ವಲಯವದು ತಾನು ಮಂಗಲವ ಕಾಣುವಲ್ಲಿ.

ಜಡಶೀಲೆಯಲೀಗ ಹುದುಗಿಕೊಂಡಿದ್ದ ಬುವಿಯ ಪುಟ–ಪುಟಗಳೆಲ್ಲ
ತೆರೆತೆರೆದುಕೊಂಡು ಬಹಿರಂಗಗೊಂಡು ತಮ್ಮಂತರಂಗವೆಲ್ಲ
ಸ್ಮರಣೆಗೆಡೆಯಿರದ ಗೂಢ–ಗುಹ್ಯಗಳನೀಗ ಬಹಿರಂಗಗೊಳಿಸಿ
ಸಲಿಲ ಧಾರೆಗಳ ಅಶ್ವಮೇಳಗಳ ಶಕ್ತಿಪೂರ್ಣಗೊಳಿಸಿ

ಜೊತೆಗಿದೋ ಮತ್ತೆ ಆ ಮಿಂಚುತೇಜಗಳು ದಂಡು–ದಂಡುಗಳಲಿ
ರೂಪಗೊಳಿಸುತಿದೆ ನಮ್ಮ ರಥಗಳನು ಸಾಗಿಸುವ ಪಥಗಳಲ್ಲಿ.
ಅಂತಿಮದಿ ಇದೋ ಆ ಸ್ವರ್ಗವನ್ನು ಮಾಪನೆಯಗೊಳಿಸಿ ಹೀಗೆ
ಭೋರ್ಗರೆತವಿರುವ ಅರ್ಣವಗಳೆಲ್ಲ ಆಧೀನಗೊಂಡು ಹೀಗೆ.

ಅಂತರವು ಇಂತು ತಾ ಶಾಂತಗೊಂಡು ಮರೆಯಾಗಿ ಸರಿಯಿತೀಗ
ಮನದ ಮೇಲಿಂತು ಪ್ರಾಬಲ್ಯ ಪಡೆವ ಬಲವಾದ ಬಾಧೆಯಿಂದ,

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/204–05**

---

**ಟಿಪ್ಪಣಿಗಳು:**

**ಮೂರು–ದೇವ ಸ್ವರೂಪ;** ಇಲ್ಲಿ ಇಂಗ್ಲೀಷಿನಲ್ಲಿ ಏಂಜಲ್ ಎಂದು ಹೇಳುತ್ತಿರುವದು ಯಕ್ಷ ಅಥವಾ ಯಕ್ಷಿ ಎನ್ನುವದಕ್ಕಿಂತ **'**ದೇವ–ಸ್ವರೂಪದ ಸ್ಥಿತಿ / ಜೀವ**'** ಎಂದು ಭಾವವಿದೆ. ಇದೇ ವಿಷಯದ ಕುರಿತೇ **"**ತ್ರಿವಿಧ ಸತ್ಯವ ತ್ರಿವಿಧದ ಅನಿತ್ಯವ ಬಲ್ಲವರಾರೋ / ತ್ರಿವಿಧಕ್ಕೆ ತ್ರಿವಿಧವನಿತ್ತು ತ್ರಿವಿಧ ಪ್ರಸಾದವ ಕೊಳ್ಳಬಲ್ಲಡೆ / ಆತನ

ತ್ರಿವಿಧ ನಾಥನೆಂಬೆ ಆತನ ವೀರನೆಂಬೆ ಆತನ ಧೀರನೆಂಬೆ / ಆತನ ಗುಹೇಶ್ವರ ಲಿಂಗದಲ್ಲಿ ಅಚ್ಚ ಪ್ರಸಾದಿಯೆಂಬೆ" ಎಂದು ಅಲ್ಲಮ "ಮಾಹೇಶ್ವರ ಸೂತ್ರ"ದ ಹಿನ್ನೆಲೆಯಲ್ಲಿ ಈ ತ್ರಿ–ದೇವ ಸ್ವರೂಪಗಳ ಕುರಿತು ಸಂಕೇತ ತೋರುತ್ತಾನೆ.

ಪ್ರಸ್ತುತ ಶ್ರೀ ಅರವಿಂದರು, ಅನ್ನಮಯ–ಪ್ರಾಣಮಯ–ಮನೋಮಯ ಕೋಶಗಳಿಂದ ಮೇಲೆ ಇರುವ 'ವಿಜ್ಞಾನಮಯ ಕೋಶ'ದ ಕುರಿತು ಈ ಮೂರು ಸ್ವರೂಪಗಳನ್ನು ವಿವರಿಸುತ್ತಾರೆ. ಸುದೀರ್ಘವಾದ ಭಾಷ್ಯ ಬೇಕಿದೆ. ಇದನ್ನೇ ಶ್ರೀ ಅರವಿಂದರು 'ನಾವು ಸೃಷ್ಟಿಯ–ನಿಸರ್ಗ(ನೇಚರ್)ದ ಅಥವಾ ಪ್ರಕೃತಿಯ ಉತ್ಕ್ರಾಂತಿಯ ಕ್ರಮವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ, ತೀರ ಕೆಳಗಿನ ಸ್ತರವು 'ಜಡ'(ಮ್ಯಾಟರ್) ಆಗಿರುವದು ಗೋಚರಿಸುತ್ತದೆ. ಇದನ್ನೇ ಅನ್ನಮಯ ಕೋಶವೆಂದು ಉಪನಿಷತ್ತುಗಳೂ ಹೇಳುತ್ತಿವೆ. ಆದರೆ ಇದು ಜಡವಲ್ಲ. ಏಕೆಂದರೆ ಇಲ್ಲಿಯೇ ಸಸ್ಯಸೃಷ್ಟಿ–ಜೀವೋತ್ಪತ್ತಿ ಆಗುತ್ತಿದೆ. ಅದರಲ್ಲಿ 'ಜೀವನ'ವೆಂದರೆ 'ಪ್ರಾಣ'(ಲೈಫ್) ಪ್ರಕಾಶನಗೊಂಡಿದೆ. ಇಂದಿನ ವಿಕಸಿತ ಮಾನವನನ್ನು ನೋಡಿದರೆ ಅವನು 'ಮನೋಮಯಃ ಪ್ರಾಣ ಶರೀರ ನೇತಾ' ಎನ್ನುವ ಉಪನಿಷತ್ ವಾಣಿಗೆ ದೃಷ್ಟಾಂತವಾಗಿದ್ದಾನೆ. ಮಾನವನು ಬರೀ ಅನ್ನಮಯ–ಪ್ರಾಣಮಯ–ಮನೋಮಯದ ಜೀವಿಯಾಗಿ ಉಳಿಯಲಾರ. ಈ ಸ್ತರಕ್ಕಿಂತಲೂ ಊರ್ಧ್ವದಲ್ಲಿರುವ 'ವಿಜ್ಞಾನಮಯ' ಮತ್ತು 'ಆನಂದಮಯ ಕೋಶ'ಗಳ ಆರೋಹಣ ಮಾಡಬಲ್ಲನು. ಇದೇ 'ಅತಿಮಾನವನ ರಹಸ್ಯ'ವಾಗಿದೆ.

(ಆಧಾರ: ನವನೀತ ರಾಮಚಂದ್ರರಾಯರ ಲೇಖನ 15–8–197)

## 3. ಚಂದ್ರಪ್ರಭೆಯ ಒಳಗೆ

... ಅವನುದಿತವೀಗ, ಪರಮನಾ ಜನುಮ ತಾ ರೂಪುಗೊಳ್ಳಲೆಂದು
ವಿಪ್ಲವಾವರ್ತಗಳ ಸರಣಿಯಲ್ಲಿ ಈ ಲೋಕ ವ್ಯಾಪ್ತಗೊಂಡು
ಇವು ಸಬಲವಿರದ ಆರಂಭದೊಳಗೆ ಜೊತೆ ಚಕ್ರದೆಸೆತ ಭಾರಿ
ವೇಗದಲಿ ವಿಷ್ಣು ಅವತರಣವಿಂತು ಈ ಬುವಿಯ ನೆಲೆಗೆ ದಾರಿ

ಗತವದುವು ನಶಿಸಿ, ಅದು ಮುಂದೆ ಹೀಗೆ ಅವಸಾನಗೊಂಡು ಸಾಗಿ,
ಇದು ತೊಡೆದು ಇಂತು, ಹುಟ್ಟಡಗಿ ತಾನು, ನಿರ್ನಾಮಗೊಂಡು ಹೋಗಿ;
ಲೋಹಗಳ ಸರ್ವ ಹಣಾಹಣಿಯೊಳಗೆ ಅನುರಣನಗೊಂಡ ಧ್ವನಿಯು
ಪುರುಷ–ಪೌರುಷದ ವಿಸ್ತಾರವೀಗ ಕಂಡು ಅಂತಿಮದ ಗತಿಯು.

ಮುಕ್ತತ್ವ, ಪರಮ ಪರಮಾತ್ಮ ಜೊತೆಗೆ ಅಮರತ್ವ ತ್ರಿಗುಣ–ದೀಪ
ಇವು ಸರ್ವ 'ಏಕ' ಇಂತಿದೋ ಈಗ ಪ್ರತ್ಯಕ್ಷಗೊಂಡು ರೂಪ,
ಪ್ರೇಮ, ಪ್ರಜ್ಞೆ, ಜೊತೆ ತೋಷ ಮತ್ತಿದೋ ಪೂರ್ಣ–ಸಾಮರ್ಥ್ಯವಾಗಿ
ಸಂಯೋಗಗೊಂಡವೀಗಿದೋ ಶುದ್ಧ– ಆನಂದ ಸ್ಪಂದವಾಗಿ

ಆಗಮಿಸಿತೀಗ ಅಂತಿಮದಿ ಇಂತು, ಗತ ಕಂಡ ಕಾಙ್ಕೆ–ಕಣಸು,
ಪ್ಯಾಥಮಾಸಿನಲಿ ಜಾನ್ ಅರಿತ ವಿಷಯ, ಷೆಲ್ಲಿಗೂ ಇದ್ದ ಸ್ವಪ್ನ,
ದರ್ಶನದ ಜೊತೆಗೆ ಅಸಫಲತೆಯನ್ನು ಪರಿಗಣಿಸಿ ಗ್ರಹಿತಗೊಂಡು,
ಆ ಪ್ರಮೋದಿತದ ಹರ್ಷ–ನಗರಿಯದು, ಆ ಸ್ವರ್ಣ ಯುಗವನಂದು.

ಆ ಲೋಹ–ಯುಗವು ಪರಿಪೂರ್ಣಗೊಂಡು, ಈಗಿದೋ ಇಲ್ಲಿ ಮಾತ್ರ
ಹತಗೊಳುವ ಗತದ ಅಂತಿಮದ ಉಗ್ರ–ಸೆಳೆತಗಳ ಸರಣಿ ಮಾತ್ರ
ಕಂಪನವಗೊಳಿಸಿ ದೇಶ–ದೇಶಗಳ, ನಷ್ಟಗೊಂಡೀಗ ಸರಿದು,
ದುಷ್ಟತನವನ್ನು ಬುವಿಯೀಗ ನಶಿಸಿ, ನಿಷ್ಪಕ್ಷ ದೃಷ್ಟಿ ಬೀರಿ.

ಇದು ಪುರುಷ ಪ್ರಗತಿ ತಾನಿಹುದು; ಲೋಹಯುಗಕಾಗಿ ಅಂದು
ಸೃಷ್ಟಿಸಿದ ಸ್ವರ್ಣ–ಯುಗವನ್ನು, ನಮ್ಮ ಪರಿಗಣನೆ ಪಾಪವೆಂದು,

ಇದು ಮನುಜ ಕೃತವು ತಾನಿದ್ದರೂನು ಅವನಂತರಂಗದರ್ಶಿ,
ಆದರೂ ಆ ನಿಯಾಮಕನು ಇವನ ಯಾತ್ರೆಗಿದೊ ಮಾರ್ಗದರ್ಶಿ

ಸಂಘರ್ಷ ಜೊತೆಗೆ ಯಾತನೆಯನೀಗ ಇವನೀಗ ಹಿಂದೆ ಉಳಿಸಿ,
ಇದು ಬಿಡದ ಅಂಟು ಜೊತೆ ಪರಮ–ನಂಟು ಮರುಮರಳಿ ಬರುವದೆನಲು,
ಸತತ–ಯಾತನೆಯ ಉಗ್ರ–ಜ್ವಾಲೆಯಲಿ ನಿರತ ದಹಿಸುತಿರಲು
ಪರಮೋಚ್ಚ ಮಧುರ ಮಧುರತೆಗೆ ಅರ್ಹ, ಚಿರಶಕ್ತಿ ಪಡೆಯಲೆನಲು

ಏಕೆನಲು ಅವನ ಆಗಮನ ಆ ಅನಂತಗಳ ತಾಣದಿಂದ
ಮರ್ತ್ಯ–ಜೀವನದ ವಸ್ತು–ವಿಷಯದಲಿ ಅಮರತ್ವ ರಚಿಸಗೆಂದು
ಶುಭಕಾಗಿ ಉದಿತ ಜೊತೆಗೆ ಅವನದೇ ಆ ಬೃಹದ್–ರೆಕ್ಕೆಗಳಲಿ
ಇದೇ ತಾನೀಗ ಅವನ ತಳಮಳದ–ಭರತ ಕಾರಣದಿ ಇಲ್ಲಿ,

ನಿತ್ಯ ವಿಕಸನದ ಆತ್ಮ ಊಡಲೆನೆ ಈ ಭವದ ಯಂತ್ರ ದೇಹ,
ಕುಂಡಲಿಯಲೀಗ ಪರಿಶ್ರಮಿಸುತಿರುವ ಭವಕೀಗ ದಿವದ ನೇಹ
ಮೃತ್ಯು–ಪಾಶವನು ತೊರೆದು ಆರೋಹ ದಿವ್ಯತ್ವ ಪಡೆಯಲೆನಲು
ಬೋಧಗೊಂಡಿತ್ತು ಸಹಕರಿಸಿ ತಾನು ಅಮರತ್ವದಿಚ್ಛೆ ಇರಲು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/243–44**

---

**ಟಿಪ್ಪಣಿಗಳು:**

ಐರನ್ (ಕಬ್ಬಿಣ) ಸೌಂಡ; ಲೋಹ ಧ್ವನಿ (ಇಲ್ಲಿ ಕಬ್ಬಿಣದ ಧ್ವನಿ) ಎನ್ನುವದು ಹಲವಾರು ಸಂಕೇತಗಳಲ್ಲಿ ರೂಪಿತಗೊಂಡಿದೆ. ಒಂದು ಸಿದ್ಧಾಂತದ ಪ್ರಕಾರ (ಅಸ್ಟ್ರಾಲೋಜಿಕಲ್ ಪ್ರಕಾರ), ಈ ಕಬ್ಬಿಣ ಮಂಗಳ ಗ್ರಹದಿಂದ ನಿಯಂತ್ರಿತವಾಗಿರುತ್ತದೆ. ಸಂಕೇತ. ಇದು ಪುರುಷ ಪ್ರಧಾನತ್ವವನ್ನು ಅಥವಾ ಪುರುಷ ಶಕ್ತಿಯನ್ನು ಪ್ರತಿನಿಧಿಸುತ್ತದೆ. ಇದು ಸ್ತ್ರೀ ಪ್ರಾಧಾನ್ಯತೆಯ ಶುಕ್ರ ಗ್ರಹದ ವಿರುದ್ಧದ ಸ್ಥಿತಿಯಾಗಿರುತ್ತದೆ.

– ಅದೇ ರೀತಿಯಲ್ಲಿ ಬೈಬಲ್ ಸಹಿತ ಈ ವಿಷಯವಾಗಿ, 'ಡೇನಿಯಲ್'ನ ಪ್ರಹೇಳಿಕೆಯಲ್ಲಿ ಈ ಕಬ್ಬಿಣದ ವಿಷಯದ ಉಲ್ಲೇಖವಿದೆ. ಅಲ್ಲಿ ಆಡಳಿತದಲ್ಲಿದ್ದ

ನಾಗರಿಗಕತೆಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಹಾಗೆ 'ಸ್ವರ್ಣಮಯ ಶಿರಸ್ಸು, ರಜತಮಯ ಎದೆ, ಕಂಚಿನ ಕಟಿ ಮತ್ತು ಕಬ್ಬಿಣದ ಕಾಲುಗಳು ಜೊತೆಗೆ ಮೃಣ್ಮಯಗೊಂಡಿರುವ ಕಬ್ಬಿಣದ (ಬೀಡು ಕಬ್ಬಿಣ) ಪಾದಗಳ ವಿವರಣೆ ಇದೆ.

– ಭಾರತದಲ್ಲೂ ಸಹಿತ, ಕಬ್ಬಿಣವೇ ಮುಖ್ಯವಾಗಿದ್ದ ಯುಗದ ಘಟನೆಗಳಿವೆ. ಪರಶುರಾಮನ ಕೈಲಿರುವ ಕೊಡಲಿ(ಶಸ್ತ್ರ), ಶ್ರೀ ರಾಮನು ಪ್ರಯೋಗಿಸುವ ಬಾಣ(ಅಸ್ತ್ರ) ಹಾಗೂ ಶ್ರೀಕೃಷ್ಣನ ಚಕ್ರದ ಹಿನ್ನೆಲೆಯಲ್ಲಿ ನಾಗರಿಕತೆ ಮತ್ತು ಸಂಸ್ಕೃತಿ ವಿಕಾಸಗೊಂಡ ವಿಷಯವಿದೆ.

ಪ್ಯಾಥಮಾಸನ ಜಾನ್. ಇವನನ್ನು ಜಾನ್ ಡಿವೈನ ಎಂತಲೂ ಕರೆಯುತ್ತಾರೆ. ಥಿಯೋಲಾಜಿನ್ ಜಾನ್ ಎಂದೂ ಹೆಸರಿದೆ. ಪ್ಯಾಥಮಾಸ ಎನ್ನುವದು ಗ್ರೀಕ ದೇಶದ ಒಂದು ದ್ವೀಪ. ರೋಮನ್ ಸಾಮ್ರಾಜ್ಯದಲ್ಲಿ ನಡೆದ ಇತಿಹಾಸಕ್ಕೆ ಸಾಕ್ಷಿ ಒದಗಿಸುತ್ತದೆ. ಕೆಲವರ ಅಭಿಪ್ರಾಯದಲ್ಲಿ ಇವನು ಯೇಸುವಿನ ಸಮೀಪವಿದ್ದವನೂ ಎಂದು ಜಿಜ್ಞಾಸೆಯಿದೆ.

– ಷೆಲ್ಲಿಗೂ ಇದ್ದ ಸ್ವಪ್ನ; "ಎ ಡ್ರೀಮ್ ಆಫ್ ದಿ ಅನ್–ನೋನ್" ಎನ್ನುವದು ಷೆಲ್ಲಿಯ ಪ್ರಸಿದ್ಧ ಕವನ. ಶಿಶಿರ ಋತು ಕಳೆದು ವಸಂತನು ಆಗಮಿಸಿದ ಎಂದು ಸಂಕೇತಪೂರ್ಣವಾಗಿ ಬರೆದಿದ್ದಾನೆ.

ಸ್ವರ್ಣಿಮದ ಯುಗಳ ಸರ್ಪಗಳು ಬ್ರಹ್ಮ–ಬ್ರಹ್ಮಾಂಡದೇಣಿಯಾಗಿ
ಜೀವ–ವಾಹಿನಿಯ ಕುಂಡಲಿಯ ಸರಣಿ ಸರಣಿಗಳ ಮಾಲೆಯಾಗಿ
ಪೂರ್ಣಗೊಂಡಿಹವು ಮಂಡಲದಖಂಡ ಆವರಣ ರಕ್ಷೆಯಾಗಿ
ಪರಿಶುದ್ಧ ಮತ್ತೆ ಘನಬಲದಿ ತುಂಬಿ ಸಾಮರ್ಥ್ಯಶಾಲಿಯಾಗಿ
ಸಾಂದ್ರಪ್ರಜ್ಞೆ ಜೊತೆ ದ್ರಷ್ಟಾರ ದೃಷ್ಟಿಯಲಿ ದರ್ಶಗೊಂಡು ಪ್ರಕಟ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 5 ಪುಟ 524)**

---

**ಟಿಪ್ಪಣಿ:**

ಚಿತ್–ಪ್ರಕಾಶವು ಸ್ವರ್ಣವರ್ಣದ್ದಾಗಿರುತ್ತದೆ.
ಯುಗಳ ಸರ್ಪಗಳು; ಸತ್– ಮತ್ತು ಚಿತ್ / ಜೀವ–ಪ್ರಾಣ / ಚೈತ್ಯ ಪುರುಷ – ಪರಮಾತ್ಮ / ಮನುಷ್ಯನಿಗೆ ಎರಡು ಆತ್ಮಗಳು ಇರುತ್ತವೆ.

## 4. ದೇವನಾ ಪರಿಶ್ರಮ

ರಜತ–ಪವನದಾ ಸೂತ್ರದಲಿ ನನ್ನ ಸ್ವಪ್ನಮಾಲೆಗಳ ಹೆಣೆದು
ಆ ಸ್ವರ್ಣ–ಮತ್ತೆ ಈ ನೀಲ ಮಧ್ಯದಲ್ಲೀಗ ಪೋಣಿಸಿಂದು,
ಕೋಮಲದಿ ಅವನು ಆವರಣಗೊಳಿಸಿ, ಅವುಗಳನು ಅಲ್ಲೆ ನಿಲಿಸಿ
ರತ್ನಖಚಿತದಾ ನನ್ನ ಸ್ವಪ್ನಗಳಿವು, ನಿನ್ನವಿಲ್ಲಿ ಸಲಿಸಿ

ಇಂದ್ರಚಾಪದಾ ಸೇತುಬಂಧವನು ರಚಿಸಲೆನೆ ನನ್ನ ಮಿಡಿತ
ಸಂಲಗ್ನಗೊಳಿಸೆ ಈ ಬುವಿಯನೀಗ ಆ ನಭದ ಜೊತೆಗೆ ಮಿಳಿತ
ನೃತ್ಯಲಯವಿರುವ ಈ ಕ್ಷೀಣ–ಗ್ರಹದಿ ಬಿತ್ತುತಲಿ ಮತ್ತೆ ಹೀಗೆ
ಅನಂತತೆಯ ಆ ಚಿತ್ತವೃತ್ತಿಗಳನೀಗಿದೋ ಸ್ಪಂದಗೊಳುವ ಹಾಗೆ

ಆದರೀಗಿದೋ ನಮ್ಮ ಸ್ವರ್ಗಗಳು ಅತಿ–ಶುಭ್ರ, ದೂರ–ದೂರ,
ಪಾರಲೌಕಿಕದ ಉಪಾದಾನದಲಿ ಭಂಗುರವು ತೀರ ತೀರ;
ವೈಭವದ ಭರತ ಜೊತೆ ತೇಜ ನಮ್ಮ ನೆಳಲಿದುವು ನಿಲಲು ವಿಫಲ;
ಬೇರುಗಳ ಆಳದಾಳವನು ತಲುಪೆ ಅವು ಈಗ ಪೂರ್ತಿ ವಿಫಲ.

ಅವನಿದೋ ಈಗ ಆ ಸ್ವರ್ಗಗಳನು ಇಲ್ಲಗೈತರುತಲಿರುವ
ಮೃಣ್ಮಯಕೆ ತಾನೆ ತಾನಾಗಿ ರಕ್ಷೆಯಾವರಣಗೊಂಡು ಖಚಿತ,
ಭೂ–ಬದುಕ ಭಾವದೀ ಕಷ್ಟಗಳನು ತಾ ಧರಿಸುತಿರುವ ಭಾವ
ಮತ್ತೆ ಅಡಿಯಿಡುವ ಈ ಶೋಕ–ಪಥದಿ ತುಂತುಂಬಲೆನುತ ಜೀವ

ವಿವಶಗೊಳಿಸುತಲಿ ನನ್ನ ಪರಮನನು ಈಗಲ್ಲಿ ಇಳಿದು ಬಂದು
ಇಲ್ಲಿದೋ ಇಂತು ಪತನಗೊಂಡಿರುವನೀಗ ಈ ನೆಲದ ಮೇಲೆ
ಅನಭಿಜ್ಞನಾಗಿ, ಪರಿಶ್ರಮದಿ ಸತತ, ಮಾನವನು ಪ್ರಗತಿಹೊಂದಿ
ತಿರುಚಿ–ತಿರುಚುತಲಿ ಜನನ–ಮರಣಗಳ ಆ ದ್ವಾರಗಳನು ತಾನು

ಈ ಆಳದಲ್ಲಿ ನಾನೀಗ ಖನನದಾ ಜೊತೆಗೆ ದೀರ್ಘದಲ್ಲಿ
ಭಯವೆ ತುಂಬಿರುವ ಮಲಿನಧೂಲಿಯಲಿ ಜೊತೆ ಸಿಲುಕಿ ಕೆಸರಿನಲ್ಲಿ,

ಸ್ವರ್ಣ–ಸಲಿಲದಾ ಗಾನಕೀಗಿದೋ ಆಧಾರವೊಂದನರಸಿ
ಸಾವಿರದ – ಅಗ್ನಿ ಶಾಶ್ವತದಿ ನೆಲೆಸೆ ಚಿರನೆಲೆಯನೊಂದ ಅರಸಿ.

ಜಡದ–ತಮದೊಳಗೆ ಬಳಲಿದೆನು ನಾನು ಪರಿಶ್ರಮಿಸುತಿಹೆನು ಹೀಗೆ
ಆ ಅಗ್ನಿ–ತೇಜವನು ಮನುಜನೆದೆಗೆ ತರಲೆನಲು ನಿತ್ಯದಲ್ಲಿ,
ಆದರಿದೊ ನರಕ–ದ್ವೇಷದಲಿ ಭರಿತ ಮನುಕುಲವು ಹಗೆಯ ಧಗೆಗೆ
ಈ ಜಗದ ಸೃಷ್ಟಿಯಾ ಘಳಿಗೆಯಿಂದ ಇವು ನನ್ನ ಫಲಿತ ಕೊಡುಗೆ.

ಮಾನವನ ಮನವು ಅವನದೇ ವನ್ಯ–ಜೀವಾತ್ಮ ನಕಲಿನಲ್ಲಿ;
ತನ್ನ ವಾಂಛೆಗಳ ವಿಜಯಕಾಗಿವನು ಆಶಿಸುವ ಸತತದಲ್ಲಿ,
ಕ್ರೂರ–ಬೇತಾಳವನ್ನಂತರಂಗದಲಿ ತಾನು ತಂಗುಗೊಳಿಸಿ
ದುಃಖ–ಪಾಪಗಳಲನುರಕ್ತವಾಗಿ ತಾನಿರುವ ಈ ನಿವಾಸಿ

ಥರಗುಟ್ಟಿ ಕ್ರೂರ–ಧೂಲಿ–ಬೇತಾಳ ಈ ಸ್ವರ್ಗ–ಜ್ವಾಲೆಗೀಗ
ಪಾವಿತ್ರ್ಯ–ಪರಮ ಆನಂದಪೂರ್ಣ ಆ ಸರ್ವ ವಿಷಯಕೀಗ;
ಬರಿದೆ ಸುಖಕಾಗಿ ಮತ್ತೆ ರಾಗಗಳ ಜೊತೆ ವೇದನೆಯ ಹೊಂದಿ
ಅವನ ನಾಟಕವು ಅಂಕ–ಅಂಕದಲಿ ತಾ ಸಹನೆಗೊಳ್ಳುತಿರಲು.

ಸುತ್ತ–ಮುತ್ತಿಹುದು ದಟ್ಟ ಕತ್ತಲೆಯು ಜೊತೆ ವ್ಯಾಪ್ತಿಯಲ್ಲಿ ಹರಡಿ;
ಆ ದೀಪಗಳಿಗೆ ಈ ಮನುಜರೆಲ್ಲ ಜ್ಯೋತಿಗಾಹ್ವಾನ ನೀಡಿ,
ಆದರೂ ಅಲ್ಲಿ ಅರೆಬರೆಯ ಹೊಳಪಿನಲಿ, ಮುಗ್ಗರಿಸುತಿರುವ ಜೀವ
ಅಮರತ್ವವಿರುವ ಆ ಏಕಮೇವದಿಂದೆರಕಗೊಳ್ಳುತಿರುವ,

ಮನುಜನಿದೊ ಬೆಳಗಲೆತ್ನಿಸಿದ ತನ್ನ ಆಶೆಯ, ಕ್ಷೀಣ–ದೀವಟಿಗೆ
ಮುಂಚೂಣಿಯಲ್ಲಿ ಅದು ತೋರುತಿಹುದು ವಿಫಲತೆಯ ಅಂಚು ಮಾತ್ರ,
ಋತದ ತುಣುಕೊಂದು ತಾನಿರಲು ಅವನ ಸುವ್ಯಾಪ್ತ ಇಚ್ಛೆಯಾಗಿ,
ಅವನ ಆ ತೀರ್ಥಯಾತ್ರೆಯಲಿ ಇದುವು ಧರ್ಮಛತ್ರ ಒಂದಾಗಿ.

ಮನುಜರಂಜುವರು ಸತ್ಯಗಳ ಮೂಲ ಋತಕೆ, ಅದನಲ್ಲಗಳೆದು,
ಕಾಂತಿಗಳ ಮೂಲ ಆ ದಿವ್ಯ–ಬೆಳಕ ಕಡೆಗಣಿಸಿಕೊಂಡು ಇವರು,
ಅನಭಿಜ್ಞ ದೇವಗಣವನ್ನು ಭಜಿಸಿ ಆ ಕ್ರಂದದೊಳಗೆ ಇಂತು
ಅಲ್ಲದಿರೆ ಓರ್ವ ರಕ್ಕಸನ ಇವರು ಬದಲಾಯ್ಕೆಗೊಂಡು ನಿಂತು.

ಲಭ್ಯಗೊಂಡೆಲ್ಲವೀಗಿದೋ ಮತ್ತೆ ಖಚಿತದಲಿ ಮರಳಿ ಕೋರಿ
ಪ್ರತಿ ರಿಪುವನೀಗ ಕತ್ತರಿಸಿ ಮತ್ತೆ ಪೂರ್ವರೂಪಕ್ಕೆ ಸಾರಿ,
ಪ್ರತಿ ಸಮರವೀಗ ಹೋರಾಟವಾಗ, ಹೋರಾಟ ಮತ್ತೆ ಸಾಗಿ
ನಿಷ್ಫಲದ ಜೀವ–ಜೀವಗಳ ಚಿತ್ತ–ವೀಥಿಕೆಯ ಮಾರ್ಗವಾಗಿ.

ಛಿದ್ರಗೊಳಿಸಿರುವ ನನ್ನ ಗಾಯಗಳು ಸಾವಿರದ ಮೇಲೆ ಒಂದು
ಜೊತೆಗಿದೋ ದೈತ್ಯ–ರಾಜ ಮಂಡಳಿಯ ಆಕ್ರಮಣವಿದುವು ಇಂದು;
ನನ್ನ ಕಾರ್ಯದಾ ಸಫಲತೆಯವರೆಗೆ ವಿರಮಿಸಲು ಇಲ್ಲ ಸಾಧ್ಯ
ಶಾಶ್ವತದ ಇಚ್ಛೆ ಸುತ್ತಿಗೆಯ ಪೆಟ್ಟಿನಲಿ ತಾನು ಚಿತ್ತಗೊಳಲು ವೇದ್ಯ.

ಅಣಕುಗೈದಿಹರು ನುಸುಳಿ ದಾನವರು ಜೊತೆಜೊತೆಗೆ ಮನುಜರಿವರು!
ನಿನ್ನ ಅಭಿಲಾಶೆ ಶಶವಿಷಾಣದಾ ಶಿರವಾಗಿ ರೂಹುಗೊಂಡು
ಆ ಗಗನಕೀಗ ಲೇಪಿಸಿದೆ ಅದರ ಅತ್ಯುಗ್ರ ಜ್ವಾಲೆ ಗುರುತು;
ನೀನಗಿದೊ ಪತನ, ಜೊತೆಗಿದೋ ನಿನ್ನ ಕಾರ್ಯಗಳು ಮೃತಪ್ರಾಯ.

ಸ್ವರ್ಗೀಯ ನೆಲೆಯ ನೆಮ್ಮದಿಗೆ ನೀನು ಸೂಕ್ತಿಗಳ ರೂಪುಗೊಳಿಸಿ
ಆನಂದ ಮತ್ತೆ ಸ್ವರ್ಣಧಾಮವನು ಸೃಷ್ಟಿಗೈದಿರುವೆ ನೀನು,
ನಮಗಿದೋ ಇದನು ನಿರ್ಮಿಸದೆ ನೀನು, ಪರಿತ್ಯಕ್ತರಂತೆ ಸಾಗಿ,
ಅವಚೇತದುದಧಿಗಳ ಜೊತೆಗೆ ಜೀವನದ ಗುಮ್ಮಟದ ಒಳಗೆ?

ನಮ್ಮದಿದೆ ಈಗ ಈ ಬುವಿಯು ತಾನು, ಬರಿತಮದ ಕ್ಷೇತ್ರವಾಗಿ
ನಮ್ಮದೇ ಕ್ಷೀಣ ಚಂಚಲದ ಜ್ವಾಲೆಗಳಲೀಗ ಸಿಲುಕಿ ಸಾಗಿ.
ಅದು ಹೇಗೆ ತಾನೆ ಆ ಗೂಢ–ಬೆಳಕ ಕಿರು–ತೊರೆಯಲೀಗ ಪಡೆದು?
ಅಲ್ಲದಿರೆ ಇದುವೆ ಅದು ಹೇಗೆ ದೇವನಿಚ್ಛೆಯನು ಸಹನವಡೆದು?

"ಕತ್ತರಿಸಲವನ ಉದ್ಯುಕ್ತವಾಗಿ ಜೊತೆ ಬಾ, ತಡೆಯಲವನ ಕ್ರಮವ!
ಆಗಲ್ಲಿ ಮಾತ್ರ ನಮ್ಮ ಹೃದಯಗಳು ಮುಕ್ತತ್ವ ಪಡೆದುಕೊಂಡು
ಆ ಭಾರದಿಂದ, ಮತ್ತವನ ಬಲಕ– ವೈಭವಕೆ ಕರೆಯನಿತ್ತು
ವ್ಯಾಪ್ತಗೊಂಡಿರುವ ಶುಭ್ರ–ಶಾಂತಿಯನು ನೆಲೆಯನಿತ್ತು."

ಮೃತ್ಯುವಶವರ್ತಿ ನನ್ನ ಹೃದಯದಲಿ ಇದೋ ದೇವನಿಹನೀಗ
ಅದೃಷ್ಟ ಮತ್ತೆ ದೋಷಗಳ ಜೊತೆಗೆ ತಾ ಮಲ್ಲಯುದ್ಧದೊಳಗೆ,
ಬರಿ ಜವುಳು ಕೆಸರು ಜೊತೆಗಿದೋ ಹಾಳು–ಪಥಗಳನು ತುಳಿದು ಸಾಗಿ
ನಾಮರಾಹಿತ್ಯದಾ ನಿರ್ಮಲವನೀಗ ಪಡೆಯಲಿಕ್ಕಾಗಿ.

ಅಬ್ಬರಿಸಿತೀಗ ಧ್ವನಿಯು, ನಡೆ, ಯಾರು ನಡೆಯದಾ ಪಥವ ಅರಸಿ!
ಖನನಗೈಯುತಲಿ ಆಳದಾಳಕ್ಕೆ ಆ ಘನದ ತಲಾತಲಕೆ
ಆ ರೌದ್ರಪೂರ್ಣ ವಾಸ್ತುಶಿಲೆಯನ್ನು ನೀ ಸ್ಪರ್ಶಗೊಳುವವರೆಗೆ
ಜೊತೆಗಿದೋ ಬೀಗ–ಬಂಧನವು ಇರದ ದ್ವಾರಗಳ ತೆರೆವವರೆಗೆ.

ಆಳದಾಳದಲಿ ಬಿತ್ತಿರುವ ಒಂದು ಮಿಥ್ಯಾಭಿಮಾನ ಕಂಡೆ
ಸರ್ವ–ವಸ್ತುಗಳ ಬೇರಿನಾಳದಲಿ ಹುದುಗಿರುವದನ್ನು ಕಂಡೆ
ದೇವನಾ ಗೂಢ – ಪ್ರಶ್ನ–ಸುಪ್ತಿಗಿದೊ, ಧೂಸರದ ಸ್ಫಿಂಕ್ಸ–ರಕ್ಷೆ
ಅಲ್ಲಿದೋ ವ್ಯಾಲಸರ್ಪವದು ಚಾಚಿ ತನ್ನ ರೆಕ್ಕೆಗಳ ಕಕ್ಷೆ.

ಮನದ ಮೇಲಿದೋ ಆವರಣಗೊಂಡ ವರ್ಣಗಳ ನಾನು ತೊರೆದು
ಜೀವ–ಜೀವನದ ಅತೃಪ್ತದುದಧಿಗಳನೀಗಿಲ್ಲಿ ನೀಗಿ ನಡೆದು,
ದುರ್ಗಮದ ಮಾರ್ಗ ಮೋಹದಲಿ ಸಾಗಿ ತಲ್ಲೀನಗೊಂಡೆ ಈಗ
ಅಧೋಲೋಕದಾ ಬೆಡಗುಗಳಲೀಗ ನಾ ಲೀನಗೊಂಡು ಬೇಗ.

ಈ ಜಡದ ಬುವಿಯ ಬಲುಭೀತ ಹೃದಯಗಳಲಾನು ಬಲದಿ ನಿಂದು
ಆಲಿಸಿದೆ ಜೊತೆಗೆ ಅವಳ ಆ ಸ್ಥೂಲ–ಘನತಮದ ಘಂಟೆ ನಾದ.
ನಾನಲ್ಲಿ ಕಂಡೆ ಅವಳ ಯಾತನೆಯ ಘಾತಗಳ ಮೂಲದಂಶಗಳನು
ಅಂತರಂಗದಲಿ ನರಕದಾ ಆ ಘೋರ ಆಂತರ್ಯ–ಹೇತುವನ್ನು.

ನನ್ನ ಊರ್ಧ್ವದಲಿ ವ್ಯಾಲಸರ್ಪದಾ ಮರ್ಮರದ ಸಪ್ರಲಾಪ
    ಮತ್ತೆ ಆ ಭೂತ–ಬೇತಾಳ ನಿಶೆಯ ಧ್ವನಿಗಳಬ್ಬರದ ತಾಪ;
ಚಿಂತನವು ಉಗಮಗೊಂಡಿರುವ ಶೂನ್ಯವನು ನಾನು ಛಿದ್ರಗೊಳಿಸಿ,
    ಸಂಚಲನಗೊಂಡೆ ತಳವಿರದ ಆಳದಲಿ ನಾನು ನನ್ನನಿರಿಸಿ;

ನನ್ನ ಪಾದಗಳು ಹೆಜ್ಜೆ–ಹೆಜ್ಜೆಯಲಿ ಹತಾಶೆಯ ಮೆಟ್ಟಿಲೇರಿ,
    ನಿಸ್ಸೀಮ ಶಾಂತದಾ ರಕ್ಷೆಕವಚದೊಲು ಭದ್ರವಾಗಿ ಇಂತು
ದೇವವ–ವೈಭವದ ಆ–ಜ್ವಾಲೆಗಳನು ನಾನಿಲ್ಲಿ ತರುತಲಿರುವೆ
    ಈ ಮನುಜನತಲ ಅಂತರಂಗದಲಿ ನಿತ್ಯದಲಿ ಬೆಳಗುಗೊಳಿಸಿ.

ಯಾರು ನಾನಾಗಿ ಈಗಲೂ ಸಹಿತ ನನ್ನಲ್ಲಿ ನೆಲೆಸಿಕೊಳಲು;
    ದೂರ ಸರಿಯುತಿವೆ ಸರ್ವ ಗವಸುಗಳು ತರಿತರಿದುಕೊಂಡು ಸಾಲು.
ಶ್ರುತಿಗೊಂಡೆ ನಾನು ಆ ಪರಮವಾಣಿ, ಅವನಿಚ್ಛೆಯನ್ನು ಸಹಿತ
    ಬಾಧೆಗೊಳ್ಳದಿಹ ಬೋಧೆ ತುಂಬಿರುವ ಸುವಿಶಾಲ ಭ್ರಕುಟಿಗಳಲಿ.

ಅತಲಗಳ ತುಂಬಿ ಆಖಾತವಿದುವು, ಊರ್ಧ್ವ ಜೊತೆ ಸೇತು–ಬಂಧ
    ಆ ಸ್ವರ್ಣಧಾರೆ ಧಾರೆಯಭಿಷೇಕ ತಾನೀಗ ಸತತ ಛಂದ,
ನೀಲಮಣಿ–ಶಿಖರದಡಿಯಲ್ಲಿ ಇಂದ್ರಚಾಪವದು ರಚಿತಗೊಂಡು
    ಜೊತೆಜೊತೆಗೆ ಮಿಂಚು–ಮಿಂಚುಗಳ ಲೀಗ ದಂಡೆಗಳು ಉಗಮಗೊಂಡು.

ಬುವಿಯ ಹೃದಯದಿ ದಿವದ ದಿವ್ಯಾಗ್ನಿ ಪ್ರಜ್ವಲನಗೊಂಡಿತೀಗ
    ಮತ್ತೆ ಅಕ್ಷಯದ ಸೂರ್ಯ–ತೇಜಗಳು ಉಜ್ವಲನಗೊಂಡವೀಗ;
ಸೃಷ್ಟಿ–ಸೀಮೆಗಳ ಅಚ್ಚರಿಯ ಸಂಧಿ ಸಂಧಿಗಳ ಮಾರ್ಗದಿಂದ
    ಅವತರಣಗೊಳುವ ಚಿತ್ತುಗಳ ಛಂದ–ಉತ್ಕಂಠ ಸ್ಪಂದದಿಂದ.

ಋತದ ಸಂಗಾತಿ ಆನಂಧ ಘನದ ವೈರಾಜ್ಯ ಜ್ವಾಲೆ ಮಾಲೆ;
    ತಲಕಿದೋ ಒಂದು ಅರುಣವರ್ಣದಾ ಸೋಪಾನ ಪಥದ ಲೀಲೆ
ನಂದನದವನದ ದೇದೀಪ್ಯಮಾನ ಸಂಕುಲವು ಇದುವು ತಾನು
    ತಮದ ಅಂತಿಮವ ತೀವ್ರಗೊಳಿಸುತಲಿ ತುರೀಯಾವಸ್ಥೆ ಇನ್ನು.

ಜೊತೆಗಿದ್ದೋ ಕೊಂಚ ಅಧಿಕದಲಿ ಮತ್ತೆ ಜೀವನದ ನವ್ಯ–ದಾರ
ರಜತ–ಕಾಂತಿಯಲಿ ಸೃಜನಗೊಳ್ಳುತಿವೆ ತಾ ಶಿಲ್ಪಗೊಂಡು ಪೂರ
ಅದರ ಸ್ವರ್ಣಿಮದ ಆಚ್ಛಾದ ಮತ್ತೆ ವರ್ಣಮೇಳದೀ ತಲಗಳಲ್ಲಿ
ಅನಾವೃತಗೊಂಡ ಭಾಸುರದ ಬೃಹತ್–ಲೋಕದಾ ಜೊತೆಗೆ ಇಲ್ಲಿ.

ಅವರ ವೈರಂಭಣದ–ಪವನ, ಅಲ್ಲಿರಿಸಿ ಎನ್ನ ಸ್ವಪ್ನಗಳನು,
ಸ್ವರ್ಣಿಮದ ಜೊತೆಗೆ ನೀಲಮಯದಂಬರವ ಪಡೆದು ತಾನು–
ಸಾರೂಪ್ಯಗೊಂಡು ಈ ಬುವಿಯ ಮೇಲೆ ಸಂಚಲನಗೊಳಲು ಇಲ್ಲಿ
ನಿನ್ನ ಸತ್ಯವನು, ನಿತ್ಯ ಸ್ಪಂದನದಲೀಗಿಂತು ನೆಲೆಸಲೆನಲು.

**1935–36 CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/538**

---

**ಟಿಪ್ಪಣಿ:**

ಕಲ್ಪನಾ ಪ್ರಾಣಿ (ಚಿಮೇರಾ); ಇದು ಸಿಂಹ, ಅಜ(ಮೇಕೆ) ಮತ್ತು ಸರ್ಪದ ತಲೆಯನ್ನು ಹೊಂದಿದ ಕಾಲ್ಪನಿಕ ಪ್ರಾಣಿ. ಇದನ್ನು ಕ್ಯಾಲೆಂಡರದಂತೆಯೂ ಉಪಯೋಗಿಸಲಾಗುತ್ತಿತ್ತು. ಈ (ಚಿಮೇರಾ) ಅಮರತ್ವವನ್ನು ಹೊಂದಿದೆ ಎನ್ನುವ ವಿಶ್ವಾಸವಿದೆ. ಇದು ಕಾಲ ಮತ್ತು ಕಾಲಾತೀತ ಎರಡನ್ನೂ ಪ್ರತಿನಿಧಿಸುತ್ತದೆ. ಋತುಮಾನಗಳಿಗನುಗುಣವಾಗಿ ಪ್ರಕೃತಿಯಲ್ಲಿ ಆಗುವ ಪರಿವರ್ತನೆಯನ್ನೂ ಸಂಕೇತಿಸುತ್ತದೆ. (ಈ ವಿಷಯವನ್ನು ರಾಬರ್ಟ್ ಗೇವ್ ಎನ್ನುವವರು ವಿವರವಾಗಿ ದಾಖಲಿಸಿದ್ದಾರೆ.)

ಇನ್ನು ಕೆಲವು ಪ್ರತಿಪಾದನೆಗಳಲ್ಲಿ ಮೇಕೆಯ ದೇಹ, ಸರ್ಪದ ಬಾಲ, ಮತ್ತು ಸಿಂಹದ ಶಿರವನ್ನು ಹೊಂದಿದಂತೆ ರೂಪಿತವಿದೆ. ಇದರ ಶ್ವಾಸೋಚ್ಛ್ವಾಸದಲ್ಲಿ ಸದಾ ಅಗ್ನಿ ಇರುತ್ತದೆ. ಇದನ್ನು ಸ್ತ್ರೀ ಸ್ವರೂಪದಲ್ಲಿ ಕಾಣಲಾಗುತ್ತದೆ.

## 5. ರೂಪಾಂತರ

ಸೂಕ್ಷ್ಮಾತಿಸೂಕ್ಷ್ಮ ಕಣದಿ ನಾದಮಯ ಧಾರೆಯೆನ್ನುಸಿರು ಸತತ;
ಅದು ಭರಣಗೊಳಿಸಿ ನನ್ನ–ಮಂಡಳಿಯ ದಿವ್ಯ–ಬಲ ಮಹಿಮೆ ನಿರತ:
ಆ ಅನಂತ್ಯವನು ಪರಮನಾ–ಮಧುವು ಎಂದೀಗ ಪಾನಗೊಂಡೆ
ಕಾಲವಿದು ನನ್ನ ನಾಟಕದ–ರಂಗ ವಾ ಗರ್ಭಸ್ಥ–ಸ್ವಪ್ನ ಕಂಡೆ.

ಕಾಂತಿಮಯವೆನ್ನ ಕೋಶಗಳು ಈಗ ಹ್ಲಾದದುಜ್ವಲದ ಯುಕ್ತಿ
ಜೊತೆಗಿದೋ ನನ್ನ ರೋಮಾಂಚ ಮತ್ತೆ ಶಾಖೆಗಳ ನಾಡಿ ಶಕ್ತಿ
ಉತ್ಕರ್ಷ– ಪುಲಕದಲಿ ಮತ್ತೆ ಸೂಕ್ಷ್ಮ ಪಾರಿಭಾಸಿಕ –ಸ್ರೋತದಲ್ಲಿ
ಅಜ್ಞಾತ ಮತ್ತೆ ಪರಮದಾಂತರ್ಯ ಅಂತಃ–ಸ್ಪಂದ ವಹನದಲ್ಲಿ

ನಾನಲ್ಲವಿನ್ನು ಮಾಂಸ–ಮಜ್ಜೆಗಳ ವಶವರ್ತಿಯಿದ್ದ ಜೀವ
ದಾಸ ನಾನೋರ್ವ ಪ್ರಕೃತಿಗಿದೊ ಮತ್ತವಳ ನಿಯತ–ಶಾಸನಕೆ;
ಸಂಕುಚಿತಗೊಂಡ ಭಾವಗಳ–ಜಾಲದೊಳಗೀಗ ಸಿಲುಕದಿರುವೆ.
ನನ್ನಾತ್ಮವೀಗ ಕ್ಷಿತಿಜಗಳ ಮೀರಿ ಅಪರಿಮೇಯ ವಲಯ–ತಾಣ

ನನ್ನ ಕರಣವಿದು ಪರಮನಾ ತೋಷಕಿದು ಸಜೀವದುಪಕರಣ,
ನನ್ನ ಚಿತ್ತವಿದು ಸಾವಿರದ–ಬೆಳಗು ಸುವ್ಯಾಪ್ತ ಸೂರ್ಯ–ಕಾಂತಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/561**

ತಲ್ಲೀಯ ಘನದ ಆ ಬೋಧಿಯಲ್ಲಿ ಅನುಬಂಧಗೊಂಡ ಚಣದಿ
ಆ ಎಡೆಗೆ ಸರಿವ ಆ ಒಂದು ಚಲನ ಜಾಗರದಿ ಅರಳಿ ಮುದದಿ
ಅಧಿಮಾನಸೀಯ ಆ ಅಂಚಿನಿಂದ ಮಗುದೊಂದು ಜಗಕೆ ಏರಿ
ನಿರ್ಮಾಯ ಮೌನದಾ ತಾಣದಂಚು ಅವನೀಗ ದಾಟಿ ಸಾರಿ,
ಗುಹ್ಯದಾತ್ಮವನು ಅರಿಯಲೀಗಲ್ಲಿ ಈ ಬಾಹ್ಯ ಚಕ್ಷು ಅಂಧ
ಅದು ಆತ್ಮ ಸ್ಪರ್ಶಕಿದೆ ಆತ್ಮ ದರ್ಶ ಆತ್ಮಾನುಸ್ಪಂದ ಬಂಧ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 7 ಪುಟ 211)**

## 6. ಸ್ವರ್ಣ ಜ್ಯೋತಿ

ನನ್ನ ಸಾವಿರದ–ದಳದ ತಾವಿನೆಡೆ ಅವತರಣ ಸ್ವರ್ಣ ಜ್ಯೋತಿ
ಧೂಸರದ ಛಾಯೆ ತುಂಬಿದ್ದ ಮನಸುಗಳಿಗೀಗ ಸೂರ್ಯ–ಕಾಂತಿ
ಪ್ರಜ್ಞಾನ ಸಮತೆ ಆವರಣಗೊಳಲು ಮರುಧ್ವನಿಯು ನವ್ಯ ತೇಜ
ಘನಶಾಂತ ಸಾಂತ ಉತ್ಕ್ರಾಂತ ಜ್ವಾಲೆ ಮಿನುಮಿನುಗು ನಿತ್ಯ ಓಜ

ವೈಖರಿಯ ಸ್ವರ್ಣಕಾಂತಿಯದು ಈಗ ಕಂಠದಲಿ ಬೆಳಗಿ ಬರಲು
ನನ್ನ ಧ್ವನಿಯೆಲ್ಲ ದಿವ್ಯನಾದದಲಿ ಅಲೆಯಲೆಯ ರೂಪವಿರಲು
ನಿನ್ನ ಹೃನ್ಮನದ ದಿವ್ಯಗಾನವದು ನನಗೊಂದು ಪಾಠವಾಗಿ
ಅಮೃತದಲಿಮಿಂದು ಅಮೃತವನು ಸವಿದ ಧ್ವನಿಯೆಲ್ಲ ನನ್ನದಾಗಿ

ಆ ಸ್ವರ್ಣಜ್ಯೋತಿ ಅವತರಣಗೊಂಡು ಈ ನನ್ನ ಹೃದಯದಲ್ಲಿ
ಶಾಶ್ವತದ ಜೊತೆಗೆ ನನ್ನ ಉಸಿರುಸಿರು ಮೇಳೈಸಿ ನಿತ್ಯದಲ್ಲಿ
ಬೆಳೆಬೆಳೆದು ನಿಂದು ದೇವಳದ ತೆರದಿ ಎಲ್ಲೆಡೆಗೆ ನಿನ್ನ ಕಲೆಯು
ಸರ್ವ ಸರ್ವಸ್ವ ಮಿಡಿತ–ಮಿಡಿತಗಳು ನಿನ್ನೆಡೆಗೆ, ನಿತ್ಯ ಝರಿಯು

ಆ ಸ್ವರ್ಣಜ್ಯೋತಿ ತಾನಿಳಿದು ಬಂತು ದಟ್ಟಡಿಯ ಹೆಜ್ಜೆಗೀಗ
ನನ್ನ ಮೂಲವಿದು ನಿನ್ನ ಆಟಕ್ಕೆ ಜೊತೆಗೀಗ ಪೀಠವಾಗ

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/605**

## 7. ಅಜ್ಞೇಯದ ಆಹ್ವಾನ

ಸಾಕಾರಗೊಳದ ಆಕಾರ–ವಸ್ತುಗಳ ಎಡೆಗೆ ನಮ್ಮನೀಗ
ದೇವ–ಕಣವೊಂದು ನಮಗೀಗ ಹರಸಿ ತಾ ಚಲನ ತೋರಿತೀಗ,
ಸುವ್ಯಾಪ್ತದಾಪ್ತದಪ್ಪುಗೆಯ ಭವ್ಯ–ಬಾಹುವಿನ ಗಮ್ಯದೊಳಗೆ
ಸುಪ್ತಿಯಲಿ ಸ್ಥಿತದ ನಿರ್ಲಿಪ್ತವಿರುವ ಆ ಗೂಢ ದಿವ್ಯ ನೆಲೆಗೆ.

ಜಗವೊಂದು ತಾನು ಪಡೆಯುತಲಿ ಮಾರ್ಗದರ್ಶನವನೀಗಲಿಂತು
ಫಡಫಡಿಸುತಿರುವ ನಿಶ್ಶಬ್ದಘನದ ರೆಕ್ಕೆಗಳಲೀಗಲಿಂತು
ಅವುಗಳಪರೂಪ ಅಜ್ಞೇಯವನ್ನು ಕಾಪಿಡುವ ತವಕ ತುಡಿತ
ಆಶ್ರಯವನಿತ್ತು ರಕ್ಷಿಸುತಲಿಂತು ನಿತ್ಯತ್ವದಲ್ಲಿ ಮಿಡಿತ

ಆದರೀಗಿದೋ ಘನನೀಲಮಯದ ಈ ದ್ವಾರಗಳ ಸರಣಿ ಹೀಗೆ
ಕಂಪನದಲಿಂತು ಸುವಿದಾಯಗೊಳಿಸುತಿರುವ ಅಪರೂಪ ಘಳಿಗೆ;
ಅದ್ಭುತಾದ್ಭುತದತೇಜ–ಕಾಂತಿಗಳು ದೃಷ್ಟಿಸುತ ಈಗ ಇಲ್ಲಿ
ಸ್ವಪ್ನದುಂಬಿರುವ ನಮ್ಮ ಚಕ್ಷುಗಳಗಳಲೀಗ ಮಿಲನದಲ್ಲಿ;

ನಾವಿದೋ ಧರಿಸಿ ಅಭಿಮಾನಪೂರ್ಣ ಚಿರದೇವ–ಗಣವನೀಗ
ಜೊತೆಗಿದೋ ಮತ್ತೆ ತೇಜತ್ವಪೂರ್ಣ ನಿಯತಿಗಳ ಭಾಗ್ಯ–ಭಾಗ;
ಆಯಾಮ–ರೂಪ ವದನ–ಸ್ವರೂಪ ಜೊತೆ ಬಾಹು–ಬಾಹು ಕಂಡು
ಸ್ವರ್ಗದಿಂದುದಿತಗೊಂಡೀಗ ಸನಿಹ ಆಗಮಿಸಿ ಬಂದು ನಿಂದು.

ಊರ್ಧ್ವದಲಿ ನಿತ್ಯ ಪ್ರಜ್ವಲನವಿರುವದೇನಿದೋ ಈಗ ತಾನು
ನಮ್ಮೆದೆಯ ತಮದಿ ಅಂಧಕಾರದಲಿ ಈಕ್ಷಿಸುತಲಿಹುದು ತಾನು,
ಅಪ್ರಾಪ್ಯವಿರುವ ಪರಮಾತಿ ಪರಮ–ಆನಂದ ಸ್ಪಂದ ತಾನು
ಇದು ನಮ್ಮ ಭವ್ಯ–ದಿವ್ಯತೆಯ ಹಕ್ಕು ಆಜನ್ಮಸಿದ್ಧ ತಾನು.

ನಮ್ಮ ಈ ಮಂದ–ಆತ್ಮಗಳ ಬಂಧ ಸೌಂದರ್ಯವಿಂದು ಹೀಗೆ
ಪ್ರಗತಿಗೊಳ್ಳುತಿರೆ ಪ್ರೇಮಪೂರ್ಣತೆಯ ಬಂಧಾನುಬಂಧದೊಳಗೆ

ನಾವೀಗ ಇಲ್ಲಿ ಆ ಉತ್ತರಾಧಿಕಾರಗಳ ಹಕ್ಕಿನೊಳಗೆ
ಸುವ್ಯಾಪ್ತ ಸ್ಥಿತದನಂತತೆಯ ವಂಶವಾಹಿನಿಯ ಸರಣಿ ಹಾಗೆ

ಅಜ್ಞೇಯವಿದುವು ಇದು ನಮ್ಮ ಗವಸು ನಾವಿರಿಸಿಕೊಂಡೆವೆಮಗೆ
ವಸ್ತು–ವಿಷಯಗಳಲಿಂತು ರೂಪಿತದ ಆವರಣ ಛಾಯೆಯೊಳಗೆ
ಮೃತ್ಯುವಶವರ್ತಿವಿದು ತಾನು ಹೀಗೆ ದ್ವಾರದೊಲು ತಾಣಗೊಂಡು
ಅಮರತ್ವದೆಡೆಗೆ ಆರೋಹಗೊಳಲು ಸತತದಲಿ ತನನವಿಂದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/595**

ವಿಜ್ಞಾನಮಯದ ಸಂಭೂತಿಪವನದನುಭೂತಿಗೊಳಲು ಪುಟಿತ
ಆಕಾಶಕೇರಿ ತಾ ಸ್ಪಂದಗೊಳುವ ಆ ಹಂತವಿರಲು ಸಹಿತ,
ಚಿಂತನದ ಊರ್ಧ್ವದುಡ್ಡಯನ–ಪಯಣ ತಂತಾನೆ ತಾನು ಇಲ್ಲಿ
ಚಿದ್ಘನದ ಗಗನ–ನೀಲದಲಿ ಮಾತ್ರ ತಾ ಲೀನವಾಗದಿಲ್ಲಿ
ಸಂಯಮದ–ಶಾಂತ ತರ್ಕ–ಜಾಗ್ರತದ ಪ್ರಾಣ ತಾನೊಂದು ಹೀಗೆ
ಜೀವನವನಿಂದು ನಿಯತಿ–ನಿಯಮನದಿ ಅಧಿಪತ್ಯ ನಡೆಸಿ ಹಾಗೆ;
ನಿರ್ಧರಣೆಗೊಂಡ ಚಿಂತನಕೆ ಇಂತು ಸಾರೂಪ್ಯ ಧರಿಸಿಕೊಂಡು
ಅದರ ಲೀಲೆಗಳು ಅದರದೇ ಸೂಕ್ತ ಉಪಕರಣವಾಗಿ ನಿಂದು,
ಅಗ್ನಿಯಾಂತರ್ಯ ಧರಿಸಿ ಪ್ರಜ್ವಲಿಸೆ ಲೋಕ–ಜ್ವಾಲೆಗಳನು
ಸ್ವೀಕರಿಸೆ ಅಗ್ನಿ–ಸ್ಪರ್ಶವನು ಈಗ, ಶೀತಲದ ಚರಮ–ಸೀಮೆ ತಾನು.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 3 ಪುಟ 497)**

---

**ಟಿಪ್ಪಣಿ:**

Heaven's blue (ಸ್ವರ್ಗೀಯ ನೆಲೆಯ ಘನ–ನೀಲ)

1) ಪ್ರಾಣವಾಯು: ಇದರ ವರ್ಣ ಇಂದ್ರನೀಲವಾಗಿರುತ್ತದೆ.
2) ಸಮಾನವಾಯು: ನಾಭಿಸ್ಥಾನದಲ್ಲಿರುತ್ತದೆ.. ಇದರ ವರ್ಣವೂ ನೀಲವಾಗಿರುತ್ತದೆ.
3) ಧನಂಜನವಾಯು: ನೀಲವರ್ಣ; ಬ್ರಹ್ಮರಂಧ್ರ ಸ್ಥಾನದಲ್ಲಿರುತ್ತದೆ; ಕರ್ಣದಲ್ಲಿ ಅರ್ಣವದ (ಸಮುದ್ರದ) ಘೋಷದ ಮೂಲಕ ಸಂವಹನಗೊಳ್ಳುತ್ತದೆ. ಇದು ವ್ಯಕ್ತಿಯ (ಜೀವಿಯ) ಮರಣ ಕಾಲದವರೆಗೂ ಇರುತ್ತದೆ.

## 8. ಉಷೆ ಬಂದಳೀಗ ಅವಕಾಶದೊಳಗೆ

ನಿರ್ಗುಣದ ಘನದ ನಿರ್ಮಾಯ ಮೌನ ಮಾರ್ದವದ ಸುಪ್ತಿಯೆಡೆಗೆ
ಅನಾಹತದಲ್ಲಿ ಮಂದ್ರ–ಮಂದ್ರದಲಿ ಸ್ಪಂದನವ ತಂದು ಎದೆಗೆ
ಸೂಕ್ಷ್ಮಾತಿಸೂಕ್ಷ್ಮ ಮೃದು ಮಧುರ ಹಿತದಿ ನವಿರಿನಲಿ ಕಾಂತಿಯಾಗಿ
ಉಷೆ ಬಂದಳೀಗ ಅವಕಾಶದಲ್ಲಿ ವೈರಂಭಣ ಪವನವಾಗಿ.॥ ಸಾವಿತ್ರಿ 5–1 ॥

ಮತ್ತಿದೋ ಇಲ್ಲಿ ಸ್ಫುರಿತ ಕಂಪನದ ನಾಡಿ–ಸ್ಪಂದನದ ಮಾಲೆ
ನೀಲಲೋಹಿತದ ವೃಕ್ಷ–ಸಂಕುಲವು ನಿಶ್ಶಬ್ದ ಘನದ ಲೀಲೆ
ಅವನ ಆಧೀನದಲ್ಲಿದೋ ಪ್ರಭೆಯ ಚಿಂತನದ ರತ್ನ–ಮೇಳ
ಗಂಧರ್ವ ರಾಜ್ಯದರಸುಗಳ ಪರಮ ಹರುಷದಾ ಸ್ವಪ್ನ–ತಾಳ.

ಭೂ–ಬದುಕ ಮನದ ಇಡುಕಿಡುಕು ಕೋಣೆಗಳ ಹುಡುಕಿ ಬೆಳಗಲೆಂದು
ಆ ಒಡಲ ಗುಟ್ಟು ಮೋದಕದು ಹುಟ್ಟು ಇಕ್ಕಟ್ಟು ಮೀರಲೆಂದು
ಮಧುರ ಮರ್ಮರದ ಸಲಿಲ–ಧಾರೆಗಳ ಅವರೋಹ ತಾಳಗಳಲಿ
ಮಂದ್ರ–ಛಂದದಲಿ ಸ್ವರ್ಣ ಛಾಯೆಯಲಿ ಅಮೃತವದು ಧಾರೆಗಳಲಿ

ಪರಾಕಾಶದಾ ಪ್ರಜ್ವಲನಶೀಲದುಜ್ವಲವು ತುಂಬಿ–ಸ್ಪಂದ
ಪ್ರಚ್ಛನ್ನ–ಸರಣಿ ಸರಣಿಗಳ ಪಥದಿ ನಿನದದಲಿ ನಾದ–ಛಂದ
ಸಾನಂದಪೂರ್ಣ ಸಮ್ಮೇಳ–ಮಂದ್ರ ಗಾನವದು ಈಗ ಜೊತೆಗೆ
ಮಧುಮಧುರವಾಗಿ ಮಾಧುರ್ಯಪೂರ್ಣದಾವರಣ ಹೊದಿಕೆಯಾಗೆ,

ಅಗೋಚರದ ಕರಮೇಳ ಉತ್ಕಂಠದುಂಬಿ ಅಪ್ಪಳಿಸಿತೀಗ ತಾನು
ಆಲಿಸಿದನವನು ಹೃದ್–ಭಾವಸ್ಪಂದ ಸಮ್ಮಿಲನದೊಳಗೆ ಅದನು
ಸಾನಂದಪೂರ್ಣ ಸಮ್ಮೇಳ ಈಗ ಮಂದ್ರ–ನಾದವದು ಜೊತೆಗೆ
ಮಧುಮಧುರವಾಗಿ ಮಾಧುರ್ಯಮಯದಿ ಆವರಣ ಹೊದಿಕೆಯಾಗೆ,

ಸ್ವರ್ಗಸೀಮೆಯಾ ಗಂಧರ್ವ–ಗಾನ–ಮೇಳಗಳು ಚಲನೆಯೊಳಗೆ
ಆ ತಂತುವಾದ್ಯದನುರಣ ಛಂದದಾನಂದ ನಿನದದೊಳಗೆ

ಮತ್ತಿದೋ ಜೊತೆಗೆ ಧ್ವನಿಪೂರ್ಣ ನಾದ–ಸುನಾದಗಳಾ ಲೀಲೆ
ಮಾಧುರ್ಯಭರಿತ ಆ ಅಲೌಕಿಕದ ಗೀತ–ಸಂಗೀತ–ಮಾಲೆ

ಅನಂತಾನಂತ ಪ್ರೇಮವನು ಇಂತು ಸಾಮದೊಳು ನಿನದಗೈದು
ಅದರ ಭವ್ಯತೆಯ ಅದರ ದಿವ್ಯತೆಯ ಸ್ತೋತ್ರದಲಿ ಪಠಣಗೈದು,
ಆನಂದಘನದ ನಂದನದವನದ ನಿತ್ಯತ್ವ ನಿನದಗೊಳಿಸೆ
ಆ ಶ್ವೇತ–ನೀಲ–ಚಂದ್ರಿಕೆಯ–ಕಿರಣ ಪವನವದು ಸ್ತವನಗೊಳಿಸೆ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 9 ಪುಟ 234)**

---

**ಟಿಪ್ಪಣಿ:**

(ವೈರಂಭಣ ವಾಯು ಎಂದರೆ ಸೂಕ್ಷ್ಮ ಅಕಾರದಿಂದ ಪ್ರಕೃತಿಯನು ಜಾಗೃತಗೊಳಿಸಿ, ಪ್ರೇಮ ಸೂತ್ರದ ಶ್ರದ್ಧೆಯನ್ನು ನೆಲೆಗೊಳಿಸುವ ವಾಯು. ದಶ ವಾಯುಗಳಲ್ಲಿ ಒಂದು ವಾಯು)

ನೀಲಲೋಹಿತ (Purple); ಇದಕ್ಕೆ ಕೆನ್ನೀಲಿ ಎಂದೂ ಕರೆಯುತ್ತಾರೆ. ಇದು (ಆಕಾಶ) ನೀಲದ ಸ್ಥಾಯಿತ್ವ ಹಾಗೂ ಕೆಂಪು ವರ್ಣದ ಶಕ್ತಿಯನ್ನು ಒಳಗೊಂಡಿರುತ್ತದೆ. ರಾಜಗೌರವ, ಉದಾತ್ತತೆ, ಘನತೆಯ ಪ್ರತೀಕ. ರಹಸ್ಯ, ಮಾಯ(ಅಭಿಚಾರ)ವನ್ನು ಸಂಕೇತಿಸುತ್ತದೆ. ಮುಖ್ಯವಾಗಿ ಕಲ್ಪನೆ ಹಾಗೂ ಆಧ್ಯಾತ್ಮಿಕ ನೆಲೆಯ ಆಯಾಮ. ಅತೀ ಮುಖ್ಯವಾಗಿ ಆತ್ಮವು ರೂಪಾಂತರಗೊಳ್ಳುವದನ್ನು ಹಾಗೂ "ಭವಿಷ್ಯದ" ಕಾಣ್ಕೆಯನ್ನು ತೋರುತ್ತದೆ. (Philosophy of colors)

ನೀಲಲೋಹಿತ; ಪ್ರಖರವಾದ ಮಿಂಚು/ಬಳ್ಳಿಮಿಂಚು ಬರುವಾಗ ಅದರ ಪ್ರಖರಾತಿಪ್ರಖರ ಬೆಳಕು (ಪ್ರಜ್ವಲನಾಂಕದ ಅತ್ಯಧಿಕತೆಯಿಂದಾಗಿ) ನೀಲವರ್ಣ–ದ್ದಾಗಿಯೇ ಇರುತ್ತದೆ. ಆದರೆ ಅದು ಮೇಘಗಳ ಮಧ್ಯದಲ್ಲಿಯೇ ಇರುವದರಿಂದಾಗಿ ಸಹಜವಾಗಿ ಬೂದಾ ವರ್ಣದ ಹಿನ್ನಲೆಯಲ್ಲಿ ಅದು ನೀಲಲೋಹಿತದಂತೆ ಕಾಣುತ್ತದೆ. ಇದರಲ್ಲಿ ನೀಲಾಂಶ ಅಧಿಕವಾಗಿದ್ದರೂ ಸಹಿತ ಬೂದಾ ವರ್ಣದ ಅಂಶ ಕಂಡೇ ಕಾಣುತ್ತದೆ. ಇದು ಪ್ರಕೃತಿ ಸಹಜವೋ ಅಥವಾ ಇದರಲ್ಲಿ ಅಡಕವಾಗಿರುವ ಚಿದ್ರಹಸ್ಯವೇನಾದರೂ ಇದೆಯೇ ಎನ್ನುವದು ಸಂಶೋಧಿಸಬೇಕಾದ ಸಂಗತಿ.

ಶ್ವೇತ–ನೀಲ–ಚಂದ್ರಿಕೆಯ ಕಿರಣ ಪವನ ಎಂದರೆ, ಅನಾಹತ ನಾದದ ಉತ್ಪತ್ತಿಗೆ ಕಾರಣವಾಗುವ ವಾಯು. ವಿವರಗಳಿವೆ.

## 9. ತಲ್ಲೀನ ಮೌನದಲಿ

ಜೀವನದ ಸರ್ವ ಪ್ರಲೋಭನೆಗಳಾ–ಕ್ರಂದದಿಂದಾನು ಮುಕ್ತ,
ಅವಳ ಆಹ್ಲಾದ ಮತ್ತೆ ಆ ದುಃಖ, ಸೌಂದರ್ಯ, ಸ್ಮಿತವು ಯುಕ್ತ.
ತಲ್ಲೀನ–ಮೌನದಲಿ ಮುರಲಿ ಮಧುರ ಮಾಯಕದ ಘಳಿಗೆ ನೇಹ
ಜೊತೆಗೆ ಮತ್ತಿದ್ದೋ ರೂಪ, ವರ್ಣಗಳು, ಸೂಕ್ಷ್ಮ–ಪರಮ ಸಮ್ಮೋಹ.

ಶ್ರುತಿಗೊಳುವೆ ನಾನು, ವ್ಯಾಪ್ತದೇಕೈಕ ನನ್ನಾತ್ಮದೊಳಗೆ ಇರಲು,
ನಾದ–ಸಂವಾದ, ಮಾನವನ ಅಧರಗಳು ಬಿಗಿದುಕೊಂಡಿರಲು;
ನಿರ್ವಿಶೇಷದಾ ಕರಣಗಳ ಅಚ್ಚರಿಯನೀಗ ನಾನು ಬಯಸಿ,
ನಿತ್ಯತ್ವದಾತ್ಮ ನಿರ್ಮಾಯಮೌನದಿಂದುದಿತ ಅದನು ಅರಸಿ.

ಮಾನವನ ಆತ್ಮದಾಂತರ್ಯಗಳಲಿ ಪ್ರಬಲದಿಚ್ಛೆ ಇದೆಯೊಂದು
ಅತಿದೀಪ್ತಿಮಯದ ಕ್ಷಿತಿತಲವು ತಾನು ಸಂತೃಪ್ತಿ ಗೊಳ್ಳದೆಂದು;
ಜೀವನದ ಜೊತೆಗೆ ಮನಸುಗಳ ವೈಭವದ ಜೊತೆಗಿದೊ ಸಂವಾದ
ಇವು ಸರ್ವ–ವ್ಯಾಪ್ತ – ವ್ಯಾಪ್ತ ವಿಷಯದಾ ಬಲುಮಂದ್ರ ಪೂರ್ವ ಸ್ಪಂದ

ಸಂದಿಗ್ಧಗೊಂಡ ಪರಾತ್ಪರದ ಯೋಜನೆಯ ಆಲೇಖವೊಂದು
ಆ ಪರಮಸತ್ಯದಾ ಮಾಕಾವ್ಯವಿದಕೆ ಮುನ್ನುಡಿಯ ರೂಪವೊಂದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/606**

## 10. ಪರಿಶುದ್ಧವಾದ ಆಕಾಂಕ್ಷೆಯೊಂದು ಉಸಿರುಸಿರಿನಲ್ಲಿ ಶುದ್ಧ

ಅಗ್ನಿಜ್ವಾಲೆಗಳ ಕಡುರಕ್ತಕೆಂಪು ವರ್ಣದಾ ತಾಣಗಳಲಿ
ಸಹವರ್ತಿಯಾಗಿ ಉತ್ತೇಜದಲ್ಲಿ ಅತಿಶಯದ ಸ್ಪಂದದಲ್ಲಿ,
ಪರಿಶುದ್ಧವಾದ ಆಕಾಂಕ್ಷೆಯೊಂದು ಉಸಿರುಸಿರಿನಲ್ಲಿ ಶುದ್ಧ
ಅದರಂತೆ ಪರಮ ಪಾವಿತ್ರ್ಯದಲ್ಲಿ ಮಿಡಿತವಿದೆ ನಿಯತಿ–ಬದ್ಧ

ನವನವೋನ್ಮೇಷ ಪರಿಶುಭ್ರ ಧವಳ ಮಲ್ಲಿಗೆಯ ಮುಗುಳು–ನೇದು
ಪ್ರೇಮಾನುರಕ್ತ ಮೋಹಿತದ ಪವನನಧಿಷ್ಠಾನದಲಿ ಸೆಳೆದು,
ಪೇಲವದ ವರ್ಣದಲಿ ಮಾವು–ಕಸ್ತ್ರ ಮೇಳದಲಿ ಮಿಳಿತಗೊಂಡು
ತರಲ–ನಾದದಲಿ ತುಂಬಿ ಪ್ರತಿಫಲಿಸಿ ಅಲೆಯಾಗಿ ಅಲೆತಗೊಂಡು,

ಪ್ರೇಮದುನ್ಮಾದ ಮೋದದಲಿ ಮುದಿತ–ಕುಂಡಲಿಯ ತುಂಬಿತಿಂದು,
ಮತ್ತದೋ ರಂಗು–ರಂಗಿನಾ–ಗುಂಗು ಪಿಂಗಲದ ದುಂಬಿಯೊಂದು
ಸೌಗಂಧ ಸೂಸಿ ಭಂಧದಲಿ ಬಂಧ ಗುಂಜಾರ – ಗಾನದಲ್ಲಿ
ಮಾರ್ದವದ ಲಲಿತ ಮಧುದುಂಬಿ ನಿಂತ ಮೊಗ್ಗುಗಳ ಮಧ್ಯದಲ್ಲಿ.

ನಿರ್ವಿಕಲ್ಪದಾ ಪೀಠಸ್ಥವಾದ ಋತದ ಸಾತತ್ಯದಿಂದ
ವಿಜ್ಞಾನ–ಚಿತ್ತವಿದು ಒಂದು ನಿತ್ಯ ಕ್ಷಮತೆಯನು ಪಡೆದುದಿಂದು
ದರ್ಶನದ ಸ್ಪರ್ಶ ಪಡೆಯಲೆನೆ ಅದುವು ತಾ ಬಂಧಗೊಂಡು ಇರಲು
ಜೊತೆಗಿದೋ ಲೀಲೆಗಳನೀಗ ಮತ್ತೆ ವ್ಯಾಖ್ಯಾನಗೊಳಿಸಲೆನಲು
ಮತ್ತಿದೋ ಸರ್ವ ಉಪ–ಕರಣವೆಲ್ಲ ಬ್ರಹ್ಮಾಂಡ ವ್ಯಾಪ್ತಿಗಾಗಿ
ಯೋಜನಾಬದ್ಧ ವಿನ್ಯಾಸದಲ್ಲಿ ಸಂಬಂಧಗೊಂಡು ಸಾಗಿ
ಲೌಕಿಕದ ಸರ್ವ ಸಂಕೇತಗಳಲಿ ಆಂತರ್ಯಗೊಂಡು ನಿಂದು
ಪರಿಪೂರ್ಣ ಭೂಮ ದಿವ್ಯತ್ವವನ್ನು ಅಭಿವ್ಯಕ್ತಗೊಳಿಸಲೆಂದು

**(ಶ್ರೀ ಅರವಿಂದರ 'ಸಾವಿತ್ರಿ'; ದಳ 4 ರೇಣು 1 ಪುಟ 352/354)**

# 11. ವಾಮನ ನೆಪೋಲಿಯನ್

## (ಹಿಟ್ಲರ್ 1939 ರಲ್ಲಿನ ಭಾಗ)

ಚಾಪಲ್ಯದುಂಬಿ ಮಾಯೆ ಇಚ್ಛಿಸುತ, ತಾ ದರ್ಶಗೊಳ್ಳಲೆಂದು
ಚಂಡವೇಗದಾ ಅದ್ಭುತದ ಪಿಂಡ ಮರುಚಣದಿ ಜನಿಸಿತಿಂದು,
ವಾಸ್ತವವು ಇದೋ ಬೆಳೆಬೆಳೆಯುತಿಹುದು ವಿಶ್ವಾಸಶೂನ್ಯದೊಡನೆ
ಅವಳ ಆ ಮಂತ್ರದಂಡ–ಸೂತ್ರಿಸಿದ ಈ ಪಾತ್ರ ಪಾತ್ರದೊಡನೆ
ಆ ಕುಬ್ಜನೀಗ ಸಾಧಿಸುವ ಮಹತಿ, ಆಧಾರ ಭವ್ಯ ತಾನು
ಅಪರಿಮಿತವಿದ್ದ ಆ ಗತದ ಭೀಮಸಾದೃಶ್ಯವಿದ್ದರೂನು.

ನೆಪೋಲಿಯನ್ ಚಿತ್ತ ಶೀಘ್ರ ವೇಗದಲಿ, ಜೊತೆಗಿದೋ ದಿಟ್ಟ, ವ್ಯಾಪ್ತ,
ಅವನ ಹೃದಯವದು ಸಾಗರದ ತೆರದಿ ಪ್ರಕ್ಷುಬ್ಧ ಜೊತೆಗೆ ಸುಪ್ತ,
ಅವನ ಸಂಕಲ್ಪವದರ ಅಸ್ಮಿತೆಯ ದೃಢಗ್ರಹಿಕೆಯೊಳಗೆ ಸತತ
ಅದನು ಅಪ್ಪುತಲಿ ಒಪ್ಪುವನು ಅವನು ನೆಲೆಗೊಳ್ಳಲೆನಲು ನಿರತ,
ಬಲು ಸಣ್ಣ–ಪುಟ್ಟ ಜೊತೆ ಮಹತಿಯಿರುವ ಈ ಎಲ್ಲ ಘಟನೆಗಳನು
ಇವ ದರ್ಶಗೊಂಡ ಅದ ಸ್ಪರ್ಶಗೊಂಡ ತನ್ನಾಧಿಪತ್ಯವಿನ್ನು,
ಗಹನ–ಗಂಭೀರ ವ್ಯಾಪ್ತಹೇತುವಿನ ಸಂಚಲನವೊಂದು ತಾನು
ಅದರ ಆಶಯಕೆ ಸಾಂಗತ್ಯವಾಗಿ ವಶಪಡಿಸಿಕೊಂಡನವನು.

ಪಾತಾಲ–ಮಣ್ಣ ಈ ಜಂತುವೀಗ ಎಲ್ಲದಕೂ ದೂರ ದೂರ,
ಸರ್ವಮಹತಿಯಲಿ ಬರಿಬರಿದು ಶೂನ್ಯ, ಭೂತದಾಟದಲಿ ಸಾರ–
ಲೋಹಬಿಂಕ ಜೊತೆ ಪಂಕಮಿಶ್ರಿತವವನ ಸ್ವಭಾವ–ದ್ರವ್ಯ
ದೂರದೃಷ್ಟಿಯದು ಪರಿಮಿತಿಯಲೀಗ ಅವನ ಆ ಬುದ್ಧಿಯೊಳಗೆ ಜಾಲ
ಅದರದೇ ಕ್ಷೀಣ–ಧಮನಿಯಲಿ ತುಂಬಿ ವಂಚನೆಯ ಜೊತೆಗೆ ಕುಶಲ,
ಭಾವುಕದಭಾವದಲಿ ಆತ್ಮಶ್ಲಾಘಿ ಇವ ಬಡವ ಜೊತೆಗೆ ಕಠಿಣ
ಹೃದಯವೆಂದಿಗೂ ಮಧುರ ತಾನಿರದು ಜೊತೆ ಶುದ್ಧ–ಶಕ್ತಿಪೂರ್ಣ.

ಆಶಯವು ತುಂಬಿ ಜೊತೆ ಭಯದ ರಾಶಿ ಪ್ರತಿಬಂಧವಿರದ ಬಲವು,
ದಟ್ಟೈಸಿಕೊಂಡ ನಶಾವಶವರ್ತಿ ಈ ಹುಯಿಲು, ಅಶ್ರುಧಾರೆ,
ಕ್ರೂರಾತಿಕ್ರೂರ ಜೊತೆ ಹಿಂಸೆದುಂಬಿ, ಅಸುರ, ಶಿಶುವು, ನಿರ್ದಯನು,
ಈ ಕೂಗುಮಾರಿಯದ್ಭುತದ ವಾಗ್ಮಿ, ಅವನ ಆ ಹರಿತ–ಜಿಹ್ವೆಯಿಂದ,
ಅಲ್ಪದಲಿ ಅಲ್ಪಧೀ ನಿಗದಿಗೊಂಡ ಯೋಚನೆಯ ಈ ಪ್ರವಾದಿ,
ಈಗಿದೋ ಮನುಜಪಥ–ಯಾತ್ರೆಗಿವನು ನಾಯಕನ ಸ್ಥಾನ ಹೊಂದಿ;
ಅವನ ಮಾಬಲವು ಭವಿತವ್ಯಕಾಗಿ ವಿಜಯದ್ವಾರವನು ರಚಿಸಿ,
ಈ ಲೋಕವೀಗ ಪರಿಪಕ್ವ–ಫಲದಿ ಅವನಿಗೀಗಿದುವು ಭಕ್ಷ್ಯವಾಗೆ,
ಅವನ ಛಾಯೆಯಾವರಣವೀಗ ಲಂಡನ್ ದಿಂದ ಕೋರಿಯದ ವರೆಗೆ.
ಅವನ ಕಾಲದಲಿ ನಗರಗಳು ಮತ್ತೆ ದೇಶಗಳು ಮಣ್ಣುಗೂಡಿ.

ಉಗ್ರನೋರ್ವನಾ ಕ್ರೂರಹಿಡಿತದಲಿ ಈ ಲೋಕ–ಜೀವ–ಕುಲವು;
ಲೋಕ ಗಮ್ಯವದು ಕಾಯುತಿದೆ ಈಗ ಬುದ್ಬುದದ ತುಟಿಯ ಮೇಲೆ,
ದೈತ್ಯಶಕ್ತಿಯಿದು ಈ ಕುಬ್ಜ ಮನುಜನನು ಈಗ ಎತ್ತಿ ಹಿಡಿದು,
ಮಾಬಲದ ಶಕ್ತಿಗೀಗಿದೋ ಈ ಪರಿಪೂರ್ಣವಿರದ ಕುಬ್ಜ–ಯಂತ್ರ.
ಮುಕ್ತ–ಚೇತನದ ತೋಷ–ಕಾಂತಿಯನು ದ್ವೇಷಿಸುವ ಕುಹಕ–ತಂತ್ರ,
ಬೃಹದ್–ಬಲದ ಜೊತೆ ಕುಶಲತೆಯು ಮತ್ತೆ ಸಾಮರ್ಥ್ಯವನ್ನು ಮಾತ್ರ
ಮಾನವೀಯತೆಯನ್ನು ತುಳಿತುಳಿದು ಮಣ್ಣುಗೂಡಿಸುವ ಇಚ್ಛೆಯೊಂದು
ಏಕಾಧಿಪತ್ಯದಾ ಕಠಿಣ ಗತಿಗೆ ಈ ನೆಲವ ಮಿಲನಗೊಳಿಸಿ
ಅದರದೇ ಬೃಹದ್–ಭೀಷಣದಿ ಅದರ ಯೋಜನೆಯ ಹೇರಿ ನಿಲಿಸಿ.

ಮಾನವನ ಮನವ ಮುರಿಮುರಿದು ಮತ್ತೆ ಆಯಾಮಹೀನಗೊಳಿಸಿ
ಭಯದ–ಬಿಗಿತದಲಿ ದಾಸ್ಯವನು ಮತ್ತೆ ಸಹಜತೆಯ ರೀತಿ ಇರಿಸಿ,
ಅಬ್ಬರಿಸುತಿಹುದು ರಕ್ಕಸನ ಸೊಕ್ಕಿನಕ್ಕಸದಿ ಉಕ್ಕಿ ಉಕ್ಕಿ
ಘೋಷದುದ್ಘೋಷ ಸರಣಿಗಳಲೀಗ ಅದನೂಡಿ ಊಡಿ ಜನಕೆ.
ಒಂದೊಮ್ಮೆ ಇಂಥ ಅಂಧತ್ವಘೋರ ಸಾಮ್ರಾಜ್ಯವನೊಪ್ಪಿಕೊಳಲು,
ಆ ನಿಯತಿ ತಾನು ಮರುಮರಳಿ ತನ್ನ ಹಕ್ಕನ್ನು ಪಡೆಯುತಿಹುದೋ

ಮತ್ತೀಗ ಮನುಜ ಪ್ರಕೃತಿಯಾ ಪ್ರಜ್ಞೆಶಕ್ತಿಯಲಿ ಯೋಗಗೊಳುವ,
ಘನದಾಳವಿರುವ ಆ ತಮದಿ ಅವನು ಮುಳುಮುಳುಗುತಿರುವ ಈಗ,
ಗತಿಸಿ ಹೋಗಿರುವ ಅವಳ ಆ ಸರ್ವ ರೂಪಗಳ ಹಂಚಿಕೊಳುವ,
ಬೃಹದ್–ಗೌಳಿಗಳ, ಬೃಹದ್ –ಗಜಗಳಾ ಆ ಸರ್ವನಾಶದಂತೆ,
ಇದು ಬೃಹದ್ದೇಹಿಯಾ ಕವಚದಾ ಛಾಯೆ ಆಗಿ ತಾನಿರಲು
ವಿಹ್ವಲದ ಘಾತಕಾಘಾತಗೊಂಡ ಬುವಿಗುಂಟ ನೇಯ್ಗೆಗೊಳಿಸಿ.

ಘಾತಕದ ಶಿಖರದೆದೆ ಮೇಲೆ ಸ್ಥಿತದ ಅವನ ಆ ಮೊಹಲ್ಲಾ
ಏಕಾಂಗಿಯಾಗಿ ಇವ ಮಾತ್ರ ಆಲಿಸುವ, ಸಾಮ್ರಾಜ್ಯ ವಾಣಿಯೆಲ್ಲಾ,
ಅವನದೇ ಕ್ರಿಯೆಯ ಸರ್ವಾಧಿಕಾರಿ ಇದ್ದಕಿದ್ದಂತೆ ಆಯ್ಕೆ ಬಯಸಿ
ರಕ್ಕಸನ ತಂತ್ರ–ಕುಶಲದಲಿ ಕ್ರೂರ–ವ್ಯಾಘ್ರ–ಜಿಗಿತವಿರಿಸಿ.
ಆ ವೀರ್ಯತೇಜವನು ಧರಿಸಲೆನಲು ಅವನ ಕಾಯವದು ವಿಫಲ,–
ಆ ಭೀಮಭೀಷಣದ ಅತಿಥಿಗಿವನೀಗ ಬಲು ಕ್ಷೀಣ ಜೊತೆಗೆ ಮನುಜ.
ಚಿಂತನಕೆ ತೊಡಗಿ ಜೊತೆ ಕ್ರಿಯೆಗೆ ಇಳಿಯೆ ಮತ್ತಿದೋ ಕ್ರಂದದಲ್ಲಿ
ಹೋರಾಟಕವಗೆ ಮಾರ್ಗದರ್ಶನದಿ ಚಲನೆ ನೀಡುತಲ್ಲಿ.

ಪ್ರೇರಣೆಯನಿಂತು ಪಡೆದಿರಲು ಸಕಲ ವಿಜಯಕಿದೊ ದಾಪುಗಾಲು
ಭಯದುಂಬಿ ಜೊತೆಗೆ ಚೀತ್ಕಾರಸರಣಿಗಳಲೀಗ ಕ್ರೂರ,ಅಜೇಯ,
ಜಂಝಾವಾತದಲಿ ಕೊಚ್ಚಿ ಹೋಗಿರುವ ಅವನ ಪಥ ಕಾಣುವರೆಗೆ
ಬ್ರಹ್ಮರಕ್ಕಸನೋ –ಇಲ್ಲದಿರೆ ದೇವವಜ್ರಾಘಾತದಬ್ಬರದ ಸಿಡಿಲೋ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/641**

# 12. ವ್ಯಾಘ್ರ ಮತ್ತು ಹರಿಣ

ಅತಿ ಚತುರನಿವನು, ಜಪ್ಪಿನಲಿ ಬಾಗಿ, ತೆವಳುತಲಿ ಹಾಕಿ ಹೊಂಚು
ಹರಿದ್ವರ್ಣದಾ ಕಾನನದ ಹೃದಯವಾಧರಿಸಿ ತುಂಬಿ ಸಂಚು,
ಮೋಹಕದ ಮಿಂಚು ಕಣ್ಣಿನಲಿ ಹೊಳೆದು, ಮಾಬಲದ ಎದೆಯ ಜೊತೆಗೆ
ನಿಶ್ಶಬ್ದವಿರುವ ಕೋಮಲದ ಪಂಜ, ಭವ್ಯತೆಗೊ ಇಲ್ಲ ಕೊಲೆಗೊ?

ವಾತವದು ಸಹಿತ ಭೀತಗೊಂಡಂತೆ ತರಗೆಲೆಯ ಮೇಲೆ ನುಸುಳಿ
ಅದರ ಗರ್ಜನೆಯ ಜೊತೆಗೆ ಪಾದಗಳ ನಿರ್ಮಮವ ತುಂಬಿ ಗಾಳಿ
ವೈಭವದಿ ಈಗ ವಿಚಲನೆಗೆ ತಂದು ಸಂಚರಿಸಲೆಳಸುತಿರಲು,
ಉಸಿರಿಡಲು ಸಹಿತ ಕಸಿವಿಸಿಯ ಪಡುತ ವ್ಯಾಕುಲತೆ ತುಂಬಿ ಮೇಲು

ಆದರೂ ಸಹಿತ ಧೈರ್ಯದಲಿ ಉಸಿರು ಎಳೆಯಲೆನೆ ಯತ್ನವಾಗ
ಆದರಿದೋ ಬೃಹದ್–ವನ್ಯಜೀವಿಯಿದು ತೆವಳುತಲಿ ಸಾಗಿತೀಗ
ತೆವಳಿ ತೆವಳುತ್ತ, ಜಪ್ಪು ಹೆಜ್ಜೆಯಲಿ, ನಿಶ್ಶಬ್ದದೊಳಗೆ ಕೊನೆಗೆ,
ಅಂತಿಮದಿ ಇದೋ, ಘಾತಕದ ಜಿಗಿತ! ಮೌನದಲಿ ನುಗ್ಗಿ ಹೀಗೆ!

ಆ ವನದ ಭವ್ಯ ಕೊಳವದುವು ಶಾಂತ, ಭಯಕೆ ಎಡೆಯಿರದ ತಾಣ
ಕಾನನದ ತಂಪು ಜೊತೆ ನೆಳಲಿನಿಂಪು ಕೊಡುತಿರುವ ಛಾಯೆ ತಾಣ,
ಕಾನನದ ಶೋಭೆ ಆ ಹರಿಣವದುವು ಜಲಪಾನದೊಳಗೆ ಮಗ್ನ
ಇದ್ದಕಿದ್ದಂತೆ ಹಠಾತ್–ಜಿಗಿತದಲಿ ಅಪ್ಪಳಿಸಿ, ಜೀವ ಭಗ್ನ!

ಪತನವಿದು, ಮತ್ತೆ ಛಿದ್ರಗೊಂಡಿತ್ತು, ನೆನೆದು ಸಂಗಾತಿಯನ್ನು
ತೊರೆದಿತ್ತು ಅದನು ಏಕಾಕಿಗೊಳಿಸಿ ಈ ಘೋರ ವನದಲಿನ್ನು,
ಕಾನನದ ಸತ್ವ ಸಾತ್ವಿಕದ ಮಧುರ ಜೀವ ಸಂಕುಲವನಿಂತು
ಈ ಕ್ರೂರ ಶೋಭೆ ತುಂಬಿರುವ ಜೀವ ಸೌಂದರ್ಯ ಪ್ರಕೃತಿಗಿಂತು.

ಆದರೊಂದು ದಿನ ಖಚಿತದಲಿ ಬಂದು, ವ್ಯಾಘ್ರವದು ಸೋಲು ಕಂಡು
ಮಾರಣಾಂತಿಕದ ತೆವಳು ಜೊತೆ ಜಿಗಿತ ತಾನೆಂದು ತೋರದಂದು,

ಘೋರಕಾನನದ ಈ ಕ್ರೂರ ಜೀವಿ ಹೃದಯದಲು ಉದಿಸದಂತೆ
ಏಶಿಯದ ವ್ಯಾಪ್ತ ಬಯಲು–ಆಲಯವ ಬೃಹದ್ಗಜ ತಡವದಂತೆ;

ಆಗಿದೋ ವನದ ಶೋಭಾಯ ಹರಿಣ ಈ ಘನದ ಶಾಂತದೊಳಗೆ
ಪಾನಗೈಯುವದು ಆ ಶೀತ ಕೊಳದ ಸರಣಿ ಸರಣಿಯೊಳಗೆ
ವೃಕ್ಷಗಳ ವಕ್ಷದೆದೆಯಿಂದ ಉದಿತಗೊಳ್ಳುತಿಹ ನೆರಳಿನೊಳಗೆ,
ತಮ್ಮ ತಮದೊಳಗೆ ತಂತಾವೆ ಲೀನ ಮಾಬಲದ ದಳವು ಹೀಗೆ;
ಹಂತಕನ ಇಂತು ರಕ್ಷಿಸುವ ತಂತು ಹಂತಗೊಳುತಿರುವ ಹಂತ;

**1942 CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/583**

ಆದಿಮೂಲದಲಿ ಸುರುಸುರುಳಿಗೊಂಡ ಬಂಧಗಳ ಛಂದದಲ್ಲಿ
ಬ್ರಹ್ಮಾಂಡ–ಬ್ರಹ್ಮ ಆ ಸರ್ಪಶಕ್ತಿ ಧ್ಯಾನಸ್ಥ ಕುಂಡದಲ್ಲಿ
ಭೌತಿಕದದ್ರವ್ಯದಪ್ಯಾಯಮಾನ ತಲ್ಲೀನ ಸ್ಪಂದದಿಂದ
ದಿವ್ಯಾನುಭಾವದಾ ವೃತ್ತಬಂಧಗಳ ಸಂಬಂಧ ಸ್ಪರ್ಶದಿಂದ

ಪಡಮರಳಿಕೊಂಡು ಹೆಡೆಯೆತ್ತಿತೀಗ ಚೇತನದ ಸುರುಳಿಯಲ್ಲಿ
ಜೀವನದ ತಪ್ತ ಸಂತೃಪ್ತ ಸುಪ್ತ ಆ ಕುಸುರಿನುಸಿರಿನಲ್ಲಿ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 4 ಪುಟ 138)**

---

**ಟಿಪ್ಪಣಿ:**

ಇದು ಪ್ರಕೃತಿಯಲ್ಲಿ ಜೀನ್ಸ (ವಂಶವಾಹಿನಿಯ) ವ್ಯವಸ್ಥೆ ರೂಪಿತಗೊಂಡ, ವ್ಯವಸ್ಥಿತ ಗೊಂಡ ಮತ್ತು ಗೋಲ್ಡಿರ್ಝೋನ್ ಹಂತದ ರಕ್ಷಾ ಹೊದಿಕೆಯ ಸೂಕ್ತ ವಾತಾವರಣದಲ್ಲಿ "ಜೀವ"ವಂಕುರಿಸಿದ ಗತಿಯ ಕುರಿತು ಹೇಳುತ್ತಿದೆ. ಆಧುನಿಕ ವಿಜ್ಞಾನದಲ್ಲಿ ಜೀನ್ಸ (ವಂಶವಾಹಿನಿಯ) ಬಗೆಗೆ ತುಂಬ ಸಂಶೋಧನೆಗಳು ನಡೆದಿವೆ. ಇಂದು ವಿಜ್ಞಾನ ಮತ್ತು ಬ್ರಹ್ಮಾಂಡ ವಿಜ್ಞಾನದ ಬಗೆಗೆ ಜಿಜ್ಞಾಸೆ ನಡೆದಿದೆ.

# ಭಾಗ 2

## 1. ಚಿನ್ಮಯದ ದೇವ ಸರ್ವತೋಮುಖನಾಗಿ

ಗವಸಿನಲಿ ಅವಿತ ಪರಮಾತಿಶಯದ ಪರಮಾನುಭವದ ಶಿಖರ
ಅಸ್ತಿತ್ವ ಪಡೆವ ಅವನ ಪೀಠವದು ಪರಮೋಚ್ಚ ಪರಮ–ಪ್ರಖರ.

ತಮದ ಘನಮೊತ್ತದೊತ್ತಡಕೆ ಸಿಲುಕಿ ಭೂತತತ್ತ್ವದೆಡೆಗೆ ಕುತ್ತು
ತತ್ತರಿಸಿ ಶ್ವಾಸ ಪರಿತಪಿಸುತಲ್ಲಿ ಆಪ್ತತೆಯು ಹೆಚ್ಚಿ ಸುತ್ತು
ಮತ್ತೆ ತಾನಲ್ಲಿ ಪರಮ ಪುರುಷನಾ ಸಶರೀರ ಮನವು ತಾನು
ಏಕೈಕ ಮಾರ್ಗದರ್ಶನದ ಜ್ಯೋತಿ ಕಾಂತಿಯಲಿ ಮಿನುಗಿತಿನ್ನು,

ಗೂಢ ಕಾರ್ಯಗಳ ಮಾಡಲೆಳಸುತಲಿ ಗುಹ್ಯದಲಿ ಸುಳಿಯುತಿರುವ
ಕತ್ತಲಲಿ ಸುತ್ತಿ ಚೋರ ತಾನಲ್ಲಿ ಹೆಜ್ಜೆಗಳನಿಡುತ ಬರುವ–
ರೀತಿಯಲಿ ತನ್ನ ಮನೆಯೆಡೆಗೆ ಬಂದ ತನಗರಿಯದಂತೆ ತಾನು
ಕಾಣದಂತಾಗಿ ಕರಗುತಲಿ ಅಲ್ಲಿ ಪಥವಿಟ್ಟು ಬಂದರೂನು.

ಅಸ್ಪಷ್ಟವಾದ ಆ ಶ್ರಾವ್ಯದೊಳಗೆ ವಾಣಿಯದು ಮಾತನಾಡಿ,
ಶೂನ್ಯ–ಸೂಕ್ಷ್ಮ–ಸಂ–ವೇದ ಛಂದದಲಿ ಆತ್ಮವದು ಅದನು ನೋಡಿ,
ಘನಶಕ್ತಿಯೊಂದು ಮನದಾಳದಾಳ ಹೃದಯದೆಡೆ ಬಂದು ನಿಂದು
ಸೆಳೆಯುತ್ತ ತನ್ನ ಬೇರೆಲ್ಲವನ್ನು ತುಂಬುತ್ತ ತನ್ನನಿಂದು

ಮಂಜುಳದ ಜೊತೆಗೆ ರಮಣೀಯ ರಕ್ಷೆ ವಿಸ್ತಾರ ಸಾರ ಸಾರ
ತೆರೆ ತೆರೆದವೀಗ ಮುಚ್ಚಿಕೊಂಡಿದ್ದ ಜೀವನದ ಎಲ್ಲ ದ್ವಾರ,
ಪ್ರತಿರೋಧಿಸುತ್ತ ಉಳಿದುಕೊಂಡಿದ್ದ ಆ ಜಗವೆಲ್ಲವನ್ನು
ಮತ್ತದೋ ದಿವ್ಯ ಸೌಂದರ್ಯ–ವಿಜಯ ಆವರಿಸಿಕೊಂಡಿತಿನ್ನು

ವಿಸ್ಮಯವ ತುಂಬಿ ಸತ್ಯದಾ–ಕಿರಣ ಆವರಿಸಿ ಪ್ರಕೃತಿಯನ್ನು
ದೇವದೇವನೀ ಅವ್ಯಕ್ತ ಕೃಪೆಯ ಒತ್ತಾಯದೊಳಗೆ ಇನ್ನು

ಸಂತೃಪ್ತಗೊಂಡ ಹೃದಯವದು ತಾ ರಸೋದ್ಗಾರದೊಡನೆ ಭವ್ಯ
ಜೊತೆಗೆ ಬುವಿಯಿಂದು ತಾ ಬೆಳೆದು ಬೆಳಗಿ ಅನಪೇಕ್ಷೆಯೊಳಗೆ ದಿವ್ಯ.

ಭೂತ–ಭೌತಿಕಕೆ ಮೂಲವಾಗುತಲಿ ಇಂದ್ರಿಯಕೆ ಗ್ರಾಹ್ಯವಿರುವ
ಆಕಾಶ–ಕಾಲದುದ್ದಕೂ ಮತ್ತೆ ವಿಸ್ತರಿಸಿ ವ್ಯಾಪಿಸಿರುವ
ದ್ರವ್ಯಾಂತರಂಗದಲ್ಲೀಗ ಸಹಿತ ಚೈತನ್ಯವದುವು ಮತ್ತೆ
ಉತ್ತಾಪದಲ್ಲಿ ಬೆಳಗಿತ್ತು ಸರ್ವ ಸರ್ವಾಂತರಂಗ ಸತ್ತೆ,

ತಮವಂತರಂಗದಲ್ಲೀಗ ಮತ್ತೆ ದೇಹವನು ತನಗೆ ತಾನೆ
**ವಿಸೃಕ್ಷೆಗಿಗಿದುವು ಸ್ವತಃಸಂಭವ**ವೀಯಂತಾಗಿ ಅದುವು ತಾನೆ,
ಮಿನುಮಿನುಗು ತಾರೆಗಳ ವಿಶ್ವಗೀತೆಯಾ ಗಾನ ಆಲಿಸುತ್ತ
ತಮವದುವು ಈಗ ಅರಳಲೆನೆ ಬೇಗ ಜಾಗರಿಸಿಕೊಂಡಿತಿತ್ತ

ಸುಪ್ರಭೆಯ ಪಥದಿ ಸುಮನಸದ ಯಾತ್ರೆ ಸರಣಿಯೊಳು ಮೇಳವಾಗಿ
ಬೆಳ್ದಿನದ ಮಾಲೆ ಮಹಾಬೆಳಕಾಗಿ ಹೊಳೆಹೊಳೆದು ಕಾಂತಿಯಾಗಿ,
ಶಾಶ್ವತದ ಸತ್ವ ಬಲವಾಗಿ ಈಗ ನಮ್ಮೊಡನೆ ಸ್ಪಂದಗೊಂಡು
ಅದರ ಶಕ್ತಿಯದು ನಮ್ಮ ಕೃತುವಾಗಿ ನೆಲೆಯಾಗಿ ಹರಸಿತಿಂತು,

ಋತದ ಮೂಲದಲಿ ಚಿನ್ಮಯದ ಜ್ಯೋತಿಪುಂಜವದು ತೇಜವಾಗಿ
ವಿಶ್ವರೂಪವದು ಶಾಶ್ವತದ ನೆಲೆಯ ದರ್ಶನಕೆ ಸಿದ್ಧವಾಗಿ
ಹೊಳೆದು ಬೆಳಗುತಿಹ ಕಿರಣ–ಮಾಲೆಗಳು ನಿತ್ಯತ್ವ ಭಾವವಾಗಿ
ಬುದ್ಧಿಯದು ನಿತ್ಯ ಪ್ರಜ್ವಲಿತ–ಸೂರ್ಯನಂತೆಯೇ ಬಿಂಬವಾಗಿ

ಅನ್ಯರೆಲ್ಲ ಆಂತರ್ಯವರಿಯಲೆನೆ ತಾವಾಗಿ ಸತತ ವಿಫಲ
ಹಲಕೆಲರು ಮಾತ್ರ ದ್ರಷ್ಟಾರರಾಗಿ ದರ್ಶಿಸಲು ಸರ್ವವೆಲ್ಲ;
ಚಿನ್ಮಯದ ದೇವ ಸರ್ವತೋಮುಖನಾಗಿ ವಿಕಸನದ ವ್ಯಾಪ್ತಿಯೊಳಗೆ
ತರ್ಕದಲಿ ಉಳಿದ ಜಾಣ್ಮೆಯಾ ಗುಂಪು ಬರಿ–ಹರಟೆ–ನಿದ್ರೆಯೊಳಗೆ;

ಬರಲಿರುವ ಸರ್ವ ಘಳಿಗೆಯದು ಬರಿದೆ ಒಡಲಾಳ ಅರಿಯದಿರುವ
ಈ ಬುವಿಯ ಮನುಜ ತಾನರಿಯದಿರುವ ಭವಿತವ್ಯ ಗೂಢ–ಭಾವ
ಕಾರ್ಯವದು ಸಿದ್ಧಿಯಾಗದೊಲು ಫಲಿತ–ಜ್ಞಾನವದು ದೊರೆಯದಂತೆ
ವಿಶ್ವಾಸ ಘನದಿ, ಸ್ಪಂದನಕೆ ಸಿಗದು ಜೊತೆಜೊತೆಗೆ ಕಾಣದಂತೆ.

**(ಶ್ರೀ ಅರವಿಂದರ 'ಸಾವಿತ್ರಿ'; ಪುಟ 55)**

---

**ಟಿಪ್ಪಣಿ:**

**ಸ್ವತಃಸಂಭವೀ** (ಕಿಂಡಲ್ಡ್) **ವಿಸೃಕ್ಷೆ** (ಸೆಕೆಡ್ ಬರ್ತ); ಸೃಷ್ಟಿ ರೂಪಣೆಯ ಇಚ್ಛೆ/ ಸತ್ವತನು.

## 2. ಆ ಬ್ರಹ್ಮಭಾವದಾ ಮಹತ್–ಚಿದ್ಬೀಜ

ಆಮೇಲೆ ಅವನು ಅರಿಯಲಿಹ ತೆರೆದು ಸುಪ್ತಾರ್ಥ ಲಿಖಿತದರ್ಥ
ಅಜ್ಞಾತದೆದೆಯ ಬರಿಬರಿಯ ಶ್ವೇತದಾಯಾಮದಂತರಾರ್ಥ
ಸಾಗುತಿಹನವನು, ಇಲ್ಲದಿರೆ, ಅವಳ ಕಟ್ಟಳೆಯ ಬಂಧದೊಳಗೆ
ಆ ದೇವಪುರದಿ ಅವನೀಗ ನಿತ್ಯ ಶೋಧನೆಯ ಕಾರ್ಯದೊಳಗೆ,

ನವನವೀನತೆಯ ಚಿತ್ತವನು ಮತ್ತೆ ದಿವ್ಯದಾ ದೇಹವನ್ನು
ಶೋಧಿಸುತ ಪಡೆದು, ತನ್ನ ಭವ್ಯತೆಯ ತಾಣದಲಿ ಬೆಳಗಲಿನ್ನು
ಅಮೃತತ್ತ್ವ ತುಂಬಿ ಭವ್ಯತೆಯಲಿಂದು ಆ ದಿವ್ಯ ತಾಣವಾಸಿ
ಮತ್ತಿದೋ ಸಾಂತವನ್ನೀಗ ಋತದನಂತತೆಗೆ ತಾವುಗೊಳಿಸಿ

ಸರಣಿ ಸರಣಿಯಲಿ ಅಗಣಿತದ ವರ್ಷ ಸ್ತರವಾಗಿ ಮೂಡಿ ನಿಂತ
ಪಿಂಡ–ಪಿಂಡಗಳು ಸಫಲಕೃತ್ಯದಲಿ ನಿರ್ಮಿಸಿದ ದಂಡೆಗುಂಟ,
ಪರಿಭವದ ಶೇಷ ಅನುಗಾಲವಿರಲು ಸಟೆಗೀಗ ದಿಟದ ನೆನಕೆ
ಆ ಪಿಂಡವೀಗ ಜಲ–ಜಾಲದೊಳಗೆ –ಭೂ ಕವಚ ಹೊದೆದ ಹೊದಿಕೆ

ಅವಳ ಅರ್ಣವದ ಪವನಗಳು ಅವನ ಸಾಹಸದ ನಾವೆಯನ್ನು
ಪ್ರೋತ್ಸಾಹದಲ್ಲಿ ಮುನ್ನುಗ್ಗುವಂತೆ ಬೆಂಬಲಿಸಿ ಸತತವದನು,
ವಿಶ್ವದಾರ್ಣವದ ಘೋಷ–ಘೋಷಗಳು ಅನವರತ ನಾದ ತುಂಬಿ
ಅವ ಚಲಿಸಿದತ್ತ ಅನುರಣನ ನಿತ್ಯ ಅಲೆಯಲೆಯ ಎದೆಯ ತುಂಬಿ

ಮರ್ಮರದ ರವವು ಲೋಕನಾದದಲಿ ಅವನನ್ನು ಸುತ್ತುವರೆದು
ಮತ್ತೆ ಮೇಲಾಗಿ ಸಂಕಟವು ಜೊತೆಗೆ, ಆಹ್ವಾನ ಕೂಡ ಇಹುದು.
ಅನವರತವಾಗಿ ಅವನೀಗ ಅವಳ ಅನುಸರಿಸುತಿರುವನೀಗ
ಅವಳ ಶಕ್ತಿಯಲಿ ಶಾಶ್ವತದ ನಿತ್ಯ ಋತದೊಡನೆ ಸಾಗುತೀಗ.

ಜನನ–ಮರಣಗಳ ತೆರೆತೆರೆಯ ಮೇಲೆ ಅವನೀಗ ಸಾಗುತಿಹನು
ಮತ್ತೆ ಹೊಸದೊಂದು ಜೀವ–ಜೀವನಕೆ ಗುರಿಯರಸಿ ತೇಲುತಿಹನು

ಅವಧಾನದೊಳಗೆ ಮತ್ತೆ ಆ ಸುಪ್ತ ಅತ್ಯಾಪ್ತ ಹಂತದೊಳಗೆ
ಅದರ ಮೂಲಕವೆ ಅವನ ಸಂಚಾರ–ಪಥವೊಂದು ರೂಪದೊಳಗೆ.

ಅವಳ ಆ ಗೂಢಶಕ್ತಿಯೆಡೆಯಿಂದ ತೇಜದಲಿ ಅವಗೆ ರಕ್ಷೆ
ಅದು ಅವನ ಸತತ ಬಾಧ್ಯಸ್ಥಗೊಳಿಸಿ ಅವನದೇ ಸೃಷ್ಟಿ ಕಕ್ಷೆ,
ಮತ್ತದೋ ಇವಗೆ ಮಾಬಲದಿ ನಿತ್ಯ ವಿಶ್ರಾಂತಿ ಇರದ ಪಯಣ
ಮಾಯಕದ ಯಾತ್ರೆ ಎಂದಿಗೂ ನಿಲದು, ಸ್ಥಗಿತತೆಗೆ ಇರದ ತಾಣ,

ಆ ಪರಮ–ಆತ್ಮ ಪಾತಾಳ–ನಿಶೆಯ ಪರದೆಯನು ತೆಗೆಯುವತ್ತ
ಜೊತೆಜೊತೆಗೆ ದೈವ ಪ್ರತ್ಯೂಷ ಸರಣಿ ತಮವನ್ನು ಕರಗಿಸುತ್ತ.
ಪ್ರಕೃತಿ ತಾನಾಗ ಅನಂತತೆಯಲ್ಲಿ ವಿಶ್ವವನು ವ್ಯಾಪಿಸುತ್ತ
ಅದಕಾಗಿ ಖಚಿತ ಅವನ ಜೊತೆಗವಳು, ಅದ್ವೈತವಾಗುವತ್ತ.

ಸುಪ್ತಿಯಲಿ ಇರುವ ಹಂತದಲು ಸಹಿತ, ಹೃದಯದಲಿ ಅವಳನಿರಿಸಿ;
ತೊರೆತೊರೆದು ಅವಳ ಅನ್ಯರೆಲ್ಲರಿಗೆ, ಇವನೆಂದಿಗೂ ಸನಿಹ ವಾಸಿ
ಅವಳ ಅಸ್ತಿತ್ವವಿರದ ಅಜ್ಞಾತದಲ್ಲವನು ಇರುವ ಸಮಯ
ವಿಶ್ರಾಂತಿ ಬಯಸಿ ಸಂಚಾರ ನಿಲಿಸಿ ಇವನೆಂದು ಬೇರೆ ನಡೆಯ.

ಅಲ್ಲಿಹುದು ಸತ್ಯ ಅದನರಿಯಲೆಂದು; ಕರ್ಮದಲಿ ತೊಡಗಲೆಳಸಿ;
ಅವಳಾಟವೀಗ ವಾಸ್ತವದ ಸತ್ಯ; ಮಾಯಕವ ಅವನು ನಿಲಿಸಿ;
ಮಾತೆ ಯೋಜಿಸಿದ ಲೋಕ–ಛಂದದಲಿ ಪರಿಪಕ್ವ ಸ್ಥಿತಿಯು ಸತತ,
ಆ ಭೂಮ ಜೊತೆಗೆ ಯಾದೃಚ್ಛೆ ಲೀಲೆಯಲ್ಲವಳ ಹೃದಯ–ಮಿಡಿತ,

ಜೀವನದ ಪ್ರಥಮ ಉಷೆಯಿದನು ಅವಳು ಸತತದಲಿ ಕಾಂತಿಗೊಳಿಸಿ
ಅದು ಚಿರದ ತಾಣ, ಅವಳಾಟದಿಂದ ಅದ ತುಂಬಿ ತುಂಬಿ ನಿಲಿಸಿ,
ಚೇತನಾತ್ಮಕದ ಆ ಭೂಮ–ಭವ್ಯದಲ್ಲವಳು ಚಲನ ಬಯಸಿ
ಆ ಪುರುಷನನು ಜಾಗ್ರತಿಗೆ ತಂದು ಜಗ–ಯುಗವ ಮುಂದುವರೆಸಿ.

ಬುವಿಯೊಡಲಿನಲ್ಲಿ ಘನಸಮಾಧಿಯಾ ಆ ಸ್ಥೂಲ–ಮೂಲಗಳಿಗೆ
ಋತದ–ಜ್ಯೋತಿ ತಾ ಹಿತದ ಸ್ಪರ್ಶದಲಿ ವಿಕಸನಕೆ ಶುಭದ ಘಳಿಗೆ,
ಕಾಲ–ಸರ್ಪವದು ದೀರ್ಘ ನಿದ್ರೆಯಲಿ ಬಲಹೀನವಾಗಿ ನಿಂದ
ಅಚಿತಿಯಾಳದಲಿ ವಾಕ್–ಸ್ತಂಭಗೊಂಡ ಆತ್ಮಕ್ಕೆ ನಾಡಿ–ಸ್ಪಂದ,

ಒಲವಿನಲಿ ಮತ್ತೆ ಜಾಗ್ರತಿಗೆ ತಂದು ಮರುಕಳಿಸಿ ಶಕ್ತಿ ಸೃಷ್ಟಿ
ಅಗಣಿತದ ಬಲದ ಆ ಚಕ್ಷು–ಜೋಡಿ ಕಾಲದೆದೆಯಿಂದ ದೃಷ್ಟಿ
ಈ ಲೋಕ–ಗೀತ–ಮಾಲೆಗಳ ಸರಣಿ ಸಹಭಾವ ಕಾಂತಿ–ದೀಪ
ಆ ದಿವ್ಯ–ಕರವು ತೆರೆ ಸರಿಸಿಕೊಂಡು ವ್ಯಾಹೃತದಿ ಸ್ಫುರದ್–ರೂಪ.

ಇದರ ಸಲುವಾಗಿ ತನ್ನ ಪರಿಶುದ್ಧ ಆ ಧವಲ–ಕಾಂತಿಯುಕ್ತ
ಅನಂತತೆಯಲ್ಲಿ ವ್ಯಾಪ್ತವಾಗಿದ್ದ ನಿರ್ಮಾಯ ಭಾವ–ಮುಕ್ತ,
ಭೂತ–ಭೌತಿಕದ ಲೋಖ–ಲೋಕಗಳ ಆ ಭಾರ–ಸ್ವ–ಸ್ವರೂಪ
ಅತಿಚಿತಿಯ ಮೇಲೆ ಆಧಾರಗೊಳಿಸಿ ತಾನೀಗ ಸ್ಫುರದ್–ರೂಪ,

ಅವಕಾಶದೊಳಗೆ ನಿಷ್ಕಳೆಯ–ಪುಷ್ಪ ವಿಕಸನಕೆ ರೂಹುಗೊಳಲು
ಆ ಬ್ರಹ್ಮಭಾವದಾ ಮಹತ್–ಚಿದ್ಬೀಜ ಸ್ಪಂದಿಸಲು ವಿಶ್ವದೊಡಲು
ಮನದ ಮನ ಲಯದಿ ತನ್ಮಯದ ಕಳೆಯ ಬೆಳಗುತಿದೆ ಅಗ್ನಿ–ಪುಷ್ಪ
ಚಿತ್–ಶಕ್ತಿ ಗರ್ಭದೊಳಗಿಂದ ಉದಿಸಿ ಚಿನ್ಮಯದ ಆತ್ಮ–ದೀಪ.

**(ಶ್ರೀ ಅರವಿಂದರ 'ಸಾವಿತ್ರಿ'; ಪುಟ 72–73)**

---

**ಟಿಪ್ಪಣಿ:**

ಅಪ್ರತಿಮ ಕಾವ್ಯಾತ್ಮಕ ಪ್ರತಿಮೆಗಳಲ್ಲಿ ಅಭಿವ್ಯಕ್ತಗೊಂಡ ದೃಷ್ಟಾಂತಗಳನ್ನೇ ಶ್ರೀ ಅರವಿಂದರು ಈ ಭಾಗದಲ್ಲಿ ನಿರೂಪಿಸಿದ್ದಾರೆ. ಕಾವ್ಯ ಸೌಂದರ್ಯದ ತುರೀಯಾವಸ್ಥೆಯಲ್ಲಿರುವ ಈ ಭಾವಗಳನ್ನು ಅದೇ ವಿನ್ಯಾಸದಲ್ಲಿ ರೂಪಿಸುವದು ಅಸಾಧ್ಯವಾದ ಕೆಲಸವೇ ಸರಿ. ಆದರೂ, ಈ ಭಾಗಗಳನ್ನು ಕಾವ್ಯಮಯ ಬಂಧದಲ್ಲಿ ರೂಪಿಸುವಲ್ಲಿ ಪುಟ್ಟ ಪ್ರಯತ್ನ.

## 3. ಭವಿಷ್ಯದ ಅತಿಮಾನವ–ಸ್ವರೂಪ

ಅದನೆ ಅನುಸರಿಸಿ ಅವನು ಆವರಿಸಿ ವೃದ್ಧಿಸಿದ ನಿತ್ಯದಲ್ಲಿ
ಮಿಲನಗೊಳ್ಳಲೆಂದಾಗ ತನ್ನದೇ ವಿಶ್ವಾತ್ಮ ರೂಪದಲ್ಲಿ
ಮನುಜ ಪ್ರೇಮವದು ಅವನ ಚಲನೆಗಳ ಹಿತಮಿತದ ರೂಪವಿಟ್ಟು
ಬೃಹತ್–ಸತ್ತೆಯದು ದರ್ಶಿಸಿತು ಆಗ ಭೂಮದಾ ಲೋಕ–ಹುಟ್ಟು

ಅನಂತತೆಯತ್ತ ಆತ್ಮ ತಲೆಕೆಳಗು ಧುಮ್ಮಿಕ್ಕಿ ನೆಗೆಯುವಲ್ಲಿ
ವಿಫಲಫಲ ಬಯಕೆಯಲಿ ಮನವು ಸಹಿತ ಜೊತೆಗೂಡಿತಾಗ ಅಲ್ಲಿ
ರಕ್ಷಣೆಯ ನೆಪದಿ ಎಳೆದ ರೇಖೆಗಳ ನಿರ್ಲಿಪ್ತಗೊಳಿಸಲೆಂದು
ನಿರ್ಭಯದ ಕ್ರತುವು ಸುಜ್ಞಾನಕಾಗಿ ಸ್ಥೈರ್ಯದಲಿ ತೊಡೆದು ನಿಂದು

ಆದಿಭೌತಿಕದ ನಮ್ಮ ಸೀಮಿತದ ಬಯಕೆಗಳನೆಲ್ಲವನ್ನು
ಮುರಿದು ಹಾಕಿತ್ತು ಅವನ ಆ ಪ್ರಥಮ ಹೆಜ್ಜೆಯೇ ಆಗ ತಾನು
ವಿಸ್ತಾರದಲ್ಲಿ ಹರಡಿರುವ ಮುಕ್ತಪವನದಾ ವಲಯದೊಳಗೆ
ಅಲ್ಲಿಯೇ ಉಳಿದು ವಿಹರಿಸಲು ಬಯಸಿ ಮೆಲುನಡೆಯ ಹೆಜ್ಜೆಯೊಳಗೆ

ದಿವ್ಯರೂಪ ಪರಿವರ್ತನೀಯ ಬಲಪೋಷಣೆಯ ರಕ್ಷೆ ವಲಯ
ವಿಶ್ವ ಗುಮ್ಮಟವು ಹಿಡಿದು ಸುಲಭದಲಿ ಒಳಗೊಳ್ಳುವಂತೆ ಅವನು
ಮುದ್ರೆ ಒತ್ತಿರುವ ಗೂಢ ತಾಣದಲಿ ಸುಪ್ತಿಯಲಿ ತಾನು ಉಳಿದು
ಮನುಜನೆದೆಯಲ್ಲಿ ಜಡದ ಗತಿಯಲ್ಲಿ ಅವನೊಳಗೆ ಶಕ್ತಿ ಇಳಿದು

ಅದ್ಭುತದ ಘಟನೆಯನು ಸಹಿತ ಅವನು ಅತಿ ಸರಳ ಕ್ರಿಯೆಗೆ ಇಳಿಸಿ
ದಿವ್ಯಕಾರ್ಯಗಳ ಸಹಜ ರಚನೆಗಳ ರೀತಿಯಲಿ ನೇರ್ಪುಗೊಳಿಸಿ
ಸುಂದರೋಜ್ವಲದ ಸಹಜ ಗತಿ–ಸ್ಥಿತಿಯ ಔನತ್ಯದಲ್ಲಿ ಇರಿಸಿ
ಭವಲೋಕ ಹೃದಯಗಳ ಬಲವನೆಲ್ಲ ಯತ್ನಿಸುತ ಧ್ವಂಸಗೊಳಿಸಿ

ಘನದ ನೆಮ್ಮದಿಯ ಗೌರವಾರ್ಪಣದಿ ಅನುಸರಿಸಿಕೊಂಡು ಬಂದು
ಗುರಿಗಳೆಲ್ಲವೂ ಉನ್ನಯನದಲ್ಲಿ ಪ್ರಕೃತಿಯಾ ಇಚ್ಛೆಗಂದು;
ಚೈತನ್ಯ–ಕೊಡುಗೆ ಅಪರಿಮಿತವಾಗ ಆಗಮಿಸಿ ಅವನ ಕಡೆಗೆ,
ಅವುಗಳೆಲ್ಲವೂ ಅವನ ಜೀವನದ ಉಸಿರಿರಲು ಮೂಲ ಝರಿಗೆ

**(ಶ್ರೀ ಅರವಿಂದರ 'ಸಾವಿತ್ರಿ'; ಪುಟ 26)**

## 4. ಅಕ್ಷರದ–ಜ್ಯೋತಿ–ನಕ್ಷತ್ರ–ಗಡಣ

ಮೊದಮೊದಲ ಭಾವದಲಿ ಅಂತರಂಗ ಅವಸರದಿ ಇರುವ ಭಾವ
ಓ ಪ್ರಾಣ ಕೇಳು, ಹಿಗ್ಗಿನಲಿ ಹಿಗ್ಗೆ, ಇದು ಪಕ್ವಗೊಳದ ಜೀವ!
ನೀನೀಗ ಬಂದು ತಲುಪಿರಲು ಇಲ್ಲಿ ಅನಂತಾನಂತ ವ್ಯಾಪ್ತದೆಡೆಗೆ
ಆ ಘನದ–ಶಾಂತ–ಋತಚೇತದಾತ್ಮ ನಿರ್ಮಾಯ ಮೌನದೆಡೆಗೆ

ಲಂಘಿಸಿಹೆ ನೀನು ಆ ರಸಾತಲದ ಆ ಗಭೀರ–ಬಿಲದ ಎಡೆಗೆ
ಆನಂದಮಯದ ಆ ಸೃಷ್ಟಿಪೂರ್ವದಾ ದಿವ್ಯ–ತಲದ ನೆಲೆಗೆ!
ಗಡಿಬಿಡಿಯಲೀಗ ಎಲ್ಲೆಸೆದೆ ನಿನ್ನ "ಸ್ವ"ತ್ತಿನಾ ಗಮ್ಯ–ಕರ್ಮ?
ಎಲ್ಲಿಹುದು ನಿನ್ನ "ಸ್ವ"ತ್ತಿನಾದಮ್ಯ ನಿತ್ಯದಾ ಶಕ್ತಿ–ಧರ್ಮ?

ಆ ನಿತ್ಯ–ಪರಮ–ಶಾಶ್ವತದ–ಪಥದ ಬಂಧನಕೆ ಹೊಂಚಿ ತಾನು
ಮೃತಗತಿಯಲಿಂತು ನಿಂತಿರುವ –ಜಡದ ತಟದ ಮೇಲೆಸೆದೆಯೇನು?
ಮೂರುಭಾವದೊಳು ಅವನಿರುವ "ಏಕ", ಸ್ವಯಂಭೂ ತತ್ತ್ವವಾಗಿ
ಅವನಿಹನು ಪ್ರಾಣ ಜೊತೆಗಿದೋ ಜಗದ ಅನುರೂಪಿ ತೇಜವಾಗಿ

ಅಕ್ಷರದ–ಜ್ಯೋತಿ–ನಕ್ಷತ್ರ–ಗಡಣಕವನ ಸಂಕಲ್ಪಕಾಗಿ
ನೀ ಏನಗೈದೆ ತ್ವರಿತದಲಿ ಇಂತು ಅವನ ಆ ಉದ್ದೇಶಕಾಗಿ?
ನುಣುನುಣುಚಿಕೊಳುವ ಕರ್ಮವದು ತರದು ಎಂದಿಗೂ ವಿಜಯ–ನಿಕಟ
ಜೊತೆಗಿದೋ ದೂರ ಸಂಮಾನವಿಡುವ ಭಾವಾಧಿಪತ್ಯ ಮುಕುಟ!

ಆ ಮೂಲ ನೆಲೆಯ ಅಜ್ಞಾತದೆದೆಯ ಸೆಲೆಯಿಂದ ಉದಿತಗೊಂಡು
ಕಾರ್ಯಗೈಯಲೆನೆ ಇನಿತಿದೋ ಈಗ ನಿನ್ನೆಡೆಗೆ ಗಮಿಸಿ ಬಂದು,
ಆದರೂ ಸಹಿತ ಏನೆನಿತು ಕೂಡ ಪರಿಪೂರ್ಣಗೊಳದೆ ಉಳಿದು
ಅದಕೀಗ ಲೋಕ ತಾ ಮಾತ್ರ ಸತತ ತಂತಾನೆ ಮುಂದುವರೆದು

ಇದು ಏಕೆ ಇಂತು, ಗಮನಿಸಿರೆ ಇಲ್ಲಿ, ನರ–ದೇವ ಗೈದ ನಿರತ
ಪರಿಪೂರ್ಣಗೊಳದ ವೈಶ್ವಿಕದ ಕಾರ್ಯವಿದು ಮಾತ್ರ ಇಲ್ಲಿ ಘಟಿತ.

ನಿತ್ಯ ಶಾಶ್ವತದ ಘನಶೂನ್ಯ ಮಾತ್ರ ಸನಿಹದಲಿ ಬಂದುದಿಂದು
ದುರುಗುಟ್ಟಿತೀಗ ನಿನ್ನ ದೃಷ್ಟಿಗಳ, ಹತಗೊಳಿಸಿ ಹೃದಯವಿಂದು,

ಆದರೆಲ್ಲಹುದು ಆ ವಿಶ್ವಪ್ರೇಮಿಯಾ ತಜ್ಜನಿತದಾತ್ಮದಿಚ್ಛೆ
ಅನಂತಾನಂತ ಸಮ್ಮತಿಯ ಶಾಂತ ಸುವ್ಯಾಪ್ತ ಸ್ಪಂದದಿಚ್ಛೆ,
ಮತ್ತಿದೋ ಅಲ್ಲಿ ಅಮೃತತ್ವ ನಿತ್ಯ ಆ ಗುಹ್ಯ–ಹೃದಯದಲ್ಲಿ
ಸ್ಪೃಷ್ಟಾರ–ಪೂರ್ಣ–ಅಗ್ನಿಗೀಗಿದೋ ಮಂತ್ರದಾ ಪಠನದಲ್ಲಿ

ಓಂಕಾರದಲ್ಲಿ ತಾ ಪ್ರತಿಮೆಗೊಂಡು ಸಮ್ಮತಿಯು ಬೃಹದ್–ಭಾಗಿ
ಘನಶಾಂತ ಮತ್ತೆ ಭಾವಮಗ್ನತೆಯು ಮಧ್ಯದಲಿ ಸೇತುವಾಗಿ,
ರಾಗಾನುರಾಗದಾವೇಗವೀಗ ಸಂಯೋಗ–ಯೋಗದಂತೆ
ಲಾವಣ್ಯಪೂರ್ಣ ಸೌಂದರ್ಯರಾಶಿ ತುಂಬಿರುವ ವಧುವಿನಂತೆ

ವೈಭವೋಪೇತ ಪ್ರತಿಶಕ್ತಿತೇಜ ತಾನುಕ್ಕಿ ಉಕ್ಕಿ ಬಂದು
ಆ ಕಕ್ಷೆಯಲ್ಲು ತಾನಿಳಿದು ಇಂದು ಮುತ್ತಿಡುತ ಮುದದಿ ನಿಂದು
ಸರ್ವ ರಕ್ಷಣೆಗೆ ಸದಾ ಮುದಹಸಿತ ಇದು ಸ್ವರ್ಣಶಿಖರ ಮಾಲೆ,
ಇದು ತಾನೆ ಈಗ ವಸ್ತು–ವಿಷಯಗಳ ಗರಿಮೆಯಾ ಸ್ವರ್ಣ–ಲೀಲೆ?

ಜೀವ–ಜೀವನದ ಆ ಗುಹ್ಯ–ಗೂಢದುದ್ಗಮದ ತಾಣದೊಳಗೆ
ಇದು ನಿಯತಿ ಸಹಜ ಇದು ಋತದ ಓಜ ಚೈತನ್ಯದಾತ್ಮದೊಳಗೆ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 3 ರೇಣು 2 ಪುಟ 310–11)**

## 5. ಧರ್ಮಸಂಕ್ರಾಂತ ನಾದ–ಮಂಡಳವು

ಪಾರಲೌಕಿಕದ ಚಿದ್ರೂಪ–ಶಕ್ತಿಗಳ ಕ್ಷಮತೆಗಳ ಧಾಮವಾಗಿ
ಧರ್ಮಸಂಕ್ರಾಂತ ನಾದ–ಮಂಡಳವು ವಿರಾಟ್–ಪೂರ್ಣವಾಗಿ,
ದೀಪ್ತಿಮಯ ತೇಜದಭಿಜಾತ ಗೀತ–ಸಂಗೀತ–ವಾದ್ಯ–ವೃಂದ
ಸ್ವರಗ್ರಾಮವೊಂದು ಅನುಸ್ಪಂದದಲ್ಲಿ ಪರಿವೃತ್ತಿ ನಾದ–ಛಂದ

ಏಕತಾಲದಲಿ ಸಂವಾದವಮಿತ ತಲ್ಲೀಯ ಘನವು ಇಲ್ಲಿ
ಧ್ವನ್ಯಾತ್ಮವೀಗ ಸ್ವರಕೂಟದಲ್ಲಿ ಆತ್ಮದಾ ಬಂಧದಲ್ಲಿ
ಕೊಡು–ಕೊಳುವ ಸ್ಪಂದದಲಿ ಪೂರ್ಣ ನಾದ–ಸ್ವರ–ಭಾವ–ಬಂಧದೊಳಗೆ
ಸಮನ್ವಯದಲ್ಲಿ ಸಮ್ಮಿಲಿತಗೊಂಡು ಏಕ–ಲಯ–ತಾಳದೊಳಗೆ

ಸಂಗಮದಿ ಮುದಿತ ತಲ್ಲೀನಪೂರ್ಣ, ಅಗಣಿತದ ಅಂತರಾಳ.
ಪ್ರಲಂಬಿತಗೊಂಡ ನವನವೋನ್ಮೇಷ ಈ ಲೋಕ–ಲೋಕಗಳಿಗೆ
ಅವನೀಗ ಉದಿತಗೊಳ್ಳುತಲಿ ಸ್ಪಂದ ಕಾಂತಿಯುಸಿರುಗಳಿಗೆ
ವೈಶ್ವಿಕದ ನಿತ್ಯದನಿಮೇಷ ದಿಟ್ಟಿಯಲಿ, ಬೆಳಗುಗೊಂಡ ಭಾಗ.

ಸರ್ವಸ್ವವೆಲ್ಲ ಹೊಳೆಹೊಳೆವ ಕಳೆಯ ಆ ದಿವ್ಯಜ್ಯೋತಿಯೀಗ
ಸುಸ್ಥಿರದಿ ನಿತ್ಯ–ನೆಲೆವಾಸಿಯಾಗಿ ಅವತಾರ ಕಂಡುದೀಗ
ಏಕೈಕ ಶಾಂತ ಘನಸಾಂದ್ರಮಯದ ಅರ್ಣವದ ವರ್ಣಗಳಲಿ
ಲಹರಿಯೊಂದುದಿತ ವಿಕಸನಕೆ ಮುದಿತ ನಾದ–ವರ್ಣದಲಿ ತೇಲಿ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 3 ರೇಣು 3 ಪುಟ 325)**

# 6. ಸರ್ವಶಕ್ತನ ಜ್ವಲಿತಾಗ್ನಿ ಜ್ವಾಲೆಗೆಜ್ಜೆ

**ಶಿವನ ಆ ತೋಷ–ತಾಂಡವದ ನೃತ್ಯ ಲಯ–ತಾಳ–ನಾದದಲ್ಲಿ**
**ಛಿನ್ನ–ವಿಚ್ಛಿನ್ನಗೊಳಿಸಿತ್ತು ಗತವ ಬ್ರಹ್ಮಾಂಡವಾಗುವಲ್ಲಿ**

ರುದ್ರ–ತಾಂಡವದ ನೃತ್ಯ ತಾನೊಂದು, ಶಿವ ಛಿದ್ರಗೊಳಿಸಿ ಭೂತ
ಲೋಕ–ಲೋಕಗಳು ಅವತರಣಗೊಳಲು ಸಿಡಿಲಿನಬ್ಬರದ ಘಾತ,
ಆ ಭೂಮ–ಭೀಮನಾದದಲಿ ಅಲ್ಲಿ ಅಪ್ಪಳಿಸಿ ಹೆಜ್ಜೆ–ಹೆಜ್ಜೆ
ಪದಾಘಾತದಲಿ ಆಘಾತ ಭೂಮಿ, ಜ್ವಲಿತಾಗ್ನಿ ಜ್ವಾಲೆ–ಗೆಜ್ಜೆ

ಜೊತೆಗಿಹುದು ಮೃತ್ಯು ಹೂಂಕಾರದಲ್ಲಿ ಶಾಶ್ವತಕೆ ಇತ್ತು ದಾರಿ
ಕೂಗುಮಾರಿಯೊಲು ಅಬ್ಬರದ ಬೊಬ್ಬೆ ತರಿತರಿಯಲೆನಲು ತೂರಿ
ಮತ್ತಿದೋ ಈಗ ಅವನ ಹಸಿವಿಳಿಸೆ ಜಗವೊಂಥಪೂರ್ಣಗೊಂಡು;
ಖಂಡನದ ರೆಕ್ಕೆಗಳಿಗಿತ್ತು ನಾದ ಝುನ್–ಝುನಿತ ಏಕವಿಂದು

ರಣಕೇಕೆಯೊಂದು ಅಬ್ಬರಿಸಿತಿಂದು ಆ ಭೂಮಕಾಯದಿಂದ
ನನ್ನ ಕರ್ಣಗಳ ತುಂತುಂಬಿಕೊಂಡು ನೆಲೆನಿಂತುದಿಲ್ಲಿ ಛಂದ,
ರಣಭೇರಿಯಲ್ಲಿ ಎಚ್ಚರಿಸಿತಿಂತು ಜೊತೆಜೊತೆಗೆ ಲೋಕವಾದ
ಕವಚಬಂಧದಲಿ ಅವಿತ ತಮಕೀಗ ಕಂಪಿತದಿ ನಿತ್ಯ ನಿನದ.

ನಾ ಕಂಡೆನೀಗ ಆ ಸರ್ವಶಕ್ತನಾ ಜ್ಯೋತಿ–ಮಿಡಿತದಿಂದ
ಆ ಆದ್ಯ–ಶೋಧ ಸಾಧನೆಗೆ ವೃಂದ ಆನ್ವೇಷಕೆಂದು ಬಂದ
ಪ್ರಜ್ವಲನದಲ್ಲಿ ಉಜ್ವಳಿಸಿಕೊಂಡು ಮುಂಚೂಣಿಯಲ್ಲಿ ನಿಂದ
ಆ ಖೇಖಮಧ್ಯೆ ಸ್ವರ್ಲೋಕದೇಣು–ತಾಣದಲಿ ಸ್ಪಂದದಿಂದ

ಮುದಿತ ಜೀವನದ ಜೀವ–ನದಿಯಾಗಿ ಅಲೆಯಾಗಿ ಚಲಿಸಲೆಂದು
ಅಂಬರದ ತುಂಬ ಹಂಬಲಿಸಿ ನಿಂದ ಆ ಸೃಷ್ಟಿ–ಸ್ತರಗಳಿಂದು
ಅವರೋಹಗೊಂಡು ಭವದೆಡೆಗೆ ಬಂದು ಮೆಟ್ಟಿಲಲಿ ರೂಪುಗೊಂಡು
ಭಾವ ಜೀವನಕೆ ದೇವ–ಜ್ಯೋತಿಗಳ ಅನುಭಾವ ನೀಡಲೆಂದು

ದಿವ್ಯತೆಯ–ಪುಂಜ–ಪುಂಜಗಳ ಮೇಳ ನೀಹಾರ ಮಾಲೆಯಲ್ಲಿ
ದೃಷ್ಟಗೊಂಡಿರುವ ಪುರೋಗಾಮಿಗಳು ಈ ಋತದ ನಿಯತಿಯಲ್ಲಿ,
ಆ ರಜತ–ತಾರೆ ತಾನುದಿತಗೊಳುವ ಪಥಗಳಲಿ ಉದಿತಗೊಂಡು
ಮರ್ತ್ಯ ಜೀವನದ ಕಿರುಕೋಶದೆಡೆಗೆ ಚೇತನದ ವೃಂದವಿಂದು.

ಈ ಅಚಿತಿಯಾ ಕೋಶಗಳಿಗೀಗ ಸೂಚನೆಯು ದೊರಕಲಿಹುದು
ನಾನರಿವೆನೀಗ ಅಲ್ಲಿದೋ ಸರ್ವ–ಸಂಪರ್ಕ ಸ್ಪಂದವಿಹುದು
ಪ್ರಕೃತಿಯೊಡನಿತ್ತು ತಾನಾಗ ಅಲ್ಲಿ ಮತ್ತಿದೋ ಊರ್ಧ್ವದಲ್ಲಿ
ನಾಕ–ಲೋಕಗಳ ಸಂಯೋಗವಿದ್ದ ಸಾಂಗತ್ಯ ನಿತ್ಯದಲ್ಲಿ

ಚೈತನ್ಯವೊಂದು ತಾ ವ್ಯಾಪ್ತಗೊಂಡು ಆಕಾಶ ಧರಿಸಿಕೊಂಡು
ಭಾವಪರವಶದ ಆನಂದ–ತೂರ್ಯದೌನ್ನತ್ಯದಲ್ಲಿ ನಿಂದು
ಪೂರ್ಣಾತಿಪೂರ್ಣ ಅವತರಣಗೊಂಡು ಸ್ವಚ್ಛಂದ ಛಂದದಲ್ಲಿ
ಪ್ರಚ್ಛನ್ನವಾದ ಚಿಲುಮೆಗಳು ಚಿಮ್ಮಿ ಚಿಮ್ಮುತ್ತ ಹೊಮ್ಮುತಲ್ಲಿ

ದೈವವದು ತಾನು ಅವತರಣಗೊಂಡು ಇಳಿದಿಳಿದು ಇಳೆಗೆ ಬಂದು
ಆ ಮಹತ್ತರವು ಪರಾಹಂತದಲು ಸಾಕಾರಗೊಳ್ಳಲೆಂದು

******

ಪ್ರಜ್ಞಾನ ನಿನದ ವಿಜ್ಞಾನ ಮೂಲ ನೆಲೆಯ ದೃಷ್ಟಾರರಿವರು
ಮಾಧುರ್ಯಮಯದ, ಸಾಮರ್ಥ್ಯ ಘನದ ದಿವ್ಯದಾನಂದ ಘನರು,
**ಸೂರ್ಯತೇಜದಲಿ ಪಡಿಮೂಡಿಕೊಂಡ ಸೌಂದರ್ಯ ಪಥಗಳನ್ನು**
**ಸತತ ಧ್ಯಾನದಲಿ ಆತ್ಮಭಾವದಲಿ ಶೋಧಕರು ಕಂಡರಿನ್ನು**

ಸಪ್ರೇಮಮಯದ ಅಗ್ನಿದೀಪ್ತಿಯಾ ಪರಿವಹನ ಧಾರೆಯಂದ
ಕರಣಗಳ ಬೀಸಿ ಅರ್ಣವವ ದಾಟಿ ಸಾಗಿಹುದು ಋಜು–ವೃಂದ
ಸಾನಂದ–ಘನದ ಹೇಮವರ್ಣೀಯ ದ್ವಾರಗಳ ಪರಿಧಿಯೊಳಗೆ
ಪಾದನ್ಯಾಸಗಳ ಲಲಿತ ಲಾಸ್ಯದಲಿ ತಲ್ಲೀನರಿವರು ಹೀಗೆ

ತೇಜದುಂಬಿರುವ ಪ್ರಕೃತಿ ವದನದಾ ಚಿರ–ದೀಪ್ತಿ–ಶಾಂತಿಯನ್ನು
ಸಾರ್ಥಕ್ಯದಲ್ಲಿ ಸರ್ವಸಮಗೊಳಿಸೆ ಪ್ರಜ್ಯೋತಿ –ಕಾಂತಿಯನ್ನು,
ಸತತದಲಿ ಸೋತು ನೊಂದಿರುವ ಬುವಿಗೆ ನವತೋಷ ತುಂಬೆ ಮುದದಿ
ಅವರ ವಿಕ್ರಮದ ಪದದ ವಿನ್ಯಾಸ ಖಚಿತದಲಿ ಬರುವ ದಿನದಿ.

**ದಿವ್ಯಲೋಕದಾ ಸರ್ವ ತೇಜವದು ಸಂದರ್ಶಿಕಿಳಿದು ಬರಲು**
**ಮೃಣ್ಮಯದ ಶುದ್ಧ ಚಿಂತನದ ಸರಣಿಗಳನೀಗ ಕಾಣಲೆನಲು,**
**ವ್ಯೋಮಭೂಮದಾ ಸಾಮರ್ಥ್ಯವೀಗ ಸಮಸಮದಿ ಮಿಲನಗೊಳಲು**
**ಲೌಕಿಕದ ಹೃದಯಗಳಿಗೀಗ ಶಕ್ತಿ ತುಂಬುತಲಿ ಸ್ಪರ್ಶಗೊಳಲು,**

ಬುವಿ ಹೃದಯ ಮಿಡಿತ–ತುಡಿತಗಳು ಸತತ ದಡ ದಾಟಿಕೊಂಡು ಸಾಗೆ
ಆ ಪರಮದೂರ್ಧ್ವದೌನ್ನತ್ಯವಿರುವ ಅತಿಮಾನವನಾ ಹಂತದೆಡೆಗೆ,
ಲೌಕಿಕದ ದೃಷ್ಟಿ ತಾ ಅರಳಿಕೊಂಡು ವಿಸ್ತಾರ ಘನದ ವ್ಯಾಪ್ತಿ
ಅನಂತತೆಯಲ್ಲಿ ತಾ ಸಾಂತಗೊಂಡು ಸಂಯೋಗ ಸುಲಭ ಪ್ರಾಪ್ತಿ

**(ಶ್ರೀ ಅರವಿಂದರ 'ಸಾವಿತ್ರಿ'; ಪುಟ 343–44)**

---

**ಟಿಪ್ಪಣಿ:**

ರುದ್ರ ತಾಂಡವ; ಶಿವನ ತಾಂಡವವನ್ನು "ಪರಮಾಣುವಿನ ಅವಿರತವಾದ ನಿರ್ದಿಷ್ಟ ಚಲನಾ ಕ್ರಮಾಂಕದ ಪ್ರತಿಮೆಯಾಗಿ ಆಧುನಿಕ ವಿಜ್ಞಾನವೂ ಸಮ್ಮತಿಸಿದೆ. ಇದೇ ಭಾವದಲ್ಲಿಯೇ ರಾವಣ ವಿರಚಿತ 'ಶಿವ ತಾಂಡವ ಸ್ತೋತ್ರ'ವನ್ನೂ ಗಮನಿಸಬಹುದು. ಧರಾಧರೇಂದ್ರ ನಂದಿನೀ ವಿಲಾಸಬಂಧು ಬಂಧುರ/ಸ್ಫುರದ್ ದಿಗಂತ ಸಂತತಿ ಪ್ರಮೋದ ಮಾನ ಮಾನಸೇ" ಎನ್ನುವ ಶಿವತಾಂಡವ ಸ್ತೋತ್ರದಲ್ಲಿ, ಸ್ಫುರದ್ ದಿಗಂತ ಸಂತತಿ ಎಂದರೆ, ಅಗಣಿತ ಲೋಕಗಳು ಸ್ಫುರಣೆಗೊಳ್ಳುತ್ತವೆ.

## 7. ಶಕಲದಾಂತರ್ಯ ತೇಜಕಾಂತಿ

ಶಕಲದಾಂತರ್ಯ ಕಾಂತಿಯದು ಚಿಮ್ಮಿ ಧಾರೆಯೊಲು ಹರಡಿತೀಗ
ಭವ್ಯತೇಜಗಳ ಕಾಂತಿ ಕಣಗಳವು ತ್ವರಿತದಲಿ ಪ್ರಕಟವೀಗ,
ಇಲ್ಲಿಗ ದರ್ಶಗೊಂಡಿಹವು, ಬಳಸಿ ನಿಂತಿರುವ ಬೆಳಕ–ಹಾಸು
ಸೂಕ್ಷ್ಮಾತಿಸೂಕ್ಷ್ಮ ಉಸಿರುಸಿರಿನಲ್ಲಿ ಉದಿತ ದೀಪ್ತಿಯಾ ಸೂಸು
ಸಾರ್ಥಕದ ಭಾವದಲಿ ಮೂರ್ತಗೊಂಡು ಈ ಲೋಕ ಸೃಷ್ಟಿಯಿಲ್ಲಿ
ಬ್ರಹ್ಮಾಂಡ–ಬ್ರಹ್ಮ ಸೃಷ್ಟಿಯಿದು ಪ್ರಕಟ ಸುಸ್ಪಷ್ಟಗೊಂಡಿತಿಲ್ಲಿ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 5 ಪುಟ 155)**
**–ಪುಟ್ಟು ಕುಲಕರ್ಣಿ**

---

**ಟಿಪ್ಪಣಿ:**

ಶಕಲ(ಫೋಟಾನ್); ಸೂರ್ಯನಿಂದ ನಮಗೆ ಬೆಳಕು ಬರುತ್ತದೆ ಎಂದರೆ, ಅವನಿಂದ ಹೊರಟ ಶಕಲಧಾರೆ ಪ್ರವಹಿಸುತ್ತಿದೆ ಎಂದರ್ಥ.

## 8. ದಿವದ ಅನುಭೂತಿ ಶಾಖೆ

ಮೃತ್ಯುವಿನ ಬೃಹತ್–ಘಳಿಗೆಯಲಿ ಬೀಜವೊಂದನ್ನು ಬಿತ್ತಿ,
ಮೃಣ್ಮಯದ ಮನುಜ–ಭಾವದಲಿ ದಿವದ ಅನುಭೂತಿ ಶಾಖೆ ಕೆತ್ತಿ,
ತನ್ನದೇ ಮರಣ ಶಾಸನವನೀಗ ಉಲ್ಲಂಘಿಸುತ್ತ ಪ್ರಕೃತಿ
ಚಿರದಾತ್ಮದಿಚ್ಛೆಗಿದೋ ಪರಿವರ್ತಗೊಂಡಿರುವ ನಿಯತಿ

**(ಪುಟ 546)**

## 9. ರಸಸಿದ್ಧಿ

ಅಚ್ಚರಿಯ ಘನದ ಯಾಜಕರ ಸತತ ಶ್ರುತಿಗಳಿಗೆ ಉದಿತಗೊಂಡು
ಅವಳಾತ್ಮ ದ್ವಾರಗಳು ಪೂರ್ಣ ಅರಳಿ ನವ ಸೂರ್ಯನೆದುರುಗೊಂಡು.

ರಸಸಿದ್ಧಿಯೀಗ ಸಿದ್ಧಿಸಲು ಸಹಜ, ರೂಪಗಳು ಮೇಳಗೊಂಡು
ವಿಕಸನದಿ ಸತತ ರೂಪಾಂತರಕ್ಕೆ, ಋತದ ಹಾರೈಕೆ ಸಂದು.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 5 ರೇಣು2 ಪುಟ 395)**

## 10. ಆ ಪಚ್ಚೆ ಹ್ಲಾದಾನುಹ್ಲಾದ

ಒಂದೊಮ್ಮೆ ಅಲ್ಲಿ ನಿರ್ಮಾಯ ಘನದ ನಿಶ್ಶೂನ್ಯದಲ್ಲಿ ಸೃಷ್ಟಿ–
ಸೃಷ್ಟಿಗೊಳ್ಳಲೆನೆ ತಾನುದಿತಗೊಂಡು ತುಂಬಲೆನೆ ಭವ್ಯ–ದೃಷ್ಟಿ,
ಒಂದೊಮ್ಮೆ ಮತ್ತೆ ಆಕಾರರಹಿತ ಆ ವಿಶ್ವಶಕ್ತಿ ಅಲ್ಲಿ
ಸಾಕಾರಗೊಳಲು ಕಾತರಿಸಿ ಬಂದು ಭವದ್ರವ್ಯ ಹುಟ್ಟಿನಲ್ಲಿ,

ಉತ್ತರೋತ್ತರದ ಆ ಊರ್ಧ್ವಗಮನದಲಿ ಸತತ ಸಾಗುವಲ್ಲಿ
ಜೀವನವು ಅತ್ತ ಸುಪ್ತಚೇತನದಿ ತಾ ಮಿಡಿದು ಸಾಗುವಲ್ಲಿ,
ಅದರ ಆ ಪಚ್ಚೆ ಹ್ಲಾದಾನುಹ್ಲಾದ ಆಹ್ಲಾದದಲ್ಲಿ ಸಾಗಿ
ಮರಕತವು ಚಿಗುರು–ಚಿಗುರುಗಳಲೆಲ್ಲ ನಗುನಗುತ ತೇಲಿತೂಗಿ,

ಮತ್ತಿದೋ ಅದರ ಸೌಂದರ್ಯವೆಲ್ಲ ಮುದಹಸಿತ ಮೋದವಾಗಿ
ವಿಕಸನದಿ ಪಕಳೆ ವಿಸ್ತಾರವಾಗಿ ಸಂಕುಲಕೆ ಪುಷ್ಪವಾಗಿ,
ಸಂವೇದವೀಗ ಸಂವಾದಗೊಂಡು ಅಂಗಾಂಶ–ಕೋಶಗಳಲಿ
ನರ–ನಾಡಿಗಳಲಿ ಮರ್ಮರದ ನಾದ–ವರ್ಣಮಯ ಪರ್ಣಗಳಲಿ

ಈಗಿದೂ ಮತ್ತೆ ಸಾಂತ–ಚಿಂತನವು ತಾ ಬಂಧಗೊಳಿಸಿತೀಗ
ಬುದ್ಧಿಯಲಿ ಶುದ್ಧಗೊಳ್ಳಲೆನೆ ಸ್ಥಿತದ ಧೂಸರದ ಛಾಯೆ–ಭಾಗ,
ಆತ್ಮವದು ಮಿಡಿದು ತನ್ನದೇ ಗುಹ್ಯದಿಂದಲ್ಲಿ ತೀಕ್ಷ್ಣದೃಷ್ಟಿ
ಅಂಕುರಕೆ ಸಲಲು ಈ ಮಾಂಸ–ಮಜ್ಜೆಗಳ ಮಧ್ಯೆ ಇರಿಸಿ ಸೃಷ್ಟಿ,

ಇಂತಿರಲು ಎಂತು ಆ ನಾಮರಹಿತ ಜ್ಯೋತಿಯದು ಜಿಗಿದು ಬಂದು
ಮಾನವನ ಮೇಲೆ ಕೃಪೆಯಿರಿಸಿ ಅಪ್ಪಿ ಅಪ್ಯಾಯವಾಗದಿಹುದು?,
ಜೊತೆಯಲ್ಲಿ ಮತ್ತೆ ಆ ಅನೂಹ್ಯದಾ ಶಕ್ತಿಗಣವುಕ್ಕದಿಹವೇ?
ಪ್ರಕೃತಿಯಾ ಸುಪ್ತಿಯಿಂದಲ್ಲಿ ಈಗ ಉತ್ಥಾನಗೊಳ್ಳದಿಹವೆ?

**(ಶ್ರೀ ಅರವಿಂದರ 'ಸಾವಿತ್ರಿ'; ದಳ 10 ರೇಣು 4 ಪುಟ 648–9)**

## 11. ಆತ್ಮಕಿದೆ ಸೂಕ್ಷ್ಮ– ಭೂಕಂಠ –ಸೇತು

ಪುನಃ ಸಂಲಗ್ನಗೊಳಿಸೆ ಸಮರಸದ ಪರಿಪೂರ್ಣ ರೂಪವರಳಿ
ವಿಭಜನೆಯ ಚಿಹ್ನೆ ಮಧ್ಯದಲಿ ಇದ್ದು ಸಂಯೋಗ ಹಂತ ತಾಳಿ;
ಸಾಂತದಾ ಜೊತಗೆ ಮನಸಿನಾ ಜೋಡು–ಸಂಪರ್ಕ ಕೊಂಡಿಯಾಗಿ,
ಆರೋಹಗೊಳುವ ಆತ್ಮಕಿದೆ ಸೂಕ್ಷ್ಮ– ಭೂಕಂಠ –ಸೇತುವಾಗಿ

ಈ ಗೂಢ ಬಂಧಪತ್ರದಲಿ ಬರೆದ ವಿಷಯಗಳ ನಮ್ಮ ಸಾಲು
ನವೀಕರಿಸುತ್ತ ಕಡ್ಡಾಯವಾಗಿ ಕಾರ್ಯದಲಿ ತೊಡಗಿಕೊಳಲು,
ನಮ್ಮ ಹೃದಯಗಳು ಸ್ಮರಿಸುತಲಿ ಈಗ ಆ ಗತದ ಚಿಂತ–ದಿವ್ಯ
ಪರಿಪೂರ್ಣ ವಿಶ್ವ ಜೊತೆ ಐಕ್ಯಮಂತ್ರ ಪುನರ್–ರಚನೆಯಲಿ ನವ್ಯ

ಆದಿಯಕ್ಕರಕೆ ಅಂತ್ಯದಕ್ಕರವು ಸಮರಸದ ಪರಮ–ನಾದ;
ಆಗಲ್ಲಿ ಪ್ರಕೃತಿ –ಚೈತನ್ಯ–ಒಂದು ಅಮೃತದಾ ಸ್ಪಂದ ಮೋದ.
ಆಧಾರದಲ್ಲಿ ಆ ಊರ್ಧ್ವದಲ್ಲಿ ಇರೆ ಆದಿ–ಅಂತ್ಯ–ಬಿಂದು
ಈ ಎರಡು ತಾಣ ಮಾಯಕದ ಸತತ ಯೋಜನೆಯ ಆತ್ಮವಿಂದು.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 56–7]**

**– ಪುಟ್ಟು ಕುಲಕರ್ಣಿ**

---

**ಟಿಪ್ಪಣಿ:**

ಇಲ್ಲಿ ಶ್ರೀ ಅರವಿಂದರು ಭಾಷೆಯ ವ್ಯುತ್ಪತ್ತಿಯ ಬಗೆಗೆ ಹಾಗೂ ಅದು ಹೇಗೆ ವೈಶ್ವಿಕ ಆಯಾಮದಲ್ಲಿಯೇ ಚಿಂತನಗಳನ್ನು ರೂಪಿಸುತ್ತ, ಪ್ರಜ್ಞೆಯನ್ನು ವಿಕಸಿಸುತ್ತ ಚೈತನ್ಯ ಸ್ವರೂಪ ತಾಳುತ್ತದೆ ಎನ್ನುವದನ್ನು ಮಂತ್ರ ಸ್ವರೂಪದಲ್ಲಿ ಅಭಿವ್ಯಕ್ತಿಸಿದ್ದಾರೆ.

ಭೂಕಂಠ; ಇದು ಸಂಯೋಗಭೂಮಿ ಎಂತಲೂ ಮತ್ತು ಸಂಧಿ ಸ್ಥಳವೆಂತಲೂ ಬಳಕೆಯಲ್ಲಿದೆ. ಭೂಗೋಳ ಶಾಸ್ತ್ರ ಮತ್ತು ಜೀವಶಾಸ್ತ್ರದ ವಿವರಣೆಯಲ್ಲಿ, ಇದನ್ನು ಎರಡು ದೊಡ್ಡ ಭಾಗಗಳಿಗೆ ಸಂಪರ್ಕ ಕಲ್ಪಿಸುವ ಇಕ್ಕಟ್ಟಾದ ಭಾಗವಾಗಿದ್ದರೆ / ಶರೀರದಲ್ಲಿ ಅದರಲ್ಲೂ ಕಶೇರುಕಗಳಲ್ಲಿ ಮೆದುಳಿನ ಮಧ್ಯದ ಸಂಪರ್ಕ ಭಾಗ.

ಆದಿಯಕ್ಕರ(Alpha); ಇದು 'ಅ' / ಅಂತ್ಯದಕ್ಕರ (Omega) ಇದು ನಮ್ಮಲ್ಲಿ 'ಕ್ಷ' ಅಥವಾ 'ಕ್ಷಂ'. ಇದಕ್ಕೇ ಜಗನ್ಮಾತೆಯನ್ನು 'ಅಕ್ಷಮಾಲಾ'ಎನ್ನುತ್ತಾರೆ.

ಸ್ವರಗಳು ಅನಂತ; ವ್ಯಂಜನಗಳು ಸಾಂತ. ವ್ಯಾಕರಣದಲ್ಲೂ ಸಹಿತ ಸ್ವರದ ಸಂಯೋಜನೆ ಇಲ್ಲದೇ 'ಅಕ್ಷರ'ವು ರೂಪುಗೊಳ್ಳುವದಿಲ್ಲ. ವ್ಯಂಜನದೊಂದಿಗೆ ಸಂಯೋಗ ಹೊಂದದಿದ್ದರೂ 'ಸ್ವರ' ಮಾತ್ರ ಅನಂತವಾಗಿಯೇ ಇರುತ್ತದೆ. ಅ ದಿಂದ ಕ್ಷ ದವರೆಗೆ (ಜ್ಞ ದವರೆಗೆ ಅಲ್ಲ). ಅದಕ್ಕಾಗಿಯೇ 'ಅಕ್ಷರ'ವೆನ್ನುತ್ತಾರೆ. ದೇವಿಗೂ ಸಹಿತ ಅಕ್ಷಮಾಲಾ ಎನ್ನುವ ಹೆಸರಿದೆ. ಇಲ್ಲಿ ಇವೆರಡನ್ನೂ ಸಂಯೋಗಿಸುವ ಒಂದು 'ಸಂಪರ್ಕ ಸೇತು' ಇದ್ದೇ ಇರುತ್ತದೆ. ಆದರೆ ಇವೆರಡೂ ಈ ರೀತಿ ಸಂಯೋಗಗೊಂಡಾಗ ಅಲ್ಲಿ ಮಧ್ಯದಲ್ಲಿ ಒಂದು (– ಹೈಫೆನ್) ಇದ್ದೇ ಇರುತ್ತದೆ. ಆರೋಹಗೊಳ್ಳುವ ಆತ್ಮಕ್ಕೆ ಇದು 'ಸೂಕ್ಷ್ಮ ಭೂಕಂಠ ಸೇತುವಾಗಿ' ಇರುತ್ತದೆ. ಜಡ ಮತ್ತು ಚೇತನದ ಮಧ್ಯದ ಈ ಸಂಬಂಧವನ್ನು ವಿಶೇಷವಾಗಿ ಅಧ್ಯಯನ ಮಾಡಲಾಗುತ್ತಿದೆ.

ಇಲ್ಲಿ ಅತ್ಯಂತ ಸೂಕ್ಷ್ಮ ವಿಷಯವಾಗಿರುವದೇನೆಂದರೆ, ಈ ಸಂಪರ್ಕ ಸೇತು ಸ್ವತಃ ಶ್ರೀ ಅರವಿಂದರೇ ಆಗಿದ್ದಾರೆ. ಇದನ್ನು ಅವರ ಜನ್ಮ ವರ್ಷವಾಗಿರುವ 1972ರ ವಿಶ್ಲೇಷಣೆಯಲ್ಲಿ ಕೂಲಂಕಷವಾಗಿ ಅಧ್ಯಯನ ಮಾಡಲಾಗಿದೆ. ಇಲ್ಲಿ ಸ್ವಲ್ಪವನ್ನು ಮಾತ್ರ ವಿವರಿಸಲು ಯತ್ನಿಸುತ್ತೇನೆ; 1872 ನ್ನು 1+8+7+2 ಇದನ್ನು 9 ಎಂದು ಪರಿಗಣಿಸಲಾಗುತ್ತಿದೆ. ಈ ಅಧ್ಯಯನಕ್ಕೆ Ennagram ಎಂದು ಕರೆಯುತ್ತಾರೆ. ಪೂರ್ಣಮಂಡಲದ ಮೊತ್ತ ಅಥವಾ ಮೌಲ್ಯವು ಯಾವಾಗಲೂ 9 ಆಗಿರುತ್ತದೆ. ಈ ಹಂತವನ್ನು ತಲುಪಿದಾಗ ಅದು 'ಯುಗ ಪರಿವರ್ತನೆ'ಯನ್ನು ಸಂಕೇತಿಸುತ್ತದೆ. ಇದರ ಮೌಲ್ಯ 10.

ಇಲ್ಲಿಯೂ ಸಹಿತ 1 ಮತ್ತು 10 ರ ಮೌಲ್ಯವನ್ನು ಈ ಸಂಖ್ಯಾ ತತ್ತ್ವದಲ್ಲಿ 1(ಒಂದು) ಎಂದೇ ನಿಶ್ಚಿತವಿದೆ. ಇದನ್ನು ವಿವರವಾಗಿ ಕಲಿಸಿಕೊಡುವ Theosophicla Addition ಎನ್ನುವ ಅಧ್ಯಯನದ ಪರಂಪರೆಯೇ ಇದೆ. ಇಲ್ಲಿ ಇದನ್ನು "Gnostic Circle" ಎಂದೇ ಕರೆಯುತ್ತಾರೆ. ಸಾವಿತ್ರಿ ಹೇಳುತ್ತಿರುವದು ಈ Gnostic Circle ಬಗೆಗೆ ಎನ್ನುವದು ಮುಖ್ಯ ವಿಷಯ. Nurelli ಮತ್ತು Bachelet ಎನ್ನುವ ಗಣಿತ ಶಾಸ್ತ್ರಜ್ಞರು ಶ್ರೀ ಅರವಿಂದರ ಜನನ ವರ್ಷ 1872 ರ

ಬಗೆಗೆ ಈ Theosophical Addition ವಿಧಾನದಲ್ಲಿ ಅಧ್ಯಯನ ಮಾಡಿ ಪುರಾವಿಸಿದ್ದಾರೆ.

ನಾವು ದಿನನಿತ್ಯ ಉಪಯೋಗಿಸುತ್ತಿರುವ ಗಣಿತ ಸೂತ್ರಗಳು ಕೇವಲ ಭವಬದುಕಿನ ವಿಷಯಗಳನ್ನು ಮಾತ್ರ ತೋರಿಸುತ್ತಿವೆ.

Narrow Isthamus; ಇದು ಭೂ–ಕಂಠ ಸೇತು. ಅಂದರೆ ಸಂಯೋಗ ಭೂಮಿ. ಇದು ನಮ್ಮ ದೇಹದಲ್ಲಿಯೇ ಇದೆ. (ಅವಕಾಶದಲ್ಲಿಯೂ ಈ ವ್ಯವಸ್ಥೆ ಇದೆ) ಶರೀರದ ಎರಡು ದೊಡ್ಡ ಭಾಗಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವ ಇಕ್ಕಟ್ಟಾದ ಜಾಗವಿದು. ಕಶೇರುಕಗಳಲ್ಲಿ ಇದು ಮೆದುಳಿನ ಮಧ್ಯದಿಂದ ಹಿಂಬದಿಗಳಿಗೆ ಸಂಪರ್ಕ ಕಲ್ಪಿಸುತ್ತದೆ.

ಇನ್ನು ದೇಹದಲ್ಲಿ (ಮನುಷ್ಯನಲ್ಲಿ) ಕಶೇರು ಸ್ತಂಭವೂ 33 ಬಿಡಿ ಮೂಳಿಗಳಿಂದ ರಚಿತಗೊಂಡಿರುತ್ತದೆ. ಭ್ರೂಣಾವಸ್ಥೆಯಲ್ಲಿದ್ದಾಗ ಇರುವ ಈ 33 ಮೂಳೆಗಳು, ಜನಿಸಿ ಭೂಮಿಗೆ ಬಂದಾಗ ಕೇವಲ 26 ಮಾತ್ರ ಉಳಿದುರುತ್ತವೆ. ಕೆಲವು ವೈವಿಧ್ಯತೆಯ ಅಭಿವ್ಯಕ್ತಿಯಲ್ಲಿ ಪುಚ್ಛವಾಗಿ ಪರಿವರ್ತತಗೊಂಡ ವ್ಯವಸ್ಥೆಯೂ ಇದೆ.

ಇಂಗ್ಲೀಷಿನಲ್ಲಿಯೇ ಆಗಲಿ ಅಥವಾ ಭಾರತದಲ್ಲಿ, ಈಗ ಪ್ರಚಲಿತದಲ್ಲಿ ಬಳಕೆಯಲ್ಲಿರುವ ಭಾಷಾ ವ್ಯವಸ್ಥೆಯಲ್ಲಿ ಈ ರೀತಿಯ ಖಭೌತೀಯ ನೆಲೆಯ ವಿಷಯಗಳ ಪ್ರತಿಪಾದನೆ ಕಡಿಮೆ. ಇಲ್ಲವೇ ಇಲ್ಲವೆಂದರೂ ತಪ್ಪಲ್ಲ. ಅದರಲ್ಲೂ ರಶಿಯಾದ ಯೂರಿ ಗಗಾರಿನ್ (ಪ್ರಥಮ ಖಗೋಳ ಯಾನಿ) ಹಾಗೂ ಅಮೇರಿಕಾದವರು ಸಾಧಿಸಿದ್ದಾರೆ ಎನ್ನಲಾಗುತ್ತಿರುವ 'ಚಂದ್ರನ ಮೇಲೆ ಮಾನವ' – ನೀಲ ಆರ್ಮಸ್ಟ್ರಾಂಗ್ ಘಟನೆಗಳ ನಂತರ, ಹಾಗೂ ಇದೀಗ ನಮ್ಮ ಸಂಪೂರ್ಣ 'ಸಂವಹನಾ ವ್ಯವಸ್ಥೆಯೂ' ಸೆಟಲೈಟ್ ಆಧರಿಸಿಯೇ ರೂಪುಗೊಳ್ಳುತ್ತಿರುವದರಿಂದ, ಈ ಭೂಮಿಗೆ ಹೊಂದಿಕೊಂಡು ಇರುವ ಖಭೌತೀಯ ನೆಲೆಯ ವಿಷಯಗಳು, ಇವುಗಳನ್ನು ಈ ಅವಕಾಶದಲ್ಲಿ ನಿರೂಪಿಸುತ್ತಿರುವ 'ಬ್ರಹ್ಮಾಂಡ ವ್ಯವಸ್ಥೆ'ಯನ್ನು ಸಾವಿತ್ರಿ ಅತ್ಯಂತ ಸೂಕ್ಷ್ಮವಾಗಿ ಹೇಳುತ್ತಿದೆ. ಅದನ್ನು ನಾವು ಮುಕ್ತ ಹೃದಯದಿಂದ ಸ್ವೀಕರಿಸಬೇಕಿದೆ.

## 12. ನಭ–ನಿಯತಿಯ ಅನುಕರಣೆ

ನೀತಿಸಂಹಿತೆಯ ಮರ್ಮಸೂತ್ರದಲಿ ಮಾನವನು ರೂಪುಗೊಳಿಸಿ
ನಭ–ನಿಯತಿಯನ್ನು ಅನುಕರಣೆ ಗೈದ ಅನುಕೃತಿಯ ಸ್ಪಂದವಿರಿಸಿ
ಸೌಷಮ್ಯಬಂಧ ಸಮರಸದ ಛಂದದಾನಂದ ತಾನಗಳಲಿ
ಸಂಪನ್ನಶೀಲ ಸಾಂಸ್ಕೃತಿಕ ಜೀವ–ಮೇಳದಾ ನಾದಗಳಲಿ

ಪರಿಶೋಧಗೊಳಿಸಿ ಕರಣಸಾಮರ್ಥ್ಯ ಅನುಭೂತಿಗೊಳ್ಳ ಲೆಂದು
ಜೊತೆಯಲ್ಲಿ ಇದೋ ಗಮ್ಯವನು ಬೃಹದ್–ರೂಪದಲಿ ಭೂಮದಿಂದು
ಆಲಿಸಲು ಈಗ ಆ ಅನಾಹತದ ಅಶ್ರುತದ ನಾದ–ಗಮ್ಯ
ಗೂಢದಲಿ ಇರುವ ಆ ಅಗೋಚರವ ಮಿನುಮಿನುಗು ದೃಷ್ಟಿ ಗಮ್ಯ

ವಸ್ತು–ವಿಷಯಗಳು ಅರಿತ ಅನುಭಾವದಾಚೆಯಲು ಇರುವ ಸೆಲೆಗೆ
ಉಡ್ಡಯನವಿಡಲು ಈ ಆತ್ಮಕೀಗ ಬೋಧನೆಯ ನಿತ್ಯ ಬೆಸುಗೆ
ಮಹತಿಗೊಳ್ಳಲೆನೆ ಜೀವನವನೀಗ ದೇದೀಪ್ಯ ಕಲಿಕೆ ಸಂದು
ಜೊತೆಗಿದೋ ಅದರ ಬಂಧನದ ಸರ್ವ ಗಡಿಗಳನು ಮುರಿಯಲೆಂದು

ಆತ್ಮದಭೀಪ್ಸೆಯಲಿ ತುಂತುಂಬಿಕೊಂಡು ಅವಲೋಕಗೊಳಲು ಬೇಗ
ಅದೃಶ್ಯವಿರುವ ಆ ನಿತ್ಯ ಅಮರರಾ ಲೋಕವನ್ನು ಈಗ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 4 ರೇಣು 22 ಪುಟ 359–60)**

**ರಜತದುಷೆಗೆ,**

ಕೆಲವೊಮ್ಮೆ ಸ್ವರ್ಣಲೇಪಿತದ ಸಂಧ್ಯೆಯೆಡೆಯಿಂದ ರಜತದುಷೆಗೆ,
ಮಂದ ಸಲಿಲದಲಿ ಮಿಂದು ನಿಂತಂಥ ಆ ವ್ಯಾಪ್ತ –ಭಿತ್ತಿ ಎಡೆಗೆ
ರತ್ನದೀಪಗಳ ಚಂಚಲದ ಕಾಂತಿ ನರ್ತನದ ಜ್ಯೋತಿ ಪಥದಿ
ದೃಢತೆಯಲಿ ಜಾಲಮಾರ್ಗದಲಿ ಮತ್ತೆ ಅನಿಮೇಷ ದೃಷ್ಟಿ ಹೊಂದಿ,
ಆ ತಾಣದಿಂದ ಭಂಗುರದ ಗತಿಯ ಗಮನದಲಿ ನುಣುಚಿಕೊಂಡು
ಅವಳೀಗ ಸುಲಭ–ಸುಲಭಾತಿಯಾಗಿ ಅಲ್ಲಿಂದ ಮುಂದೆ ನಡೆದು.

**(ಶ್ರೀ ಅರವಿಂದರ 'ಸಾವಿತ್ರಿ'; 4 ರೇಣು 4 ಪುಟ 379)**

## 13. ದಿವ್ಯತ್ವದೆಡೆಗೆ ಸಂಜ್ಞೆ

ಈ ಊರ್ಧ್ವ ಗಮನ ಸಾಹಸದ ನಮನ ನೆಗೆತವಿದು ಗಗನದೆಡೆಗೆ
ಲಘುಚೇತವೀಗ ಆಧಾರದಿಂದ ಚೈತನ್ಯ ಕಾಂತಿಯೆಡೆಗೆ,
ಅವಕಾಶದಲ್ಲಿ ಅವಕಾಶವಾಗೆ ಮಾನವನ ಚಿತ್ತ-ಪ್ರಜ್ಞೆ
ಭಂಗುರವ ತೊರೆದು ಲಂಘನದಿ ಲಘಿಮೆ, ದಿವ್ಯತ್ವದೆಡೆಗೆ ಸಂಜ್ಞೆ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 3 ಪುಟ 116)**

(ಇಲ್ಲಿ ಶ್ರೀ ಅರವಿಂದರು 1904–09 ರ ಅವಧಿಯಲ್ಲಿ ಬರೆದ Transformation ಕವನದ ವಿವರಗಳನ್ನು ಇಲ್ಲಿ ಕಾಣಬಹುದು. ದೇಹ ತ್ಯಾಗದ ನಂತರದಲ್ಲಿ – ಅದು ಸಹಜ ಸಾವು ಎಂದು ಪರಿಗಣಿತವಾಗಿದ್ದರೂ ಅಥವಾ ಈ ದೇಹವನ್ನೇ ಒಂದು ವೈಶ್ವಿಕ ಯಂತ್ರವನ್ನಾಗಿಸಿಕೊಂಡು ಆ ವ್ಯಕ್ತಿಯೇ ವಿಶ್ವಾತ್ಮನಾಗಿ, ಅನಂತತೆಯನ್ನು, ಅಮರತ್ವವನ್ನು ತಲುಪುವ ಸುಸ್ಪಷ್ಟ ಪಥಕ್ಕೆ ಸಾಗುವದನ್ನು ನಿರ್ದೇಶನಗೊಳಿಸುತ್ತಿದೆ. ಭೂಬದುಕಿನ ಎಲ್ಲ ಜೀವ ಜಗತ್ತಿಗೂ ಅದರ ಭೌತಿಕ ಸ್ವರೂಪದ ಸುತ್ತಲೂ ಒಂದು **ಪ್ರಭಾವಲಯ**ವಿರುವದನ್ನು ಎಲ್ಲರೂ ಸಮ್ಮತಿಸಿದ್ದಾರೆ. ಇದರ ಛಾಯಾಗ್ರಹಣವನ್ನೂ ಸಹಿತ **ಕೀರ್ಲಿಯನ್ ಫೋಟೋಗ್ರಾಫಿ** ಮೂಲಕ ಕಾಣಬಹುದಾಗಿದೆ. ಇದು ಮಾನವ–ದೇಹವು ಕ್ರಿಯಾನ್ವಿತವಾಗಿರುವವರೆಗೂ ದೇಹದ ಸುತ್ತಲೂ – ದೇಹಕ್ಕೆ ಅಂಟಿಕೊಳ್ಳದಂತೆ ಹಾಗೂ ತೀರ ದೂರವೂ ಇರದಂತೆ ಸ್ಥಿತವಾಗಿರುತ್ತದೆ. ಆದರೆ ಮರಣದ ನಂತರದಲ್ಲಿ ಈ ಪ್ರಭಾವಲಯ ಇರುವದಿಲ್ಲ. ಇದು ಆ ವ್ಯಕ್ತಿಯ–ಜೀವಿಯ ಮರಣಾನಂತರ ಸಂಭವಿಸುತ್ತದೆಯೋ ಅಥವಾ ಆ ಪ್ರಭಾವಲಯವು ಮಾಯವಾಗುವದೇ 'ಮರಣ'ವೋ ಎನ್ನುವದು ಇನ್ನೂ ಜಿಜ್ಞಾಸೆಯಲ್ಲಿದೆ.

ಈ ಪ್ರಭಾವಲಯದ ಕುರಿತು ಜಗತ್ತಿನಾದ್ಯಂತ ಸಮ್ಮತವಿದೆ. ಇದರ ಸ್ವರೂಪದ ಕುರಿತು ವಿವರಣೆಗಳನ್ನು ಕುರಿತು ಶ್ರೀ ಅರವಿಂದರ ಅಭಿವ್ಯಕ್ತಿಯಲ್ಲಿ ಗಮನಿಸುವುದಾದರೆ, ಇದು 'ವಿಜ್ಞಾನಮಯ ಕೋಶ'ವಾಗಿದೆ. ಅನ್ನ–ಪ್ರಾಣ–ಮನೋ ಕೋಶದ ನಂತರದಲ್ಲಿ ಬರುವ ಈ ವಿಜ್ಞಾನಮಯ ಕೋಶದ ಆಂತರ್ಯವನ್ನು ಮಾನವ ಕುಲ ಇನ್ನೂ ಸಂಶೋಧಿಸಬೇಕಾಗಿದೆ. ಒಂದು ವೇಳೆ ಈ ವಿಜ್ಞಾನಮಯ ಕೋಶದ ಜೊತೆಗೆ, ಮಾನವನ ಭೌತಿಕ ಅಸ್ತಿತ್ವವೂ (ಅನ್ನ–ಪ್ರಾಣ–ಮನ) ಸಮಸ್ಪಂದಿಯಾಗಬಲ್ಲುದಾದರೆ, ಅದು ಅಮರತ್ವಕ್ಕೆ ಹೆಬ್ಬಾಗಿಲು ತೆರೆದಂತೆ.)

## 14. ಜೀವನವು ದಿವ್ಯವಾದರೆ ಮರಣವು ದಿವ್ಯತ್ವ

ನವ–ಜನ್ಮದಲ್ಲಿ ಅವತರಣಗೊಂಡ ಅವನೀಗ ನೆಲೆಸಿ ಇಲ್ಲಿ
ಅವನಾತ್ಮವೀಗ ಸುವಿಶಾಲ ವ್ಯಾಪ್ತದವಕಾಶ ಭೂಮದಲ್ಲಿ,
ಮೃಣ್ಮಯದ ವಸ್ತು–ವಿಷಯಗಳ ಪರಿಧಿ–ಪರಿವೇಷದಿಂದ ಆಗ
ತಾ ಮುಕ್ತಗೊಂಡು ಸೂಕ್ತ ತಾಣದೆಡೆ ತಾನುದಿತಗೊಂಡನೀಗ

ಮತ್ತಿದೋ ಪರಮ ಪರಿಶುದ್ಧ ಮುಕ್ತ ಅತಿಮಾನವಿಕದ ಲೋಕದಲ್ಲಿ
ಗತಿ–ಗಮನಗೊಂಡು ಸ್ಥಾನಗೊಂಡಿಹನು ತಲ್ಲೀನ ಸ್ಪಂದದಲ್ಲಿ
ಪ್ರಾಣ–ಪ್ರಾಣಗಳ ಪವನ ಸಾಂದ್ರತೆಯ ಅಪರೂಪದಂತೆ ಅಲ್ಲಿ
ಸ್ಥಿರ–ಉಷ್ಣದಲ್ಲಿ ಪರಮಾಗ್ನಿ ತೇಜ ಸ್ತರಗೋಳದುಸಿರಿನಲ್ಲಿ.

ಸುತ್ತಿ ಸುಳಿಯುತಲಿ ಒಳಗೊಳಗೆ ಬೆಳೆವ ಷಟ್–ಚಕ್ರ ಸರ್ಪಯೋಗ
ಸ್ವರೂಪಾಂತರದಿ ಪರಿವರ್ತಗೊಂಡ ಆಧಾರ ಭೂಮಿಯೀಗ
ಆ ಭೂಮ ದಿವದ ಸಮಸಮಕೆ ಸ್ಪಂದಗೊಳ್ಳುತಲಿ ಬೆಳಕು–ದೀಪ
ತನ್ನಲ್ಲಿ ತಾನು ಪರಿಪೂರ್ಣಗೊಳಲು ನಿಯತಿಯಲಿ ಕಳೆದು ತಾಪ
ಬುವಿಯಿಂದು ಖಚಿತ ರೂಪಾಂತರಕ್ಕೆ ಅವಳಲ್ಲೆ ಅವಳು ಬೆಳಗಿ
ಮತ್ತದೋ ಸ್ವರ್ಗದಾ–ತೋಷ ಸಮಕೆ ಸ್ಪಂದಿಸುವ ಹಂತವಾಗಿ.

ಇಲ್ಲದಿರೆ ನಾಕ ಅವತರಣಗೊಂಡು ಧರೆಯೆಡೆಗೆ ಅರಸಿ ಬಂದು
ಮರ್ತ್ಯ ಜೀವನದ ಭವದ ಭಾವಕ್ಕೆ ತನ್ನನ್ನು ಒಡ್ಡಿಕೊಂಡು
ಭವ ಭಾವಕೀಗ ದಿವದ ಅನುಭಾವ ಸಮಸ್ಪಂದ ಛಂದವಾಗಿ
ಸಾನಂದ ಘನವು ಸಾಕಾರವಾಗಿ ಪೂರ್ಣತೆಯ ಬೀಜವಾಗಿ.

ಆದರೀಗಿದೋ ಈ ಭವ್ಯ ಬದಲು ಘಟನೆಯದು ಘಟಿಸಲೆನಲು
ಈ ದಿವ್ಯ ದೈವ ಪರಿವರ್ತದಲೆಯು ವಿಸ್ತಾರಗೊಳ್ಳುತಿರಲು
ಮನುಜ ಹೃದಯದಾ ಮಾಯಕದ ಗುಹ್ಯ ಗುಹ್ಯಾತಿ ಆಳದಿಂದ
ಸಾಕಾರಗೊಂಡು ಸಹಕಾರದಲ್ಲಿ ತಾನುದಿತವಾಗಿ ನಿಂದ,

ಈಗವಳು ತನ್ನ ಕವಚವನು ತೊರೆದ ಆ ದೈವದಾತ್ಮವಾಗಿ
ಪದವಿಡುತ ಭವದ ಸಾಮಾನ್ಯ ಭಾವ–ದಟ್ಟಣೆಯ ವಾಸವಾಗಿ
ಅಲ್ಲುದಿತಗೊಂಡು ತಾ ನಿಂದುದೀಗ ಈ ಭಾವ–ದ್ವಾರವನ್ನು
ಜೊತೆಯಲ್ಲಿ ಅದರ ಚಿಂತನದ ಸೂತ್ರಗಳೀಗೊಂದು ದಿಶೆಯ ತಾನು,
ದೇಹಭಾವವನು ಜೊತೆ ಜೀವತೇಜವನು ಬೆಳಗುತಲ್ಲಿ ಇನ್ನು
ಉನ್ನತೋನ್ನತದ ಆಜ್ಞಾಧಿಪತ್ಯದೀ ಪೀಠದಲ್ಲಿ ತಾನು
ಅವಳಿಗೀಗಿಲ್ಲಿ ವಿಧೇಯತೆಯಲ್ಲಿ ಸರ್ವಸ್ವ ಶರಣುಗೊಂಡು
ಕಾಲ, ಹುಟ್ಟು ಜೊತೆ ಲಯದ ಲಯವೀಗ ಸಂಚಲನ ಸತತವಿಂದು.

ಕಾಣ್ಕೆ ಹೊಂದಿರದ ಮರ್ತ್ಯ ಮಾನವನ ಹೃದಯ–ಪಂಜರದಿ ವಾಸಿ
ನಿಂದಿರುವ ಭಾವ–ದೇವನನು ಈಗ ಭವಬಂಧಮುಕ್ತಗೊಳಿಸಿ
ಅವಳ ಆ ಕೃಪೆಯ ದೃಷ್ಟಿ ತಾನದುವು ತಂತಾನೆ ಉದಿತಗೊಂಡು
ಈ ಸರ್ವ ಸೃಷ್ಟಿ ವಿಕಸನದ ಪೂರ್ಣ ಪರಿಪೂರ್ಣ ಪಥದಿ ಇಂದು.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 2 ಪುಟ 486–87)**

---

**ಟಿಪ್ಪಣಿ:**

ಸ್ತರಗೋಳ; ಸ್ಟ್ರಟಾಸ್ಫೇರ್; ಇಲ್ಲಿ ಓಝೋನ್ ಇರುತ್ತದೆ. ಉಷ್ಣತೆಯೂ ಸ್ಥಿರವಾಗಿರುತ್ತದೆ. ಇಲ್ಲಿಯೇ ಜೀವವು ಆಕಾರ ತಳೆಯಲು ಬರುತ್ತದೆ ಎನ್ನುವದನ್ನು ಯೋಗ, ವೇದಾಂತ ಹಾಗೂ ಆಧುನಿಕ ಕಾಸ್ಮಿಕ್ ಬಯಾಲಜಿಯ ಅಧ್ಯಯನದಲ್ಲಿ ಚರ್ಚೆಯಲ್ಲಿ ಇದೆ ಈ ಅನಂತತಾ ಅನಂತ ಯಾನದೊಳಗೆ ತಪ್ಪು–ಸರಿಗಳ ಆಯಾಮ ಉದ್ಭವಿಸುವದಿಲ್ಲ. – 'ಆದರೆ ಒಬ್ಬನು ದೈವತ್ವವನ್ನು "ಪಡೆದಿದ್ದರೆ" ಮಾತ್ರ ಈ ರೀತಿಯ ದರ್ಶನ ಲಭ್ಯವಾಗುತ್ತದೆ ಎನ್ನುವ ಜಿಜ್ಞಾಸೆಗಳು ಇವೆ.' ಈ ಅಭಿಪ್ರಾಯಗಳಲ್ಲಿ, "ಪಡೆದುಕೊಳ್ಳಲು" ಅಲ್ಲಿ ಒಂದು 'ಅಸ್ತಿತ್ವ' ಇರಲೇಬೇಕಲ್ಲವೇ? ಈ 'ಇರುವಿಕೆಯು' ಜನನವೆಂದು ಭಾವಿಸಿದರೆ, ಅದು ತಾತ್ಕಾಲಿಕ(ಮಾಯೆಯಲ್ಲ)–ವಾಗಿರುವದರಿಂದ, ಸದಾ ಪರಿವರ್ತನಗೊಳ್ಳುತ್ತಿರುವದರಿಂದ, ಆ 'ಸ್ಥಿತಿಯ' ಮೊದಲಿನ ಸ್ವರೂಪಕ್ಕೆ ಸಾವು ಬಂದಿದೆ ಎನ್ನುವಂತಿಲ್ಲ.

## 15. ಜೊತೆಜೊತೆಗೆ ಋತವು ಪ್ರಕೃತಿಯಾ ಪದದ

ಆಗಮಿಸಲಿರುವ ಅಭಿನವದ ಭವ್ಯ–ಜೀವನದ ಛಂದಕಿಂದು
ಇದೂ ಸಹಿತದಲಿ ತಾನಿರುವದಲ್ಲಿ ಅಸ್ತಿತ್ವಗೊಳಿಸಿಕೊಂಡು;
ಸಂಘಟಿತ–ಪಂಚ–ಭೂತಗಳ–ಬಂಧ ಅನುಬಂಧ–ಕಾಯವಿಂದು
ಈ ಭೂಮ–ದಿವ್ಯದತಿಚೇತ–ಸತ್ಯಕೀಗಿದೋ ರೂಪವೊಂದು

ಮೂಲ–ಪ್ರಕೃತಿಯಾ ಮಾಬಲದ ಗಡಣದಾ ಜನ್ಮ ತಾಣವೀಗ
ಮೃಣ್ಮಯದ ತಳದಿ ಅನಭಿಜ್ಞವಿರುವ ಆಧಾರವನ್ನು ಈಗ
ಈಗಿದೋ ಋತದ–ಉಪನಿವೇಶದೊಲು ಅದನು ರೂಪಣೆಯಗೊಳಿಸಿ
ಪಾರದರ್ಶಕದ ಪರಿಶುಭ್ರ–ತೋಷ–ಪೋಷಾಕು ನಿಗದಿಗೊಳಿಸಿ

ಅಜ್ಞಾತವನ್ನು ಜ್ಞಾತವಾಗಿಸುತ ನಿಲುವಂಗಿ ದೃಷ್ಟಿಗಿರಿಸಿ
ಅದರ ಮೂಲಕವೇ ಹೊಳೆಹೊಳೆವ ತೇಜ–ಕಾಂತಿಯಲಿ ಬೆಳಕು ಸೂಸಿ
ಋತದ ಉಜ್ಜ್ವಲದ ಅದ್ಭುತಾದ್ಭುತದ ಅಂಗಗಳು ರಂಗುಗೊಂಡು
ಜೊತೆಗಿದೋ  ಋತವು ಪ್ರಕೃತಿಯಾ ಶಿರದ ಮಕುಟಮಣಿ ಸೂರ್ಯನಿಂದು

ಜೊತೆಜೊತೆಗೆ ಋತವು ಪ್ರಕೃತಿಯಾ ಪದದ ಪ್ರತಿಹಂತ ಹಂತಕಾಗಿ
ಪಥದ ದರ್ಶನಕೆ ಮುಂಚೂಣಿಯಲ್ಲಿ ತಾ ಮಾರ್ಗದರ್ಶಿಯಾಗಿ
ಮತ್ತಿದೋ ಋತವು ಅನಿಮೇಷವಾಗಿ ಮುಗಿಲಗಲವಾಗಿ ತೆರೆದು
ಅವಳ ಆ ಆಳ–ಪಾತಾಳದೆಡೆಗೆ ಈ ದೃಷ್ಟಿಪಾತ ಸಂದು

ಲೋಕಾತಿಲೋಕದುದ್ಧಾರಕಾಗಿ ತಾ ಜನಿಸಿ ಬರುವನೀಗ
ಪ್ರಕೃತಿಗಧಿಪುರುಷ ತಾನಾಗಿ ನಿಲುವನೀ ಅತಿಮಾನವನು ಈಗ
ಅವನ ಸಾನಿಧ್ಯವದು ಈಗ ಜಡದ ಈ ಲೋಕವೆಲ್ಲವನ್ನು
ರೂಪಾನುಸ್ಪಂದದಲಿ ನಿತ್ಯ ದೇದೀಪ್ಯಗೊಳಿಸಿ ಅದನು.

ಬುವಿಗೆ ಕವಿದಿರುವ ನಿಶೆಯ ಒಡಲಿನಲಿ ಬೆಳಗಿಸುತ ದೀಪ–ಜ್ಯೋತಿ
ಋತದ–ಜ್ವಾಲೆಗಳನವನೀಗ ಪುಟಿಸಿ ಪುಟಗೊಳಿಸಿ ದಿವ್ಯ ಕಾಂತಿ
ಋತದ ಮಹತಿಯಾ–ನಿಯತಿಯನು ಮೃಣ್ಮಯದ ಮೇಲೆ ನೆಲೆಸಿ;
ಮಾನವನು ಸಹಿತ ಪಡಮರಳಿಕೊಂಡ ಪರಮಾತ್ಮ–ಕರೆಯನರಸಿ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 10 ರೇಣು 4 ಪುಟ 648–9)**

---

**ಟಿಪ್ಪಣಿ:**

Truth ಎನ್ನುವದು ಅವಕಾಶದಲ್ಲಿ ಶಾಶ್ವತವಾಗಿ ಇರುವ ಋತ.

ಅನಿಮೇಷ: ರೆಪ್ಪೆಗಳು ಇರದ ದೇವತೆಗಳಿಗೆ ಅನಿಮೇಷರು ಎನ್ನುತ್ತಾರೆ. ಅವರು ಎಂದಿಗೂ ರೆಪ್ಪೆಗಳನ್ನು ಮುಚ್ಚುವದೇ ಇಲ್ಲ. ಮುಗಿಲಗಲವಾಗಿ ನಮ್ಮ ದೃಷ್ಟಿಯನ್ನು ತೆರೆದರೆ ಯಾವುದೂ ಅಮೂರ್ತವಲ್ಲ ಎಂದು ವೇದವೂ ಹೇಳುತ್ತಿದೆ.

## 16. ನಿನದದಲಿ ತಂತು–ಸ್ವನನ

ಬಲುದೂರ ದೂರದಾ ತೀರದಿಂದ ಗಂಭೀರ ನಾದ–ಮೋದ
ನಿನದದಲಿ ತಂತು–ಸ್ವನನವದು ಬಂತು ಆ ದೈವವಾದ್ಯದಿಂದ
ಸದ್ಬೋಧಗೊಳಿಸೆ ಉದ್ಬೋಧ ಧ್ವನಿಯು ಪೂರ್ಣತೆಯ ಘಳಿಗೆಯೊಳಗೆ
ಆಲಿಸಲು ಸಂದುದಿದು ಮಹತಿಯಿಂದು ಇದು ನಿಯತಿ–ಲಿಖಿತದೊಸಗೆ;

ಏಕಾಂತ ಘನದ ಅನಿಮೇಷಚಕ್ಷುವನ್ನೀಗ ಮತ್ತೆ ನಾನು
ಸುವಿಶಾಲ ವ್ಯಾಪ್ತಗೊಳಿಸಲೆನೆ ತೆರೆದು ಅವಕಾಶವಾಗೆ ತಾನು
ನಿಶ್ಶಬ್ದ ಘನದ ನಿರ್ಮಾಯ ಶಾಂತ ನನ್ನ ಆ–ನಂದ ತೋಷ
ಅನಾವರಣದಲಿ ತೆರೆತೆರೆಯಲೆಂದು ತುಂತುಂಬಿ ಶಾಂತಿ ಘೋಷ

ಪರಮಾತಿ ಪರಮ ಪರಿಶುದ್ಧ ಮತ್ತೆ ಸೂಕ್ಷ್ಮಾತಿಸೂಕ್ಷ್ಮ ಮೌನ
ಎಲ್ಲಿ ತಾನದುವು ಅಸ್ತಿತ್ವವಿಹುದೊ ಅಲ್ಲೀಗ ವಾಸ ತಾನ
ನಿಷ್ಕಂಪವಾಗಿ ತನ್ನದೇ ಘನ–ಸವಿಕಲ್ಪ ಸಮಾಧಿಯಲ್ಲಿ
ತಲ್ಲೀಯಗೊಂಡು ಇಲ್ಲೀಗ ಪರಮ ಭಾವದುತ್ಕರ್ಷದಲ್ಲಿ

ಆ ಪದದ ನೃತ್ಯ ಮಾಧುರ್ಯ ಮತ್ತದುನ್ಮಾದ ತುಂಬು ಪಾದ
ತನ್ಮಯದ ಶಾಂತ ಶಾಂತಿಯಲಿ ಇಂತು ವಿಶ್ರಾಮಗೊಳುವ ಮೋದ
ಅದರ ಸ್ಪಂದವಿದು ಹೃತ್–ಸ್ಪಂದವಾಗಿ ಅನುಸ್ಪಂದಗೊಳುತಲಿಂತು
ಹೃದಯದೇರಿಳಿತ ಮಿಡಿತವದು ಈಗ ತಾನುದಿತಗೊಂಡುದಿಂತು

**(ಶ್ರೀ ಅರವಿಂದರ 'ಸಾವಿತ್ರಿ'; ದಳ 11 ಶಾಶ್ವತದ ಬೆಳಗು ಪುಟ 697)**

# 17. ಓ ಸೂರ್ಯ ನಾದ

ಓ ಸೂರ್ಯ–ನಾದ, ನೀನೂರ್ಧ್ವ‌ಊರ್ಧ್ವಗೊಳಿಸುತಿಹೆ ಸರ್ವವಿಂದು
ಈ ಬುವಿಯ ಆತ್ಮ ಆ ದಿವ್ಯ–ಪರಮ–ಜ್ಯೋತಿಯನು ಪಡೆಯಲೆಂದು,
ಅವತರಣಗೊಳಿಸು ದೇವನನು ಮತ್ತೆ ಪರಿಪೂರ್ಣ ಭಾವವಿಂದು
ಮನುಕುಲದ–ಜೀವ–ಜೀವನವ ಬೆಳಗೆ ಸರ್ವಾಪ್ತವಾಗಿ ನಿಂದು.

ಆಧಾರವಿದುವು ಭೂಮಿ ತಾನೀಗ ಇದು ನನ್ನ ವಾಸ–ಕೋಶ
ಧರ್ಮ–ಕರ್ಮದಲಿ ನಿಯತಿ ಲಿಖಿತದಲಿ ಮತ್ತಿದ್ದೋ ಕಾರ್ಯ–ಕೋಶ
ಇದು ನನ್ನ ಆತ್ಮ–ಜೀವನದ ವನವು ನಿನದದಲಿ ಪುಲಕಗೊಂಡು
ದಿವ್ಯ–ಬೀಜವನು ಉದ್ದೀಪ್ತಗೊಳಿಸೆ ಪರಿಪೂರ್ಣವಾಗಿ ನಿಂದು.

ಮನುಕುಲದ ಅವಧಿಯಲಿ ನಿನ್ನ ಸರ್ವ ಕರ್ಮಗಳು ಪೂರ್ಣವಾಗಿ
ಮೃಣ್ಮಯದ ಮನವು ಚಿನ್ಮಯದ–ಕಾಂತಿಗದು ಮೂಲ ನೆಲೆಯಾಗಿ,
ಮೃಣ್ಮಯದ ಜೀವ ವೃಕ್ಷದೊಲು ಪ್ರಗತಿ ಆ ನಾಕ ಲೋಕದೆಡೆಗೆ,
ಮೃಣ್ಮಯದ ದೇಹ ದಿವ್ಯ–ಡೇರೆಯೊಲು ತಾ ನಿತ್ಯ ದೇವ–ನೆಲೆಗೆ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 10 ನಿರಂತರದ ಬೆಳಗು ಪುಟ 699)**

### ಹೃದ್ಗಗನ ಕಾಂತಿ

ಮೃಣ್ಮಯದ ಮನಕೆ ಚಿನ್ಮಯದ ಜ್ಯೋತಿ ಕೆಲವೊಂದು ಬಾರಿ ಸ್ಪರ್ಶ
ಅದರ ಚಿಂತನದ ತಾರೆ–ಕಿರಣಗಣ ಹೃದ್ಗಗನ ಕಾಂತಿ ಹರ್ಷ
ಕೋಮಲದ ವಿಮಲ ಆನಂದ ಅವಳ ಹೃದಯದಲಿ ಶೋಧ ಗಗನ
ಮತ್ತದೋ ರೆಕ್ಕೆ–ರೆಕ್ಕೆಗಳ ಸೂಸು ಶೋಭಾಯ ಲಹರಿ ತನನ

ಅವಳೆಂದಿಗೂ ತಾ ಪಡೆಯೆ ವಿಫಲಳಿಹ ದರ್ಶನದ ತೋಷವನ್ನು
ಅವಳ ಸ್ವಪ್ನಗಳ ಮಂದ್ರಗೊಳಿಸುತಿಹ ದರ್ಪಣವ ಮೀರಳಿನ್ನು

**(ಶ್ರೀ ಅರವಿಂದರ 'ಸಾವಿತ್ರಿ'; ದಳ 11 ಆ ಅನಂತಾನಂತ ಬೆಳಗು ಪುಟ 689)**

## 18. ಅಭಿಷಿಕ್ತಗೊಂಡ ಅಂಗ–ಪ್ರತ್ಯಂಗ

ಕ್ರಿಯೆ–ಚಲನೆ ಮತ್ತೆ ಪ್ರತಿರೋಧವಿರದ ಭೌತಿಕದ ದ್ರವ್ಯವೀಗ
ತಂದ್ರೆಯಾ ಹಂತ ಜೀವನದ–ಜೀವ ಸ್ವಚಲಿತದಿ ಸ್ಪಂದವೀಗ,
ಮಾನಸವು ಸುಪ್ತ–ಸಂತೃಪ್ತದಲ್ಲಿ ಸ್ಥಿತಗೊಂಡು ತಾನು ಇಲ್ಲಿ
ಈ ಅಚೇತನದ ಜೀವ–ಜೀವನದ ಆಂತರ್ಯವದುವು ಅಲ್ಲಿ.

ಅಭಿಷಿಕ್ತಗೊಂಡ ಅಂಗ–ಪ್ರತ್ಯಂಗಗಳನೀಗ ಹಿಗ್ಗಿಸುತ್ತ
ಜಾಗರಣಗೊಳುವ ಜೀವನದ–ಸ್ಪಂದನುಸ್ಪಂದದಲ್ಲಿ ಇತ್ತ,
ಮಂದದಲಿ ಕುಂದಿ ಸುಂದುವಡೆದಿರುವ ಗತಿರಹಿತ ತಾಣದಿಂದ
ಕಂಪನವ ತಂದು ವಿಕ್ಷೋಭಗೊಳಿಸಿ ಸುಪ್ತಿಯಾ ಹಂತದಿಂದ

**(ಶ್ರೀ ಅರವಿಂದರ 'ಸಾವಿತ್ರಿ'; ದಳ 10 ರೇಣು 2 ಪುಟ 622)**

---

**ಟಿಪ್ಪಣಿ:**

ನಾವು ಸೃಷ್ಟಿಯ–ನಿಸರ್ಗ(Nature)–ಪ್ರಕೃತಿಯ ಉತ್ಕ್ರಾಂತಿ ಕ್ರಮವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ, ಅದರ ತೀರ ಕೆಳಗಿನ ಸ್ತರವು 'ಜಡ (Matter)' ಆಗಿರುವದು ಭಾಸವಾಗುತ್ತದೆ. ಇದನ್ನೇ ಅನ್ನಮಯ ಕೋಶವೆಂದು ಉಪನಿಷತ್ತುಗಳು ಹೇಳಿವೆ. ಆದರೆ ಅದು ಜಡವಲ್ಲ. ಏಕೆಂದರೆ ಇಲ್ಲಿಯೇ ಸಸ್ಯ ಸೃಷ್ಟಿ–ಜೀವೋತ್ಪತ್ತಿಯಾಗುತ್ತಿವೆ. ಅದರಲ್ಲಿ 'ಜೀವನ'ವೆಂದರೆ 'ಪ್ರಾಣ (Life)' ಪ್ರಕಟವಾಗಿದೆ. ಅಲ್ಲಿಗೇ ನಿಲ್ಲದೇ 'ಮನವೂ(Mind)' ಒಡಮೂಡಿದೆ. ಹೀಗಾಗಿ 'ಮನೋವಿಶಿಷ್ಟ ಜೀವಿಯಾಗಿ ಮಾನವನ ಜೀವನವಿದೆ. ಅವನು ಪ್ರಕೃತಿಯ ಪ್ರಯೋಗಾಲಯದಲ್ಲಿ ಇಂದಿನವರೆಗಿನ ಅತಿಶ್ರೇಷ್ಠ ಸೃಷ್ಟಿಯಂತಿರುವನು.'

ಇಂದಿನ 'ವಿಕಸಿತ' ಮಾನವನನ್ನು ನೋಡಿದರೆ ಆತ 'ಮನೋಮಯಃ ಪ್ರಾಣ ಶರೀರ ನೇತಾ' ಎನ್ನುವ ಉಪನಿಷತ್ ವಾಣಿಗೆ ದೃಷ್ಟಾಂತವಾಗಿದ್ದಾನೆ. ಸರ್ವ ಸಾಮಾನ್ಯ ಮಾನವರು 'ಜಡ'ದ–'ಅನ್ನ'ದ ಜಾಡ್ಯ–ಮೌಢ್ಯಗಳಿಗೆ ತುತ್ತಾಗಿ ವಾಸನಾಮಯ 'ಪ್ರಾಣ'ದ ಹೊರ ಸೆಳೆತಗಳ ಸೆಳೆದಾಟಕ್ಕೆ (ವಿಕ್ಷೋಭಕ್ಕೆ) ಸಿಲುಕಿ, ಸಿಕ್ಕಿದತ್ತ ಸೆಳೆಯಲ್ಪಡುತ್ತಿದ್ದರೂ, ಕೆಲವರಾದರೂ ತಮ್ಮ 'ಪ್ರಾಣ–ಶರೀರ'ಗಳನ್ನು

ನೀತಿ–ನಿಯಮಗಳ ಆಚರಣೆಯಿಂದ ನಿಯಂತ್ರಿಸಿಕೊಂಡು, ಅವುಗಳ ನಾಯಕರಾಗಿ, ಸಮಾನ್ಯವಾಗಿ 'ಪ್ರಗತಿ' ಎಂದು ಕರೆಯಲ್ಪಡುತ್ತಿರುವ ಪಥದಲ್ಲಿ ಸಾಗುತ್ತಾರೆ. ಆದರೆ ಇದು ಮಾನವ ಜೀವಿತದ ನಿಜವಾದ ಪ್ರಗತಿಯ ಉನ್ನತಿಯ ತುರೀಯವಾಸ್ಥೆಯೇ? 'ಇಲ್ಲ' ಎನ್ನುತ್ತಾರೆ ಶ್ರೀ ಅರವಿಂದರು. ಮಾನವನು ಬರೀ ಅನ್ನಮಯ–ಪ್ರಾಣಮಯ– ಮನೋಮಯದ ಜೀವಿಯಾಗಿ ಉಳಿಯಲಾರ. ಈ ಸ್ತರಕ್ಕಿಂತಲೂ ಔನ್ನತ್ಯದಲ್ಲಿರುವ 'ವಿಜ್ಞಾನಮಯ' ಮತ್ತು 'ಆನಂದಮಯ' ಕೋಶಗಳಗೆ ಆರೋಹಣ ಮಾಡಬಲ್ಲ. ಇದೇ 'ಅತಿಮಾನವ' ರಹಸ್ಯ. [ಆಧಾರ: ಶ್ರೀ ನವನೀತ ರಾಮಚಂದ್ರರಾಯರ ಲೇಖನ 1972 ಆಗಸ್ಟ್ 15 – (ಶ್ರೀ ಅರವಿಂದರ ಜನ್ಮ ಶತಾಬ್ದಿ)]

## 19. ಅತಿಮಾನವನ ಉದಯ

ಮರ್ತ್ಯ ಮಾನವನ ಅಂತರಂಗದಲಿ ತಾನುದಿತಗೊಂಡು ಬರುವ
ಅತಿಮಾನವನಾಗಲ್ಲಿ ಅವತರಿಸಿ ಚಿನ್ಮಯದ ಬೆಳಕ ತರುವ
ತಾನಡಗಿ ಇರುವ ಉಪದೇವಗಣಕೆ ಜೊತೆಗಲ್ಲಿ ತುಂಬಿ ಛಂದ
ಸಾರೂಪ್ಯಗೊಳಿಸಿ ಸುಸ್ಪಷ್ಟದಲ್ಲಿ ಅವು ಬೆಳಗಲೆಂದು ಬಂಧ

ಇಲ್ಲದಿರೆ ಅವನು ಚಿಜ್ಜ್ಯೋತಿ ದೇವ ಪ್ರಭೆಯಲ್ಲಿ ಮಿಲನಗೊಳುವ
ಮತ್ತೆ ಆ ವಿಶ್ವ–ವಿರಾಟ್–ಶಕ್ತಿಯಾ ಬಲದಲ್ಲಿ ಸ್ಪಂದಗೊಳುವ
ಅವಕಾಶದಲ್ಲಿ ಅವಕಾಶವಾಗಿ ಅನಂತಾನಂತ ವಾಸಿ.
ಹೃದ್ಗುಹೆಯ ಮಧ್ಯ ತಾನಿದ್ದ ಗೂಢ ದೇವತೆಯ ಪ್ರಕಟಗೊಳಿಸಿ

ಹಲವರೀಗಿಲ್ಲಿ ಪಾತ್ರವಾಗಿಹರು ಆ ಮಹಿಮೆ–ಗರಿಮೆಯಿಂದ
ಮತ್ತೆ ಶಾಶ್ವತದ ಪ್ರಜ್ವಲಿತ ಶಕ್ತಿ ಅಧಿಕರಣ ಮೇಳ–ಛಂದ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 11 ನಿರಂತರತೆಯ ಬೆಳಗು ಪುಟ 705)**

ಇದು ಸಹಿತವೀಗ, ಆಗಮಿಸಲಿರುವ ನವಜನುಮ ಪಡೆಯಲಿಹುದು,
ಚೇತನದ–ವಿಶ್ವದಾತೀತ ಚರಮದಾ ಸಂತ್ಯ ದೇಹ ಪಡೆದು,
ಪರಾ–ಪ್ರಕೃತಿಯಾ ಮಾಬಲದ ರಾಶಿ ರಾಶಿಗಳ ತವರು ಸತತ
ಆಧಾರಕಿದ್ದ ಆದ್ಯಂಧಕಾರದಾ ವಲಯವನ್ನು ಸಹಿತ;
ಋತದ–ಸಾಮ್ರಾಜ್ಯದಾ ವ್ಯಾಪ್ತಿಗೊಳಿಸಿ ಶಾಶ್ವತವ ನೆಲೆಸಿ ಸತತ.

ಸಂಘಟಿತ–ಪಂಚ–ಭೂತಗಳ–ಬಂಧ ಅನುಬಂಧ–ಕಾಯವಿಂದು
ಈ ಭೂಮ–ದಿವ್ಯದತಿಚೇತ–ಸತ್ಯಕೀಗಿದೋ ರೂಪವೊಂದು

ಮೂಲ–ಪ್ರಕೃತಿಯಾ ಮಾಬಲದ ಗಡಣದಾ ಜನ್ಮ ತಾಣವೀಗ
ಮೃಣ್ಮಯದ ತಳದಿ ಅನಭಿಜ್ಞವಿರುವ ಆಧಾರವನ್ನು ಈಗ
ಈಗಿದೋ ಋತದ–ಉಪನಿವೇಶದೊಲು ಅದನು ರೂಪಣೆಯಗೊಳಿಸಿ
ಪಾರದರ್ಶಕದ ಪರಿಶುಭ್ರ–ತೋಷ–ಪೋಷಾಕು ನಿಗದಿಗೊಳಿಸಿ

ಅಜ್ಞಾತವನ್ನು ಜ್ಞಾತವಾಗಿಸುತ ನಿಲುವಂಗಿ ದೃಷ್ಟಿಗಿರಿಸಿ
ಅದರ ಮೂಲಕವೇ ಹೊಳೆಹೊಳೆವ ತೇಜ–ಕಾಂತಿಯಲಿ ಬೆಳಕು ಸೂಸಿ
ಋತದ ಉಜ್ಜ್ವಲದ ಅದ್ಭುತಾದ್ಭುತದ ಅಂಗಗಳು ರಂಗುಗೊಂಡು
ಜೊತೆಗಿದೋ ಋತವು ಪ್ರಕೃತಿಯಾ ಶಿರದ ಮಕುಟಮಣಿ ಸೂರ್ಯನಿಂದು

ಜೊತೆಜೊತೆಗೆ ಋತವು ಪ್ರಕೃತಿಯಾ ಪದದ ಪ್ರತಿಹಂತ ಹಂತಕಾಗಿ
ಪಥದ ದರ್ಶನಕೆ ಮುಂಚೂಣಿಯಲ್ಲಿ ತಾ ಮಾರ್ಗದರ್ಶಿಯಾಗಿ
ಮತ್ತಿದೋ ಋತವು ಅನಿಮೇಷವಾಗಿ ಮುಗಿಲಗಲವಾಗಿ ತೆರೆದು
ಅವಳ ಆ ಆಳ–ಪಾತಾಳದೆಡೆಗೆ ಈ ದೃಷ್ಟಿಪಾತ ಸಂದು

ಲೋಕಾತಿಲೋಕದುದ್ಧಾರಕಾಗಿ ತಾ ಜನಿಸಿ ಬರುವನೀಗ
ಪ್ರಕೃತಿಗಧಿಪುರುಷ ತಾನಾಗಿ ನಿಲುವನೀ ಅತಿಮಾನವನು ಈಗ
ಅವನ ಸಾನಿಧ್ಯವದು ಈಗ ಜಡದ ಈ ಲೋಕವೆಲ್ಲವನ್ನು
ರೂಪಾನುಸ್ಪಂದದಲಿ ನಿತ್ಯ ದೇದೀಪ್ಯಗೊಳಿಸಿ ಅದನು.

ಬುವಿಗೆ ಕವಿದಿರುವ ನಿಶೆಯ ಒಡಲಿನಲಿ ಬೆಳಗಿಸುತ ದೀಪ–ಜ್ಯೋತಿ
ಋತದ–ಜ್ವಾಲೆಗಳನವನೀಗ ಪುಟಿಸಿ ಪುಟಗೊಳಿಸಿ ದಿವ್ಯ ಕಾಂತಿ
ಋತದ ಮಹತಿಯಾ–ನಿಯತಿಯನು ಮೃಣ್ಮಯದ ಮೇಲೆ ನೆಲೆಸಿ;
ಮಾನವನು ಸಹಿತ ಪಡಮರಳಿಕೊಂಡ ಪರಮಾತ್ಮ–ಕರೆಯನರಸಿ.

ಗುಪ್ತವಾಗಿದ್ದ ಅವನ ಶಕ್ಯತೆಯ ಚೈತನ್ಯಗೊಳಿಸಿ ಈಗ
ಸುಪ್ತಿಯಲಿ ಅವನ ಹೃದಯದಲಿ ಸ್ಥಿತದ ಆ ಸರ್ವ–ಚೇತಕೀಗ,
ಆಧಾರವೀಗ ಸಾಧಾರಗೊಂಡು ಸಾಕಾರ ಪಡೆದುಕೊಳಲು
ಈ ಪ್ರಕೃತಿ ಸರ್ವ ಸಂರಚನೆಗೊಂಡು ಅದಕಾಗಿ ಉದಿತಗೊಳಲು

ಈಗಿದೋ ತನ್ನ ನೆಲೆಯಾಗಿ ಕಂಡು ಆ ಆತ್ಮಶಕ್ತಿ ತಾನು
ಅನಭಿಜ್ಞ ಜಗವನೀಗಿದೋ ಮತ್ತೆ ಆಧಾರಗೊಳಿಸಿ ತಾನು
ಋತಕಾಗಿ ಸತತ ದೇವನನು ನಿರತ ಆನಂದ–ಪರಮಕಾಗಿ
ಅವನಿದೋ ಈಗ ಆ ಅಭೀಪ್ಸೆಯಾ ಅನುಸ್ಪಂದದಲ್ಲಿ ಭಾಗಿ

ದೈವ ನಿಯತಿಯನು ಅನುಸ್ಪಂದದಲ್ಲಿ ಅರ್ಥಾನುಸ್ಪಂದಗೈದು
ಸರ್ವಾತಿಸರ್ವ ಸರ್ವೋಚ್ಚ ರೂಹು–ಸಲಕರಣೆಯಾಗಿ ನಿಂದು,
ಊರ್ಧ್ವಾತಿ ಊರ್ಧ್ವದಾ ನೆಲೆಯ ಕೃಪೆಯು ದಯೆಯಲ್ಲಿ ಬಾಗಿ ಬಂದು
ನಭದ ಎತ್ತರಕೆ ಮಾನವನು ಇಂದು ತಾನೇರಿ ಬರಲಿ ಎಂದು

ಆದರೂ ಮನುಜ ಹಂಬಲಿಸುತಿಹನು ತನ್ನ ಮಿತಿಯ ಒಳಗೆ
ತಾನೇರಬಲ್ಲ ಹಂತಕ್ಕೆ ಮಾತ್ರ ತಲುಪಲೆನೆ ತನ್ನ ಮಿತಿಗೆ

ಚೈತನ್ಯವಿದುವು ಸರ್ವಸ್ವವನ್ನು ತಾನೀಗ ಕಾಣಲೆನಲು
ಅಗ್ನಿಮಯಕೋಶದನಿಮೇಷ ದೃಷ್ಟಿಯಲಿ ಸತತ ದೃಷ್ಟಗೊಳಲು
ಜೊತೆಗಿದೋ ದ್ರವ್ಯದಗ್ನಿಮಯಕೋಶ ಸಾಕಾರಗೊಳ್ಳುತೀಗ
ಚೈತನ್ಯರೂಪದಾಯಾಮದಲ್ಲಿ ವಿಕಸನದ ನಿಯತಿ ಇರಲು

**(ಶ್ರೀ ಅರವಿಂದರ 'ಸಾವಿತ್ರಿ'; ದಳ 11 ಶಾಶ್ವತದ ಬೆಳಗು ಪುಟ 709)**
**– ಪುಟ್ಟು ಕುಲಕರ್ಣಿ**

---

**ಟಿಪ್ಪಣಿ:**

Matter ಎನ್ನುವದನ್ನು ಅಗ್ನಿಮಯಕೋಶ ಎಂದು ಉಪನಿಷತ್ತು ಹೇಳುತ್ತದೆ. Matter ಎಂದರೆ ಕೇವಲ 'ಜಡ' ಅಲ್ಲ.

ಅನಿಮೇಷ ದೃಷ್ಟಿ: ರೆಪ್ಪೆಗಳು ಇರದ/ಸದಾ ತೆರೆದುಕೊಂಡೇ ಇರುವ ನಿಹಿತಗೊಂಡ ಆ ದಿವ್ಯತ್ವದಭಿಜ್ಞಾನದಲಿ ಪ್ರಕೃತಿ ತಾನು.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 11 ಶಾಶ್ವತದ ಬೆಳಗು ಪುಟ 708/9)**

Truth ಎನ್ನುವದು ಅವಕಾಶದಲ್ಲಿ ಶಾಶ್ವತವಾಗಿ ಇರುವ ಋತ.

ಅನಿಮೇಷ: ರೆಪ್ಪೆಗಳು ಇರದ ದೇವತೆಗಳಿಗೆ ಅನಿಮೇಷರು ಎನ್ನುತ್ತಾರೆ. ಅವರು ಎಂದಿಗೂ ರೆಪ್ಪೆಗಳನ್ನು ಮುಚ್ಚುವದೇ ಇಲ್ಲ. ಮುಗಿಲಗಲವಾಗಿ ನಮ್ಮ ದೃಷ್ಟಿಯನ್ನು ತೆರೆದರೆ ಯಾವುದೂ ಅಮೂರ್ತವಲ್ಲ ಎಂದು ವೇದವೂ ಹೇಳುತ್ತಿದೆ.

## 20. ಇಂತಿದೋ ಭವವು ಶಿವಮಯವೆ ಆಗಿ

ಇಂತಿದೋ ಭವವು ಶಿವಮಯವೆ ಆಗಿ ತೆರೆತೆರೆದುಕೊಂಡು ನಿಂದು
ಮತ್ತಿದೋ ಸರ್ವ–ಸಾಮಾನ್ಯ ಭಾವ ಅನುಭಾವ ಹಂತಕಿಂದು
ಸುವಿಶಾಲ ವ್ಯಾಪ್ತ ಉನ್ನಯನಕೇರಿ ಸರ್ವಾಪ್ತ ಛಂದವಾಗಿ
ಸರ್ವಾತಿಸರ್ವ ಕರ್ಮ–ಲೀಲೆಗಳು ಕಾಂತಿಯಲಿ ತೊಳಗಿ ಮಿನುಗಿ

ಆ ಪರಮಭೂಮ ಪರಮಾತ್ಮ ಜ್ಯೋತಿ ಹೊಂಗಿರಣ ಬೆಳಗಿ ಬೆಳಗಿ
ಭವದ ಸರ್ವಸ್ವ ವಸ್ತು–ವಿಷಯದಲಿ ಮಂಗಳದ ಮಿಲನವಾಗಿ

ಆತ್ಮಜ್ಞಾನದಲಿ ಸಹಜ ಉಪಲಬ್ಧ ಚಿನ್ಮಯದ ಕಿರಣ–ಹಸ್ತ
ಭಾವಾನುಭಾವದುತ್ತುಂಗ ತಾಣಗಳನೀಗ ಸ್ಪರ್ಶಿಸುತ್ತ,
ಶ್ರುತಿ–ಪ್ರಕಾಶವದು ಪ್ರಜ್ವಲನದಲ್ಲಿ ಉದ್ದೀಪಗೊಂಡು ಈಗ
ಭಾವಾನುಭಾವದಂತರಾಳಗಳಲೀಗ ಸಂಚಲನ ರಾಗ;

ಸಂತ್ಯ ತಾನದುವು ಅವುಗಳಾ ಹೃದಯ ಸ್ಪಂದನದ ಮಿಡಿತವಾಗಿ
ಮುಂಚೂಣಿಯಲ್ಲಿ ಮಾರ್ಗದರ್ಶಕನ ಪಥದಲ್ಲಿ ನಿಗದಿಯಾಗಿ,
ಋತವೀಗ ಸತತ ಶಾಸನದ ಬಂಧದನುಬಂಧ ನಿಯತಿಯಾಗಿ
ಅವುಗಳಾ ಕರ್ಮ, ವಾಣಿಗಿದೊ ಮತ್ತೆ ಚಿಂತನಕೆ ಸಹಿತವಾಗಿ,

ತಮ್ಮಲ್ಲಿ ತಾವು ಅನುಭಾವದಲ್ಲಿ ಸ್ಪಂದಿಸುತ ಊರ್ಧ್ವದೆಡೆಗೆ
ಎತ್ತರೆತ್ತರಕೆ ಏರುತಲಿ ಈಗ ಗಗನ–ಮಂಡಲದ ಕಡೆಗೆ
ದೇವಾನುದೇವಗಣಕಿಂತ ಕೊಂಚ ಕೆಳ ಹಂತದಲ್ಲಿ ನಿಂದು
ಆಧಾರವೀಗ ಸಾವಿರದ ತಾಣದಂಚಿನೆಡೆ ತಲುಪಿತಿಂದು.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 11 ರೇಣು ಅಂತ್ಯ ತಾನಿರದ ಪಠ್ಯ, ಪುಟ 718)**

---

**ಟಿಪ್ಪಣಿ:**

ಋತ–ಸಂತ್ಯ–ಸತ್ಯ–ಗಾಯತ್ರಿ–ಸಾವಿತ್ರಿ–ಸರಸ್ವತೀ ಇವು ಹಂತಗಳು. ಚಕ್ರಾಕಾರವಾಗಿ, ಗಣಪತಿ ಮಂಡಳದ ಆಕೃತಿಯಲ್ಲಿ ರೂಹು ತಳೆಯುತ್ತವೆ.

ಸಂತ್ಯ ಎಂದರೆ ಸತ್ಯದ ಛಂದಃಸ್ವರೂಪ. ಋತವು ಅನುಭವಕ್ಕೆ ಬಂದಲ್ಲಿ ಅದು ಸತ್ಯ. ದೇಹ ಸತ್ಯ. ಋತ ಆತ್ಮ.

## 21. ವೈರಾಜ್ಯ ವ್ಯಾಪ್ತಿಯಲ್ಲಿ

ದೇವನಾ ಕೃಪೆಯ ಆ ನೀಲ–ಮೇಲು–ಭಾವಣಿಯು ತಾನು ಇರಲು
ನಮ್ಮ ಜೀವಗಳಿಗೀಗ ತಾನು ಆಸರೆಯ ರಕ್ಷೆ ಕೊಡಲು
ಹೃದಯದುಲ್ಲಾಸದುದ್ಘೋಷದೊಳಗೆ ಆ ಪಕ್ಷಿ–ಕುಕಿಲು ಬಳಗ
ಗರಿಯ ಗರಿಮೆಯಲಿ ಕವಿಕುಲವು ಉಲಿಯೆ ತುಂತುಂಬಿ ತನಿಯ ಬೆಳಗ

ನಾವೆಲ್ಲಿ ರಾಜ–ರಾಣಿಯರೆ ಆಗಿ ಗೌರವದಿ ನೆಲೆಸುವಲ್ಲಿ
ಈ ಬುವಿಯ ಮೇಲೆ ನಮ್ಮ ಈ ಮಿತ್ರ–ಮಂಡಳಿಯ ಗೋಷ್ಠಿಯಲ್ಲಿ
ಏಕಾಂತ ಶಾಂತ ನಮ್ಮ ಈ ಕ್ಷೇತ್ರ ವೈರಾಜ್ಯ ವ್ಯಾಪ್ತಿಯಲ್ಲಿ

ನಮ್ಮಾತ್ಮ ಮಾತ್ರ ಮೃತ್ಯುವಿನ ತಮದ ಪಾಶವನು ಹಿಂದೆ ಬಿಟ್ಟು
ಆತ್ಮಸಾಮರ್ಥ್ಯ ದರ್ಶನದ ನೈಜ ವಿಕಸನದ ಬದಲು ಪಟ್ಟು
ಲೋಕ–ಲೋಕಗಳ ಘನಪ್ರತೀಕದಾ ತೇಜದಲಿ ಬೆಳಗಿ ಹೊಳೆದು
ವಸ್ತು–ವಿಷಯಗಳ ಅದ್ಭುತದ ಶೃಂಗ–ಸಮ್ಮೇಳ ಜೀವ ನೇದು

ಸೀಮೆ ತಾನಿರದ, ಮುಕ್ತಿಧಾಮದಾ ಪರಮಾತ್ಮ ನೆಲೆಯ ಧಾಮ
ಮತ್ತಿದೋ ಇಲ್ಲಿ ಆ ದ್ವಾರದಲ್ಲಿ ನೆಲೆ ನಿಲಲು ಸ್ಪಂದ ಭೂಮ

ಪಾರ್ಥಜೀವನದ ಮನುಜನಾತ್ಮವನು ಆ ಪರಮ–ಸತ್ಯದೆಡೆಗೆ
ನೇತೃತ್ವ ವಹಿಸೆ ಊರ್ಧ್ವದೆಡೆ ಪಯಣ ಇದೋ ತಾವಿನೆಡೆ ಸಾಗೆ,
ಮರ್ತ್ಯಜೀವನದ ಸ್ಥೂಲನಕ್ಷೆಯನು ಪರಿಕಿಸುತ ರೇಖೆಗೊಳಿಸೆ
ಅಮೃತತ್ವ ನೆಲೆಯ ಪರಿಕಲ್ಪನೀಯ ಸಂಕೇತದಂಶವಿರಿಸೆ,
ಪರಮದೇವನಾ ಪ್ರತಿಮೂರ್ತಿಯಂತೆ ಆಕೃತಿಯನಿತ್ತು ಅಲ್ಲಿ
ದೈವಿಕದ ಭಾವಕತಿ ಸನಿಹದಲ್ಲಿ ಭಾವಾಭಿಭೂತದಲ್ಲಿ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 12 ಭರತವಾಕ್ಯ ಪುಟ 718)**

ಸಂಲಗ್ನಗೊಂಡ ನಮ್ಮ ಹೆಜ್ಜೆಗಳು ಸ್ವರ್ಣಿಮದ ಪಥದಿ ಸತತ
ಆರೋಹಗೊಳಲು, ನವನವೋನ್ಮೇಷ ಜೀವನದ ಉಗಮ ಖಚಿತ,
ನಂದದೆಂದಿಗೂ ಛಂದ–ಸಾನಂದ ಚಿದ್ಘನದ ಬಂಧ – ಜೀವ
ಮಿನುಗಿ ಮಿಂಚುವಾ ಕ್ಷಣಿಕ ತೋಷಕ್ಕೆ ತಾನಿರದು ಆಳ–ಭಾವ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 12 ಉಪಸಂಹಾರ ಪುಟ 720)**

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

### ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 6ನೇ ನವಂಬರ್ 2022 ಭಾನುವಾರ ಬೆಳಿಗ್ಗೆ 10.30 ಗಂಟೆಯಿಂದ 11.30ರ ವರೆಗೆ ಶ್ರೀ ಭರತ್ ರಾಮ್ (ಆರೋ ಯೂತ್ ಸದಸ್ಯರು) ಇವರು "ಈಶ–ಉಪನಿಷತ್: ಶ್ರೀ ಅರವಿಂದರ ಬೆಳಕಿನಲ್ಲಿ" ಎಂಬ ವಿಷಯದಲ್ಲಿ ಉಪನ್ಯಾಸ ನೀಡಿದರು. ಈ ಸರಣಿ ಉಪನ್ಯಾಸ ಕಾರ್ಯಕ್ರಮ ಇನ್ನು ಮುಂದೆ ಪ್ರತಿ ಶನಿವಾರ ಬೆಳಿಗ್ಗೆ 10.30 ರಿಂದ 11.30ರ ವರೆಗೆ ನಡೆಯುವುದು.

ದಿನಾಂಕ 5ನೇ ಡಿಸೆಂಬರ್ 2022ರ ಸೋಮವಾರ "ಶ್ರೀ ಅರವಿಂದರ ಮಹಾಸಮಾಧಿ"ಯ ದಿನ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.00 ಗಂಟೆಯಿಂದ 7.30ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಸಂಜೆ 5.00 ರಿಂದ 6.30 ಗಂಟೆಯವರೆಗೆ ಡಾ॥ ಟಿ. ರಾಮಕೃಷ್ಣ, ನಿರ್ದೇಶಕರು, (ಶ್ರೀಅರವಿಂದೋ ಸೆಂಟರ್ ಫಾರ್ ಎಜುಕೇಷನ್ ಇನ್ ಹ್ಯೂಮನ್ ವ್ಯಾಲ್ಯೂಸ್, ಕಲ್ಯಾಣ ನಗರ, ಬೆಂಗಳೂರು) ಇವರು "Sri Aurobindo on Himself..." ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಆಸಕ್ತರು ಭಾಗವಹಿಸಿದ್ದರು.

ದಿನಾಂಕ 17ನೇ ಡಿಸೆಂಬರ್ 2022ರ ಶನಿವಾರ ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯ ವಾರ್ಷಿಕ ಕ್ರೀಡಾ ಕೂಟ ವಿಜೃಂಭಣೆಯಿಂದ ನಡೆಯಿತು. ಎರಡು ಹಂತಗಳಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಪೂರ್ವಾಹ್ನ 9.30 ರಿಂದ 11.30ರ ವರೆಗೆ ಪೂರ್ವ ಪ್ರಾಥಮಿಕ ಮತ್ತು ಒಂದರಿಂದ ನಾಲ್ಕನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಕ್ರೀಡಾ ಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ವಹಿಸಿದರು. ಮತ್ತೆ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಆಯೋಜಿಸಿದ ಕ್ರೀಡಾ ಕೂಟದಲ್ಲಿ ಅಪರಾಹ್ನ 3.30 ಕ್ಕೆ ಆರಂಭವಾದ ಕಾರ್ಯಕ್ರಮಕ್ಕೆ ಪದ್ಮಶ್ರೀ ಪ್ರಶಸ್ತಿ ವಿಜೇತ ಶ್ರೀಯುತ ಕೆ.ವೈ. ವೆಂಕಟೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಿದರು. ಧ್ವಜ ಕವಾಯತಿನೊಂದಿಗೆ ಆರಂಭವಾದ ಸಮಾರಂಭ ಕ್ರೀಡೆ, ಯೋಗ, ಕರಾಟೆ, ವಿವಿಧ ದೇಶಗಳ ನೃತ್ಯ, ಸ್ಕೈಕ್ಲಿಂಗ್ ಪ್ರದರ್ಶನಗಳೊಂದಿಗೆ ನಯನ ಮನೋಹರವಾಗಿತ್ತು. ಕ್ರೀಡಾ ಕೂಟದಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ವೈಯಕ್ತಿಕ ಮತ್ತು ಹೌಸ್ ಚಾಂಪಿಯನ್ ಟ್ರೋಫಿಗಳನ್ನು ಕೊಟ್ಟು ಗೌರವಿಸಲಾಯಿತು. ಶ್ರೀಮತಿ ಶಾರದಾಂಬ ಸಿ.ಆರ್., ಪ್ರಾಂಶುಪಾಲರು ಶಾಲಾ ವಾರ್ಷಿಕ ವರದಿಯನ್ನು ಮಂಡಿಸಿದರು. ಸಮಾರಂಭದಲ್ಲಿ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಫೋಟೋ: ಇಮೇಜಿಂಗ್ ಸಾವಿತ್ರಿ

ಆತ್ಮಸಂಭೂತಸೃಷ್ಟಿಯಾ ಓಜ ಶಿಖರಾಗ್ರದೆಡೆಗಳಲ್ಲಿ,
ರೂಪ–ರೂಪಗಳ ಪರಿವರ್ತನೀಯ ಗತಿ ಅನುಭಾವದಾಳದಲ್ಲಿ,
ಉಲ್ಲಸಿತ ವಿಶ್ವ–ಸಂಕಲ್ಪ–ಕರ್ಮ ಉಷೆಯೊಡನೆ ಉದಿತಗೊಂಡು
ಜಗದ ಗತಿ–ಸ್ಥಿತಿಯ ರೂಪ–ವಿನ್ಯಾಸಗೊಳಿಸುತಲಿ ಮತ್ತೆ ಅಂದು
ನಿತ್ಯ ನೂತನದ ನವನವೀನತೆಯ ಭಾವವನು ಅವಗೆ ತಂದು
ಪ್ರಕೃತಿಯಲಿ ನಿಂದ, ಆ ದೇವನಿಂದ ಪರಿಪೂರ್ಣ ಪ್ರಕೃತಿಯಿಂದು.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 36–37)**

**RNI No. 22511/1971**
No. of Pages **72 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

ಆದಿ–ಮೂಲದಾ ಪರಂಜ್ಯೋತಿಯಾ ವೈರಾಜ್ಯದಾತ್ಮದಿಂದ
ಅವತರಣಗೊಂಡು ಧುಮ್ಮಿಕ್ಕಿ ಬಂದು ಈ ತೆರದಿ ತೋಷದಿಂದ
ಈಥರದ ಧಾರೆ ಅತಿಸೂಕ್ಷ್ಮ ಸಲಿಲ ಚಿಂತನದ ಸರಣಿ ಮಾಲೆ
ಮೃಣ್ಮಯದ ಲೋಕ ಸೃಷ್ಟಿಗಿದು ತನ್ನ ಪರಿವರ್ತಗೊಳಿಸೆ, ಲೀಲೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 10 ಪುಟ 243)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.